ಸಂಗಮೇಶ ಬಿರಾದಾರವರ ಸಾಹಿತ್ಯ ಮತ್ತು ಸಂಶೋಧನೆಗಳ ಅವಲೋಕನ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಿಪಡಿಸಿದ ಸಂಶೋದನ ನಿಬಂಧ

ನೋಂದಣಿ ಸಂಖ್ಯೆ :
161301030065

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ - ೫೮೩ ೨೭೬

೨೦೧೬-೧೭

ಸಂಗಮೇಶ ಬಿರಾದಾರವರ ಸಾಹಿತ್ಯ ಮತ್ತು ಸಂಶೋಧನೆಗಳ ಅವಲೋಕನ

ಕನ್ನಡ ವಿಶ್ವವಿದ್ಯಾಲಯ, ಹಂಪಿ.
ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ
ಸಾದರಪಡಿಸಿದ ಸಂಶೋಧನ ನಿಬಂಧ

ನೊಂದಣಿ ಸಂಖ್ಯೆ :
161301030065

ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೬-೧೭

• ಪರಿವಿಡಿ •

ಅಧ್ಯಾಯ : ೧

ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ – ೧
ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಮತ್ತು ವೈಧಾನಿಕತೆ

೧.೧ ಅಧ್ಯಯನದ ಉದ್ದೇಶ :

ಎರಡು ಸಾವಿರ ವರ್ಷಗಳಷ್ಟು ಇತಿಹಾಸವುಳ್ಳ ಕನ್ನಡ ಸಾಹಿತ್ಯವು ಹಲವಾರು ಕವಿಗಳನ್ನೂ, ವಿಮರ್ಶಕರನ್ನೂ, ಸಂಶೋಧಕರನ್ನೂ ತನ್ನ ಒಡಲೊಳಗೆ ಗರ್ಭಿಸಿಕೊಂಡು ಸಾಹಿತ್ಯಲೋಕವನ್ನು ಬೆಳಗುತ್ತಿದೆ.

ಅನುಭವ ಅಕ್ಷರ ರೂಪಪಡೆದು ಸಾಹಿತ್ಯವೆನ್ನುವ ಒಂದು ಅಭಿವ್ಯಕ್ತಿ ಕ್ರಿಯೆಯು ಅಧ್ಯಯನ ಮಾಡುವ ವ್ಯಕ್ತಿಗೆ ಚಿಕಿತ್ಸಕ ಬುದ್ಧಿಯನ್ನು ಕೊಡುವುದಲ್ಲದೆ ಅದನ್ನು ಪ್ರಯೋಗಕ್ಕೆ ಒಳಪಡಿಸುವ ಮತ್ತು ಜ್ಞಾನದ ಬಲದಿಂದ ತೂಗಿ ನೋಡುವ ಗುಣವನ್ನು ಬೆಳೆಸುತ್ತದೆ.

ಡಾ. ಸಂಗಮೇಶ ಬಿರಾದಾರವರು ಸೃಜನ ಮತ್ತು ಸೃಜನೇತರ ಸಾಹಿತ್ಯದಲ್ಲಿ ಅಪಾರವಾದ ಕಾರ್ಯವನ್ನು ಮಾಡಿದ್ದಾರೆ. ಇದು ಕಡಿಮೆ ಅವಧಿಯಲ್ಲಿ ಈ ಸಂಶೋಧನಾ ಕಾರ್ಯವನ್ನು ಕೈಗೊಳ್ಳಬೇಕಾಗಿರುವುದರಿಂದ ಅವರ ಎಲ್ಲ ಕೃತಿಗಳನ್ನು ಅವಲೋಕನ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕೆಲವು ಕೃತಿಗಳ ಅವಲೋಕನವನ್ನು ಮಾಡುವ ಉದ್ದೇಶವನ್ನು ಹೊಂದಲಾಗಿದೆ.

೧.೨ ಅಧ್ಯಯನದ ಸ್ವರೂಪ :

ಮೊದಲನೆಯ ಅಧ್ಯಾಯದಲ್ಲಿ : ಡಾ. ಸಂಗಮೇಶ ಬಿರಾದಾರವರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ನಿವೃತ್ತಿಯ ನಂತರವೂ ಸಂಪಾದನೆ, ಸಂಶೋಧನೆ ಮತ್ತು ವಿಮರ್ಶಾ ಕ್ಷೇತ್ರಗಳಲ್ಲಿ ಹೆಸರು ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯಕ್ಕೆ 'ವೈಯಾಕರಣಿ ಎರಡನೇ ನಾಗವರ್ಮ' ಎಂಬ ಸಂಶೋಧನಾ ಪ್ರಬಂಧದಲ್ಲಿ ನಾಗವರ್ಮನ ಕಾಲದ ಬಗ್ಗೆ ನಿಖರವಾಗಿ ಮತ್ತು ಅವನ ಸ್ಥಳನಾಮವನ್ನು ತಿಳಿಸಿರುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಅವರ ಸೃಜನಶೀಲ ಮತ್ತು ಸೃಜನೇತರ ಸಾಹಿತ್ಯವನ್ನು ಅವಲೋಕನ ಮಾಡುವುದಾಗಿದೆ.

ಎರಡನೆಯ ಅಧ್ಯಾಯದಲ್ಲಿ : ಡಾ. ಸಂಗಮೇಶ ಬಿರಾದಾರವರ ಬದುಕು ಮತ್ತು ಸಾಹಿತ್ಯದ ಪ್ರೇರಣೆಗಳನ್ನು ಅರಿಯಲು ಪ್ರಯತ್ನಿಸಲಾಗಿದೆ. ಸಾಮಾನ್ಯ ಹಳ್ಳಿಯಲ್ಲಿ ಜನಿಸಿದ ಇವರು ಅವಿರತ ಪ್ರಯತ್ನ ಮತ್ತು ಬುದ್ಧಿಶಕ್ತಿಯ ಬಲದಿಂದ ಕನ್ನಡ ಮತ್ತು ಸಂಸ್ಕೃತ ಎರಡೂ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದಾರೆ. ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಜಿಯವರ ಒಡನಾಟದಿಂದ, ಪೂಜ್ಯ ಸಿದ್ಧೇಶ್ವರ ಶ್ರೀಗಳ ಸಂಪರ್ಕದಿಂದ ಆಧ್ಯಾತ್ಮಿಕ ವಲಯದಲ್ಲಿ ಮಠಮಾನ್ಯಗಳ ಸೇವೆ ಹಾಗೂ ಮಠಾಧೀಶರ, ಮಹಾರಾಜರ (ಇಂಚಗೇರಿ ಸಂಪ್ರದಾಯ)ದ ಜೀವನ ಚರಿತ್ರೆ ಮತ್ತು ಭಾಷಾ ಸೂಕ್ಷ್ಮತೆಯನ್ನು ಅರಿಯಲು ಸಹಾಯಕವಾದ, ವ್ಯಾಕರಣ ಶಾಸ್ತ್ರ ಇವರನ್ನು ಸಾಹಿತ್ಯ ಕ್ಷೇತ್ರಕ್ಕೆ ಪ್ರೇರಣೆ ಮಾಡಿದನ್ನು ಅರಿಯುವುದಾಗಿದೆ.

ಮೂರನೆಯ ಅಧ್ಯಾಯದಲ್ಲಿ : ಡಾ. ಸಂಗಮೇಶ ಬಿರಾದಾರವರ ಸೃಜನ ಸಾಹಿತ್ಯ ಮತ್ತು ಸೃಜನೇತರ ಸಾಹಿತ್ಯವನ್ನು ಅವಲೋಕನ ಮಾಡುವುದಾಗಿದೆ. ಸಾಹಿತ್ಯ ಸೃಷ್ಟಿ ಎನ್ನುವಂತದು ನಿಂತ ನೀರಲ್ಲ, ಸದಾ ಹರಿಯುವ ನದಿ. ಸಾಹಿತ್ಯ ರಚನೆಯಲ್ಲಿ ವ್ಯಕ್ತಿ ಆಸಕ್ತಿ ತೋರುವುದರಿಂದ ಮನುಷ್ಯ ದೇವರ ಸಂಬಂಧ, ಮನುಷ್ಯ ಭಾವನೆಗಳು, ಆಸೆಗಳು ಮತ್ತು ಕನಸುಗಳು ಎಲ್ಲವೂ ಇದರ ವಸ್ತುವಾಗುತ್ತದೆ ಹಾಗೂ ಡಾ. ಸಂಗಮೇಶ ಬಿರಾದಾರವರ ಸೃಜನಶೀಲ ಸಾಹಿತ್ಯದ ಹಾಗೂ ಸೃಜನೇತರ ಸಾಹಿತ್ಯವಾದ ಸಂಶೋಧನೆ, ಸಂಪಾದನೆ, ವಿಮರ್ಶೆ ಮಾರ್ಗದರ್ಶನ ಮಾಡಿದ ಕೃತಿಗಳನ್ನು ಅವಲೋಕಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ : ಡಾ. ಸಂಗಮೇಶ ಬಿರಾದಾರವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ **'ವೈಯಾಕರಣ ಎರಡನೆಯ ನಾಗವರ್ಮ'** ಎಂಬ ಸಂಶೋಧನಾ ಪ್ರಬಂಧ, **'ಒರೆಗಲ್ಲು', 'ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಮಹಾಸಂಸ್ಥಾನ ಮಠ, ಸಿದ್ಧಗಿರಿ',** ಮತ್ತು **'ಒಳಗಣ್ಣು'** ಕೃತಿಯನ್ನು ಹಾಗೂ ಯುವ ಬರಹಗಾರರಿಗೆ ನವೋದಯ ಸಾಹಿತ್ಯವನ್ನು ಸಂಕ್ಷಿಪ್ತವಾಗಿ ಪರಿಚಯಿಸುವ **'ಕನ್ನಡ ನವೋದಯ ಛಂದಸ್ಸು'** ಕೃತಿಯನ್ನು ಅವಲೋಕನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ : ಡಾ. ಸಂಗಮೇಶ ಬಿರಾದಾರವರು ತಮ್ಮ ಅಧ್ಯಾಪನ ವೃತ್ತಿಯೊಂದಿಗೆ ಪ್ರವೃತ್ತಿಯಾಗಿ ವ್ಯಾಕರಣವನ್ನು ಉಸಿರನ್ನಾಗಿಸಿಕೊಂಡ ಅವರ ಸಾಹಿತ್ಯ ಕೃತಿ, ಸಂಶೋಧನಾ ಕಾರ್ಯ ಸಾಗಿಬಂದ ಜೀವನ ಪಥದ ಅವಲೋಕನ ಮಾಡಲಾಗಿದೆ.

೧.೩ ಅಧ್ಯಯನದ ವ್ಯಾಪ್ತಿ :

ಡಾ. ಸಂಗಮೇಶ ಬಿರಾದಾರವರದು ತುಂಬ ಸರಳವಾದ ಬದುಕು. ಪೂಜ್ಯ ಸಿದ್ಧೇಶ್ವರ ಸ್ವಾಮಿಜಿಯವರ ಸಮೀಪದ ಒಡನಾಡ ಅವರ ಹಿರಿಯ ಸಹಪಾಟಿಯು

ಆಗಿರುವದರಿಂದ ಅವರಲ್ಲಿ ಎಂದು ಅಹಂಮಿನ ಭಾವ ಸುಳಿದಿಲ್ಲ. 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬಂತೆ ಸದಾ ಎಲ್ಲರಿಗೂ ಒಳ್ಳೆಯದನ್ನೂ ಬಯಸುತ್ತಾ ಸಹಾಯ ಹಸ್ತ ನೀಡುತ್ತಾರೆ. 'ನಿವೃತ್ತಿ ವೃತ್ತಿಗೆ ಹೊರತು ಪ್ರವೃತ್ತಿಗಲ್ಲ' ಎಂಬಂತೆ ಇರುವ ಇವರು ಸದಾ ಓದುವ, ಬರೆಯುವ, ಸಾಂಸಾರಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಹಸನ್ಮುಖಿಯಾಗಿ ತೊಡಗಿಕೊಳ್ಳುವವರಾಗಿದ್ದಾರೆ. ಅವರು ಹಲವಾರು ಕೃತಿಗಳ ರಚನೆ ಮತ್ತು ಸಂಶೋಧನಾ ಕಾರ್ಯದಲ್ಲಿ ತೊಡಗಿದ್ದರು ಕಡಿಮೆ ಅವಧಿಯಲ್ಲಿ ಈ ಸಂಶೋಧನಾ ನಿಬಂಧದ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದ್ದರಿಂದ ಎಲ್ಲ ಕೃತಿಗಳ ಅವಲೋಕನ ಮಾಡಲಾಗದಿದ್ದರೂ ಕೆಲವು ಕೃತಿಗಳ ಅವಲೋಕನ ಮಾಡಲಾಗಿದೆ. ಈ ಅಧ್ಯಯನದಿಂದ ಸ್ಫೂರ್ತಿಗೊಂಡು ಡಾ. ಸಂಗಮೇಶ ಬಿರಾದಾರವರ ಸಂಶೋಧನೆ ಮತ್ತು ಸಾಹಿತ್ಯ ಕೃತಿಗಳು ಕನ್ನಡ ಸಾರಸ್ವತಲೋಕಕ್ಕೆ ದೊರಕುವಂತಾಗಲಿ ಎಂದು ಆಶಿಸುತ್ತೇನೆ.

೧.೪ ಅಧ್ಯಯನದ ವೈಧಾನಿಕತೆ :

ಡಾ. ಸಂಗಮೇಶ ಬಿರಾದಾರವರ ಸಾಹಿತ್ಯ ಮತ್ತು ಸಂಶೋಧನೆಗಳ ಅವಲೋಕನವನ್ನು ವಿಶ್ಲೇಷನಾತ್ಮಕ ತೌಲನಿಕ ವಿಧಾನದಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

❖❖❖❖❖

ಅಧ್ಯಾಯ : ೨

ಡಾ. ಸಂಗಮೇಶ ಬಿರಾದಾರವರ ಬದುಕು ಮತ್ತು ಸಾಹಿತ್ಯದ ಪ್ರೇರಣೆಗಳು



ಅಧ್ಯಾಯ – ೨

ಡಾ. ಸಂಗಮೇಶ ಬಿರಾದಾರವರ ಬದುಕು ಮತ್ತು ಸಾಹಿತ್ಯದ ಪ್ರೇರಣೆಗಳು

೨.೧ ಡಾ. ಸಂಗಮೇಶ ಬಿರಾದಾರವರ ಬದುಕು :

ಕನ್ನಡ ಸಾಹಿತ್ಯ ಸೇವೆಗೆ ತಮ್ಮ ಬದುಕನ್ನು ಮೀಸಲಾಗಿಟ್ಟ ಹಾಗೂ ಸಾಹಿತ್ಯದೊಂದಿಗೆ ವ್ಯಾಕರಣವನ್ನು ಉಸಿರಾಗಿಸಿಕೊಂಡು ಭಾಷಾ ಸೂಕ್ಷ್ಮತೆಯನ್ನು ಅರಿಯುತ ಅದನ್ನು ಅರಿಯದವರಿಗೆ ಉಣಬಡಿಸುವ ತಮ್ಮ ಸಂಶೋಧನೆಯ ಮೂಸೆಯಲ್ಲಿ ಪರೀಕ್ಷಿಸುವ ಸಾಹಿತಿಯ ಬದುಕು ಆದರ್ಶಮಯುವಾದುದು ಹೇಗೆ? ಎಂದು ಸಹೃದಯಿ ಓದುಗನಾದವನು ಕೃತಿಕಾರನ ಬಗ್ಗೆ ತಿಳಿಯಬೇಕೆಂಬ ಕುತೂಹಲ ಮೂಡುವುದು ಸಹಜ.


ಜಮಖಂಡಿಯ ನೆಲ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಂಪನ್ನು ಮೈಗೂಡಿಸಿಕೊಂಡು ಬಂದಿದೆ. ಅಂತಹ ಪರಿಸರದ ಭಾಗವಾದ ಭೈರಪ್ಪನ ಗುಡ್ಡದ ಪಶ್ಚಿಮಕ್ಕೆ ತುಂಗಳ ಗ್ರಾಮ. ಅದರ ಉತ್ತರಕ್ಕೆ ಪಶ್ಚಿಮ ವಾಹಿನಿಯಾದ ಹಳ್ಳ ಅಲ್ಲಿ ಕುಂತಳ ದೇವಿಯ ದೇವಸ್ಥಾನ ಗ್ರಾಮದೇವತೆ ಹೆಸರು ವರ್ಣ ಪಲ್ಲಟಗೊಂಡು ತುಂಗಳ ಗ್ರಾಮವಾಗಿದೆ.

೧) ಮನೆತನದ ಹಿನ್ನೆಲೆ :

ಕೃಷಿ ಪ್ರಧಾನ ಕುಟುಂಬವಾದ ಮಲ್ಲಣಗೌಡ ಬಿರಾದಾರವರ ವಂಶದ ಕುಡಿಯಾದ ಡಾ. ಸಂಗಮೇಶ ಬಿರಾದಾರವರು ವಸಂತ ಋತು ಚೈತ್ರಮಾಸ ಉತ್ತರಾಯಣ ಪುಣ್ಯ ಪರ್ವದಲ್ಲಿ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ತುಂಗಳ ಗ್ರಾಮದ ತಂದೆ ಮಲ್ಲನಗೌಡ ತಾಯಿ ತಾರಮ್ಮಳ ಉದರದಲ್ಲಿ ೧೫-೦೪-೧೯೬೮ ರಲ್ಲಿ ಡಾ. ಸಂಗಮೇಶ ಬಿರಾದಾರವರು ಜನಿಸಿದರು. ಡಾ. ಸಂಗಮೇಶ ಬಿರಾದಾರವರು ಇಬ್ಬರು ಅಣ್ಣಂದಿರು, ಒಬ್ಬ ತಮ್ಮ ಹಾಗೂ ಇಬ್ಬರು ಅಕ್ಕಂದಿರು, ಒಬ್ಬಳು ತಂಗಿಯನ್ನು ಹೊಂದಿದ್ದಾರೆ. ಹಾಗೂ ಡಾ. ಸಂಗಮೇಶ ಬಿರಾದಾರವರಿಗೆ ಜೀವನ ಸಂಗಾತಿಯಾಗಿ ಸಾವಿತ್ರಿ ಮತ್ತು ಲಕ್ಷ್ಮೀದೇವಿ ಅವರ ಉದರದಲ್ಲಿ ಜನಿಸಿದ ನಾಲ್ಕು ಜನ ಗಂಡು ಮಕ್ಕಳು, ಒಬ್ಬಳು ಮಗಳನ್ನು ಪಡೆದಿದ್ದಾರೆ.

[illegible]

ಡಾ. ಸಂಗಮೇಶ ಬಿರಾದಾರವರ ವಂಶಾವಳಿ



೨) ವಿದ್ಯಾಭ್ಯಾಸ :

ಪ್ರಾಥಮಿಕ ಶಿಕ್ಷಣವನ್ನು ೧೯೫೨ರಲ್ಲಿ ಪೂರ್ಣಗೊಳಿಸಿದರು. ಅದು ಆಗ ಮುಲ್ಕಿ (ಈಗಿನ ೭ನೆಯ ತರಗತಿ) ಪರೀಕ್ಷೆಯನ್ನು ಅಥಣಿ ಕೇಂದ್ರಕ್ಕೆ ಪ್ರಥಮ ಸ್ಥಾನ ಪಡೆದರು. ತದನಂತರ ಅಥಣಿಯ ಜೆ.ಎ. ಪ್ರೌಢ ಶಾಲೆಯನ್ನು ಸೇರಿ ೧೯೫೬ರಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸಾದರು. ತದನಂತರ ವಿಜಯಪುರ (ವಿಜಾಪುರ) ಎಸ್.ಬಿ. ಕಲೆ ಮತ್ತು ಕೆ.ಸಿ.ಪಿ. ವಿಜ್ಞಾನ ಕಾಲೇಜಿನಿಂದ ೧೯೬೧ರಲ್ಲಿ ಕನ್ನಡ ಪ್ರಧಾನ ಮತ್ತು ಸಂಸ್ಕೃತ ಉಪಪ್ರಧಾನ ವಿಷಯಗಳೊಂದಿಗೆ ಬಿ.ಎ. (ಆನರ್ಸ) ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೬೩ರಲ್ಲಿ ಎಂ.ಎ. (ಕನ್ನಡ) ಹಾಗೂ ಅದೇ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ೧೯೭೪ರಲ್ಲಿ ಕನ್ನಡ ವಿಷಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಂಡರು.

೩) ವಿದ್ಯಾಭ್ಯಾಸಕ್ಕಾಗಿ ಪಟ್ಟ ಪಾಡು :

ಡಾ. ಸಂಗಮೇಶ ಬಿರಾದಾರವರ ತಂದೆ ಕೃಷಿ ಕುಟುಂಬದಲ್ಲಿ ಜನಿಸಿದರು. ಒಣಬೇಸಾಯ ಆಧಾರಿತ ಒಕ್ಕಲುತನ ಅವರದಾಗಿತ್ತು. ಶೈಕ್ಷಣಿಕ ಸೌಲಭ್ಯಗಳಿಲ್ಲದ ಆ

[illegible]

ಕಾಲದಲ್ಲಿ ಪರಸ್ಥಳಗಳಿಗೆ ನಡೆಯುತ್ತಾ ಹೋಗಿ ಸಂತೆಗೆ ಬರುವ ಚಕ್ಕಡಿಗಳಲ್ಲಿ ಪ್ರಯಾಣಿಸಿ ಶಾಲೆ ಕಲಿತರು. ಧಾರವಾಡದ ಮುರಘಾಮಠದ ಫ್ರೀ (ಉಚಿತ) ಬೋರ್ಡಿಂಗನಲ್ಲಿ ಓದಿ ಅಧ್ಯಯನ ಗೈದಿದ್ದಾರೆ.

ಚಿಕ್ಕಂದಿನಿಂದಲೂ ಪರಮಾರ್ಥದ ಕಡೆಗೆ ಸೆಳೆತ ಇವರ ಚಿಕ್ಕಪ್ಪ ರಾಮನಗೌಡ ಇಂಚಗೇರಿಯ ಸಂಪ್ರದಾಯಸ್ಥ. ಮನೆಯಲ್ಲಿಯ ಭಜನೆ ನಡೆಯುತ್ತಿತ್ತು. ಎಫ್. ವಾಯ್. ಸಾಯಿನ್ಸ್ ಮುಗಿದ ಮೇಲೆ ಶಿರಡಿ ಸಾಯಿಬಾಬಾ ಮತ್ತು ರಮಣ ಮಹರ್ಷಿಗಳ ಪ್ರಭಾವ ಬೀರಿತು. ಮಧ್ಯಭಾರತ ಪ್ರವಾಸ ಮಾಡಿದರು. ಎರಡಾಣೆ ಕಂಡಿಶೆನ್ ನನ್ನನ್ನು ಈ ಪ್ರಪಂಚಕ್ಕೆ ಬರುವಂತೆ ಮಾಡಿತು ಎನ್ನುತ್ತಾರೆ. ಹೀಗೆ ಅಧ್ಯಯನದೊಂದಿಗೆ ಪಾರಮಾರ್ಥವೂ ನೆರವೇರಿತು.

೪) ವೃತ್ತಿ ಬದುಕು :

ಡಾ. ಸಂಗಮೇಶ ಬಿರಾದಾರವರ ಕಲಿಯುವ ದಾಹ ತೀರಲಿಲ್ಲ. ಆದರೂ ಸ್ನಾತಕೋತ್ತರ ಪದವಿಯನ್ನು ಪೂರೈಸಿದ ನಂತರ ಸೇವೆಗೆ ಮೊದಲು ತೊಡಗಿದ್ದು ೧೯೬೩-೬೪ರಲ್ಲಿ ಬೀದರ ಕರ್ನಾಟಕ ಪ್ರೌಢ ಶಾಲೆಯಲ್ಲಿ ಸಹ ಶಿಕ್ಷಕರಾಗಿ ಸೇವಾ ಜೀವನವನ್ನು ಪ್ರಾರಂಭಿಸಿದರು. ೧೯೬೪-೬೫ರಲ್ಲಿ ಅವರು ಕಲಿತ ಅಥಣಿಯ ಜೆ. ಎ. ಪ್ರೌಢ ಶಾಲೆಗೆ ಸಹಶಿಕ್ಷಕರಾಗಿ ನೇಮಕ ಹೊಂದಿ ಒಂದು ವರ್ಷಕಾಲ ಸೇವೆ ಸಲ್ಲಿಸಿದರು. ತದನಂತರ ೧೯೬೫-೧೯೯೬ರವರೆಗೆ ಜಮಖಂಡಿಯ ಪ್ರತಿಷ್ಠಿತ ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆಯ ವಾಣಿಜ್ಯ ಬಿ.ಎಚ್.ಎಸ್. ಕಲೆ ಮತ್ತು ಟಿ.ಜಿ.ಪಿ. ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಪ್ರಾಧ್ಯಾಪಕರಾಗಿ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಅಖಂಡ ೩೧ ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದರು.

ವಿದ್ವತ್ತಿನ ಖಣಿಯಾದ ಇವರೂ ಎಂದೂ ಹಮ್ಮಿನ ಧ್ವನಿಯನ್ನು ಎತ್ತಲಿಲ್ಲ. ಪ್ರಚಾರ ಬಯಸದ ಮಣಿಯಂತಿದ್ದ ಇವರು ಬಾಗಲಕೋಟೆಯ ಕ.ವಿ.ವಿ. ಸ್ನಾತಕೋತ್ತರ ಕೇಂದ್ರದಲ್ಲಿ ಒಂದು ವರ್ಷಕಾಲ ಎಂ.ಎ. (ಕನ್ನಡ) ತರಗತಿಯ ವಿದ್ಯಾರ್ಥಿಗಳಿಗೆ ಬೋಧಿಸಿದರು.

೫) ದಾಂಪತ್ಯ ಜೀವನ :

ಡಾ. ಸಂಗಮೇಶ ಬಿರಾದಾರವರ ದಾಂಪತ್ಯ ಜೀವನ ಸುಖಮಯವಾಗಿಯೇ ಸಾಗುತ್ತಿತ್ತು. ಇತ್ತ ಅಧ್ಯಾಪನ ಇನ್ನೊಂದೆಡೆ ಪಿ.ಎಚ್.ಡಿ. ಅಧ್ಯಯನ ಎರಡೂ ದೋಣಿಯ ಮೇಲೆ ಪಯಣ ಸಾಗುತ್ತಿತ್ತು. ಮೊದಲಿನಿಂದ ಆಧ್ಯಾತ್ಮದ ಒಲವಿದ್ದ ಇವರು ಸಂಸಾರವನ್ನು ಬಹಳ ಹಚ್ಚಿಕೊಳ್ಳಲಿಲ್ಲ. ಕೆಸರಿನಲ್ಲಿದ್ದ ಕಮಲನಂತಿದ್ದರು. ವಿಧಿ ಇವರ ಬದುಕಿನಲ್ಲಿ ಚೆಲ್ಲಾಟವಾಡಿತು.

ಬದುಕು ಜಟಕಾಬಂಡಿ
ವಿಧಿ ಅದರ ಸಾಹೇಬ ।
ಪಯಣಿಗನೂ ಪೇಳಿದಂತೆ
ಮದುವೆಗೊ ಮಸಣಕ್ಕೊ
ಪೋಗೆಂದ । ಮಂಕುತಿಮ್ಮ

ಎನ್ನುವ ಡಿ.ವಿ.ಜಿಯವರ ಮಾತಿನಂತೆ ವಿಧಿಯ ಆಟ ಬಿರಾದಾರವರ ಬದುಕಿನಲ್ಲಿ ಅನಿರೀಕ್ಷಿತ ಘಟನೆ ಜರುಗಿತ್ತು. ೧೯೬೫ರಲ್ಲಿ ಪತ್ನಿ ಸಾವಿತ್ರಿಯವರು ಅಕಾಲಿಕ ಮರಣ ಹೊಂದಿದರು. ಪಿ.ಎಚ್.ಡಿ. ಕೆಲಸ ಅರ್ಧಕ್ಕೆ ನಿಂತು ಹೋಯಿತು. ನಂತರ ಲಕ್ಷ್ಮೀದೇವಿಯವರನ್ನು ೧೨-೦೬-೧೯೭೦ರಲ್ಲಿ ಮದುವೆಯಾದರು. ಮತ್ತೆ ಬದುಕಿನ ಬಂಡಿ ಸಾಗುತ್ತಾ ನಡೆಯಿತು. ನಿಂತು ಹೋದ ಪಿ.ಎಚ್.ಡಿ. ಕಾರ್ಯವನ್ನು ಪೂರ್ಣಗೊಳಿಸಿದರು. ಮುತ್ತಿನಂತ ಗಂಡು ಮಕ್ಕಳು ರಾಜೇಂದ್ರ (ಸಾವಿತ್ರಿಯಕ್ಕನ ಉದರದಲ್ಲಿ), ವಿವೇಕಾನಂದ, ಭಾರತಿ-ಭಾರತ ಮತ್ತು ನಾಗವರ್ಮ ಎಂಬ ಮಕ್ಕಳ ಪಡೆದ ಇವರೇ ಧನ್ಯರು.

೨.೨ ಡಾ. ಸಂಗಮೇಶ ಬಿರಾದಾರವರ ಸಾಹಿತ್ಯದ ಪ್ರೇರಣೆಗಳು :

ಡಾ. ಸಂಗಮೇಶ ಬಿರಾದಾರವರು ಪ್ರಾಧ್ಯಾಪಕ ವೃತ್ತಿಯಲ್ಲಿದ್ದಾಗ ಬಿಡುವಿನ ದಿನಗಳಲ್ಲಿ ಬಹಳ ಶ್ರಮಪಟ್ಟು ಓದಿ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಂಡು ಇವರು ಕನ್ನಡ ವಿಷಯದಲ್ಲಿ ಪಾಂಡಿತ್ಯವನ್ನು ಪಡೆದರು. ವಿಷಯ ಬೋಧಿಸುವಲ್ಲಿ ಎತ್ತಿದ ಕೈ ಹಳೆಗನ್ನಡ ಕಾವ್ಯಗಳನ್ನು ಪದಚ್ಛೇದ ಮಾಡಿ ವಿದ್ಯಾರ್ಥಿಗಳಿಗೆ ಮನನವಾಗುವಂತೆ ಹೇಳುವ ಶೈಲಿ ಇವರದು. ಕನ್ನಡ ವ್ಯಾಕರಣ ಛಂದಸ್ಸು ಅಲಂಕಾರ ಮೊದಲಾದ ಕಠಿಣ ವಿಷಯಗಳನ್ನು ವಿದ್ಯಾರ್ಥಿಗಳು ಇವರಿಂದ ಕೇಳಿ ತಿಳಿಯಲು ಆತುರ ಪಡುತ್ತಿದ್ದರು. ಛಂದಸ್ಸನ್ನು ಹೇಳುವಾಗ ತಾಳ, ಲಯ, ಬದ್ಧವಾಗಿ ಹಾಡಿ ವಿದ್ಯಾರ್ಥಿಗಳಿಗೆ ಮನಸ್ಸನ್ನು ಗೆದ್ದರು. ಆದ್ದರಿಂದಲೇ ಇವರು ಸಾಹಿತ್ಯ ಲೋಕಕ್ಕೆ ೧೮ ಸ್ವತಂತ್ರ ಕೃತಿಗಳನ್ನು ೧೩ ಸಂಗ್ರಹ ಅಥವಾ ಸಂಪಾದನೆಯ ಗ್ರಂಥಗಳನ್ನು ನಮ್ಮ ಕನ್ನಡ ಸಾರಸ್ವತ ಲೋಕಕ್ಕೆ ಅರ್ಪಿಸಿದ್ದಾರೆ.

ಡಾ. ಸಂಗಮೇಶ ಬಿರಾದಾರವರು ಚಿಕ್ಕಂದಿನಿಂದಲೂ ಪಾರಮಾರ್ಥದ ಕಡೆಗೆ ಸೆಳೆತ. ಇವರ ಚಿಕ್ಕಪ್ಪ ರಾಮನಗೌಡ ಇಂಚಗೇರಿಯ ಸಂಪ್ರದಾಯಸ್ಥ ಮನೆಯಲ್ಲಿ ಭಜನೆ ನಡೆಯುತ್ತಿತ್ತು. ಇದು ಅವರ ಮೇಲೆ ಪ್ರಭಾವ ಬೀರಿತು. ೧೯೫೩ರಲ್ಲಿ 'ಗೆಳೆಯರ ಬಳಗ ತುಂಗಳ' ಪ್ರಕಾಶನದಲ್ಲಿ ಸದ್ಗುರು ಸಮರ್ಥ ಗಿರಿಮಲ್ಲೇಶ್ವರ ಮಹಾರಾಜರ ಜೀವನ ಚರಿತ್ರೆ 'ಸದ್ಗುರು ಸಮರ್ಥ' ಎಂಬ ಹೆಸರಿನಿಂದ ಕೃತಿ ರಚನೆಯಾಗಲಿಕ್ಕೆ ಕಾರಣವಾಯಿತು. ಸದ್ಗುರು ಸಮರ್ಥ ಬಾಹುಸಾಹೇಬ ಮಹಾರಾಜರ ಜನ್ಮ ಶತಮಾನೋತ್ಸವ

ಆಧ್ಯಾತ್ಮ ಆಶ್ರಮದ ರಜತ ಮಹೋತ್ಸವ ಸತ್ಸಂಗಗಳ ಸ್ಮರಣೋತ್ಸವ ನಿಮಿತ್ಯ 'ತ್ರಿದಳ' ಪುಸ್ತಕವನ್ನು ತಮ್ಮ ಪ್ರಧಾನ ಸಂಪಾದಕತ್ವದಲ್ಲಿ ಹೊರ ತಂದಿದ್ದಾರೆ.

ಅಥಣಿಯ ಮೊರಟಗಿಮಠದ ಗುರುಬಸವ ಸ್ವಾಮಿಗಳು ವಿಜಾಪುರದಲ್ಲಿ ಬಂಥನಾಳ ಶಿವಯೋಗಿಗಳು ಧಾರವಾಡದಲ್ಲಿ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳು ಇವರನ್ನು ಆಶೀರ್ವದಿಸಿದ್ದಾರೆ. ಶ್ರೀ ಸಿದ್ಧೇಶ್ವರ ಶ್ರೀಗಳ ಸಾಮಿಪ್ಯ ಇವರಿಗೆ ದೊರೆಯಿತು. ಆದ್ದರಿಂದ ಸಾತ್ವಿಕ ವಿಚಾರವಂತರಾಗಿ, ಆಧ್ಯಾತ್ಮಿಕ ವಿಚಾರಧಾರೆಗಳನ್ನು ಹೊಂದಿದ ಇವರು 'ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಮಹಾಸಂಸ್ಥಾನಮಠ' ಸಿದ್ಧಗಿರಿ ಕುರಿತು ಮತ್ತು ಇಲ್ಲಿಯವರೆ ೫೦ ಪೀಠಾಧಿಪತಿಗಳ ವಿವರಣೆಯನ್ನು ಈ ಕೃತಿಯಲ್ಲಿ ನೀಡಿದ್ದಾರೆ. ಅಷ್ಟೇ ಅಲ್ಲದೆ ೬೨೫ ಪುಟಗಳ 'ಕಾಡಸಿದ್ಧೇಶ್ವರ ಸಮಗ್ರ ವಚನಗಳ ಸಂಗ್ರಹ' ಎಂಬ ಪುಸ್ತಕ ಹೊರ ತಂದಿದ್ದಾರೆ. ತದನಂತರ ಶ್ರೀ ಶಿವಾನಂದ ಚರಿತ್ರೆ ಮತ್ತು ಪೂಜ್ಯಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ರೂಪಕವಾದ 'ಗುರುಪೂರ್ಣಿಮೆ' ಕೃತಿಯನ್ನು ರಚಿಸಿದ್ದಾರೆ. ಹೀಗೆ ಸಾಹಿತ್ಯದ ಪ್ರೇರಣೆಯನ್ನು ಪಡೆದುಕೊಂಡಿದ್ದಾರೆ.

ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ಬಹಳ ನಿಷ್ಠೆಯಿಂದ ಅಭ್ಯಸಿಸಿದ ಇವರು ಶ್ರೀಮನ್ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯ ವ್ಯಾಕರಣವನ್ನು ವಿಶ್ಲೇಷಿಸಿದ್ದಾರೆ. ಯುವ ಬರಹಗಾರರಿಗೆ ನವೋದಯ ಸಾಹಿತ್ಯವನ್ನು ಪ್ರವೇಶಿಸುವವರಿಗೆ 'ಕನ್ನಡ ನವೋದಯ ಛಂದಸ್ಸು' ಪುಸ್ತಕ ಮಾರ್ಗದರ್ಶಕವಾಗಿದೆ. ತಪ್ಪು ಕಂಡಲ್ಲಿ ನಿಷ್ಠುರವಾಗಿ ಹೇಳುವ ಇವರ ಗುಣ ಇವರನ್ನು ಸಂಶೋಧನ ಮತ್ತು ವಿಮರ್ಶೆಗೆ ಅಣಿಗೊಳಿಸಿತು. ಅದರಿಂದ ಸೊನ್ನಲಿಗ ಸಿದ್ಧರಾಮ ಮತ್ತು ಅಲ್ಲಮಪ್ರಭುದೇವರ ಕುರಿತು ತಿರುಚಿ ಬರೆದಿದ್ದನ್ನು 'ಶಿವಶರಣರ ತೇಜೋವಧೆ' ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಹೀಗೆ ಇವರು ಸಾಹಿತ್ಯದ ಪ್ರೇರಣೆಗೆ ಒಳಗಾಗಿದ್ದಾರೆ.

೨.೩ ಸಂಶೋಧಕರಿಗೆ ಮಾರ್ಗದರ್ಶನ :

ಡಾ. ಸಂಗಮೇಶ ಬಿರಾದಾರವರು ಪ್ರಾಧ್ಯಾಪಕ ವೃತ್ತಿ, ಸಾಹಿತ್ಯ ರಚನೆ, ಸಂಶೋಧನೆ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಹಿರಿಯ ಅಧ್ಯಾಪಕರಾದ ಡಾ. ಆರ್. ಸಿ. ಹಿರೇಮಠರವರ ಮಾರ್ಗದರ್ಶನದಲ್ಲಿ 'ವೈಯಾಕರಣಿ ಎರಡನೆಯ ನಾಗವರ್ಮ' ಎಂಬ ಸಂಶೋಧನಾ ಪ್ರಬಂಧವನ್ನು ಮಂಡಿಸಿ ೧೯೭೪ರಲ್ಲಿ ಪಿ.ಎಚ್.ಡಿ. ಪದವಿಯನ್ನು ಪಡೆದುಕೊಳ್ಳುವ ಮೂಲಕ ಸಂಶೋಧನಾ ಕ್ಷೇತ್ರದಲ್ಲಿಯೂ ಯಶಸ್ವಿಯಾದರು. ತದನಂತರ ೧೯೯೨ರಲ್ಲಿ ಪಿ.ಎಚ್.ಡಿ. ಪದವಿಗಾಗಿ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ

ಮಾಡಲು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಮಾರ್ಗದರ್ಶಕ ಮಾನ್ಯತೆಯನ್ನು ಪಡೆದುಕೊಂಡರು.

ಒಂದು ದೀಪ ತಾನು ಉರಿದು ಇನ್ನೊಂದು ದೀಪ ಬೆಳಗುವಂತೆ ತಾವು ಪಡೆದ ವಿದ್ವತ್ ಪ್ರೇರಣೆಯಿಂದ ಐವರು ವಿದ್ಯಾರ್ಥಿಗಳಿಗೆ ಸಂಶೋಧನೆಗೈಯಲು ಮಾರ್ಗದರ್ಶನ ನೀಡಿದ್ದಾರೆ. ಆ ಐವರು ವಿದ್ಯಾರ್ಥಿಗಳು ಯಶಸ್ವಿಯಾಗಿ ಪೂರೈಸಿದ್ದಾರೆ. ಮಂಡಿಸಿದ ಮಹಾಪ್ರಬಂಧ ಮತ್ತು ವಿಶ್ವವಿದ್ಯಾಲಯದ ವಿವರ ಈ ರೀತಿಯಾಗಿದೆ.

೧) ೧೯೯೬ರಲ್ಲಿ ಎಂ. ಎಸ್. ಮದಭಾಂವಿ
ವಿಷಯ : ಬಬಲಾದಿಯ ಚಿಕ್ಕಯ್ಯ ಸ್ವಾಮಿಗಳ ಜೀವನ ಮತ್ತು ಕೃತಿ ಸಮೀಕ್ಷೆ

೨) ೧೯೯೯ರಲ್ಲಿ ವಿಜಯಾ ದಡೇದ
ವಿಷಯ : ಕನ್ನಡದಲ್ಲಿ ಮಹಿಳಾ ಕಾವ್ಯ ಪರಂಪರೆ ಒಂದು ಅಧ್ಯಯನ

೩) ೧೯೯೯ರಲ್ಲಿ ಬಿ. ಎಂ. ಪಾಟೀಲ
ವಿಷಯ : ಡಾ. ಪ. ಗು. ಹಳಕಟ್ಟಿಯವರ ಜೀವನ ಮತ್ತು ಸಾಧನೆ

೪) ೨೦೦೩ರಲ್ಲಿ ಶ್ರೀ ಬಿ. ಬಿ. ಶಿರಡೋಣಿ
ವಿಷಯ : ಇಂಚಗೇರಿ ಸಂಪ್ರದಾಯ ಒಂದು ಅಧ್ಯಯನ

೫) ೨೦೧೦ರಲ್ಲಿ ಬಿ. ಜಿ. ಜೋಗಿನ
ವಿಷಯ : ಬಾಗಲಕೋಟ ಜಿಲ್ಲೆಯ ಸ್ಥಳನಾಮಗಳು ಎಂಬ ಮಹಾಪ್ರಬಂಧವನ್ನು ಮನ್ನಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ನೀಡಿ ಗೌರವಿಸಿದೆ.

ಹೀಗೆ ಮಾರ್ಗದರ್ಶನ ಮಾಡಿರುವದರಿಂದ ಡಾ. ಸಂಗಮೇಶ ಬಿರಾದಾರವರು ಒಬ್ಬ ಭಾಷಾ ವಿಜ್ಞಾನಿ ವಿದ್ವಾಂಸ ಹಾಗೂ ಸಂಶೋಧನ ಮಾರ್ಗದರ್ಶಕರೂ ಆಗಿದ್ದಾರೆ.

೨.೪ ವಿಶ್ರಾಂತ ಜೀವನ :

ಡಾ. ಸಂಗಮೇಶ ಬಿರಾದಾರವರು ವೃತ್ತಿಯಿಂದ ನಿವೃತ್ತಿಯಾದರೂ ಆಗ ಗೆಳೆಯರ ಇವರನ್ನು ಕುರಿತು ಇನ್ನೇನು ನಿವೃತ್ತಿ ಬದುಕು ತಮ್ಮದು ಅಂದಾಗ "ನಿವೃತ್ತಿ ವೃತ್ತಿಗೆ ಪ್ರವೃತ್ತಿಗಲ್ಲವಲ್ಲಾ" ಎಂದು ನಗುಮುಖದಿಂದ ಉತ್ತರಿಸುತ್ತಾರೆ.

ನಿವೃತ್ತಿಯ ನಂತರ ಆರೋಗ್ಯದ ಸಮಸ್ಯೆಯಾದರೆ ಕುಟುಂಬದವರು ಆರೈಕೆ ಮಾಡಿ ಉಪಚರಿಸಬಹುದು. ನಮ್ಮ ಮನಸ್ಸು ಮುರಿದು ಹೋಗಿದ್ದರೆ, ಅದನ್ನು ಅನ್ಯರು ಗುಣಪಡಿಸಲಾರರು. ನಮ್ಮ ಭಾವನೆ, ಚಿಂತನೆ ಧೋರಣೆ ಬದಲಾಗಬೇಕು. ದೃಷ್ಟಿದೋಷವಿದ್ದರೆ ಕನ್ನಡಕ (ಚಸ್ಮಾ) ಬದಲಾಯಿಸಬೇಕು, ದೃಷ್ಟಿಕೋನದಲ್ಲಿ ಲೋಪವಿದ್ದರೆ ನಾವೇ ಬದಲಾಗಬೇಕು. ಹೊರಗಿನ ಚಸ್ಮಾ ಉಪಯೋಗಕ್ಕೆ ಬರುವುದಿಲ್ಲ. ಒಳಗಣ್ಣು ತೆರೆದು ನೋಡಬೇಕು ಎನ್ನುತ್ತಾರೆ.

ಜೀವನಕ್ಕೆ ಹಣಬೇಕು, ಹಣವೇ ಜೀವನವಲ್ಲ. ದುಡ್ಡು ಗಳಿಸುವುದೇ ಜೀವನದ ಪರಮಗುರಿಯಾದರೆ ಬದುಕು ನರಕವಾಗುತ್ತದೆ. ಹಣ ಸಂಪಾದನೆಯ ಹುಟ್ಟಿನಲ್ಲಿ ನೆಮ್ಮದಿ ಸುಖ, ಶಾಂತಿಯನ್ನು ಕಳೆದುಕೊಂಡು ನಾವು ನಮ್ಮ ಮನಸ್ಥಿತಿಯನ್ನು ಹಾಳು ಮಾಡಿಕೊಳ್ಳುವ ಬದಲು ನಮ್ಮ ಇಷ್ಟವಾದ ಕೆಲಸದಲ್ಲಿ ತೊಡಗುವುದರಿಂದ ನಿವೃತ್ತಿಯ ಬೇಸರ ಇರುವುದಿಲ್ಲ.

ನಿವೃತ್ತಿಯ ನಂತರವೂ ಇವರು ಯಾವಾಗಲೂ ಬರೆಯುತ್ತಲೋ, ಇಲ್ಲವೇ ಓದುತ್ತಲೋ ಇರುತ್ತಾರೆ. ಪರೀಕ್ಷೆಗೆ ತಯಾರಿ ನಡೆಸಿದ ಒಬ್ಬ ವಿದ್ಯಾರ್ಥಿ ಹೇಗೆ ಓದಿನಲ್ಲಿ ತಲ್ಲೀನನಾಗುತ್ತಾನೆಯೇ ಹಾಗೆ ಇವರು ಯಾವಾಗಲೂ ಓದು ಬರವಣಿಗೆಯಲ್ಲಿ ತಲ್ಲೀನರಾಗಿರುತ್ತಾರೆ.

ಸರಳ ಜೀವನ ಉನ್ನತ ಚಿಂತನೆಯ ವ್ಯಕ್ತಿತ್ವವುಳ್ಳ ಇವರು ಅಧ್ಯಾಪಕ ಪ್ರವಾಚಕ ಪ್ರಾಧ್ಯಾಪಕ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಇವರು ಯಾವಾಗಲೂ ಹಣೆಗೆ ಭಸ್ಮ, ಕಣ್ಣಿಗೆ ಚಸ್ಮ ಮಂದಸ್ಮಿತ ಮೊಗದ ಬಿರಾದಾರವರು ವಿಶ್ರಾಂತ ಬದುಕು ಎಲ್ಲರಿಗೂ ಮಾದರಿಯಾದುದಾಗಿದೆ.

❖❖❖❖❖

[illegible]

[illegible]

[illegible]

[illegible]

ಅಧ್ಯಾಯ : ೩

ಡಾ. ಸಂಗಮೇಶ ಬಿರಾದಾರವರ ಅಧ್ಯಯನದ ಕ್ಷೇತ್ರಗಳು

ಅಧ್ಯಾಯ – ೩
ಡಾ. ಸಂಗಮೇಶ ಬಿರಾದಾರವರ ಅಧ್ಯಯನದ ಕ್ಷೇತ್ರಗಳು

೩.೧ ಸೃಜನ ಸಾಹಿತ್ಯ :

ಸೃಜನಶೀಲ ಸಾಹಿತ್ಯವು ಬರಹಗಾರನ ಕಲ್ಪನೆಯ ಅನುಭವದ ಮೂಸೆಯಲ್ಲಿ ರಚಿತವಾಗುತ್ತದೆ. ಪ್ರಾಚೀನ ಗ್ರೀಕರಲ್ಲಿ ಒಂದು ಕಥೆಯಿತ್ತು. ಆ್ಯಂಟಿಸನ್ ಎಂಬ ಒಬ್ಬ ರಾಕ್ಷಸ ಅವನು ಪ್ರತಿಬಾರಿ ದ್ವಂದ್ವಯುದ್ಧದಲ್ಲಿ ಕೆಳಕ್ಕೆ ಬಿದ್ದಾಗಲೂ ಹೊಸ ಚೈತನ್ಯದಿಂದ ಪುಟಿದೇಳುತ್ತಿದ್ದನಂತೆ. ಕಾರಣ ಭೂಮಿಯನ್ನು ಮುಟ್ಟಿದಾಗ ಅವನ ಶಕ್ತಿ ಎರಡರಷ್ಟಾಗುತ್ತಿದ್ದಂತೆ[೧].

ಸಾಹಿತ್ಯಕ್ಕೆ ಈ ಕಥೆಯಲ್ಲಿ ಅರ್ಥವಿದೆ. ಸಾಹಿತ್ಯ ನೆಲವನ್ನು ಸ್ಪರ್ಶಿಸಿದಾಗಲೆಲ್ಲ ಅದರ ಚೈತನ್ಯ ವೃದ್ಧಿಯಾಗುತ್ತದೆ. ನೆಲವನ್ನು ಮುಟ್ಟುವುದು ಎಂದರೆ ಹಸಿಯಾದ ಮೂಲ ಮಾನವ ಸ್ವಭಾವವನ್ನು ಅರಿತುಕೊಳ್ಳುವುದು, ಅನುಭವಿಸುವುದು, ನಾಗರಿಕತೆಯ ಕಟ್ಟಳೆಗಳು, ಇತರರು ಏನೆಂದುಕೊಳ್ಳುವರೂ ಎಂಬ ಭಯ, ಮರ್ಯಾದೆ ಉಳಿಸಿಕೊಳ್ಳುವ ಹಂಬಲ – ಇವು ಸಾಮಾನ್ಯವಾಗಿ ನಾವು ಮನುಷ್ಯನ ಸ್ವಭಾವ ಇರುವಂತೆ ಕಾಣುವುದನ್ನು ಕಷ್ಟಕ್ಕೆ ಈಡು ಮಾಡುತ್ತವೆ. ಆದರೆ ಮನುಷ್ಯ ಸ್ವಭಾವವಾದ ಕಾಮ, ಹಸಿವು, ಇತರರನ್ನಾಳುವ ಆಸೆ, ಮಕ್ಕಳಿಗಾಗಿ ಪ್ರಾಣ ಕೊಡುವ ಪ್ರೀತಿ, ಸ್ವಂತ ಉಳವಿನ ಬಯಕೆ ಇವೆಲ್ಲವನ್ನು ಸೃಜನಶೀಲ ಸಾಹಿತ್ಯ ಗುರುತಿಸುತ್ತದೆ.

*** ಭ್ರಮರ : ಕವನ ಸಂಕಲನ – ಪ್ರಕಟಣೆ – ೧೯೯೬ :**

ಇದು ಡಾ. ಸಂಗಮೇಶ ಬಿರಾದಾರವರು ರಚಿಸಿದ ಮೊದಲ ಕೃತಿ. ಸಾಹಿತ್ಯ ಕೃಷಿಯಲ್ಲಿ ತೊಡಗಿದಾಗ ಬಂದ ಮೊದಲ ಪೈರು. ಬಹಳಷ್ಟು ನಿರೀಕ್ಷೆಗಳನ್ನು ಗರಿ ಗೆದರಿಸುವ, ಹೊಸ ಆಸೆ, ಆಕಾಂಕ್ಷೆಗಳನ್ನು, ಕನಸುಗಳನ್ನು ಮೂಡಿಸುತ್ತದೆ. ೧೯೮೩ ರಿಂದ ೧೯೬೮ರವರೆಗೆ ಅವರು ಬರೆದ ೩೮ ಕವತೆಗಳನ್ನೊಳಗೊಂಡ ಕೃತಿಯಾಗಿದೆ.

ಹನ್ನೆರಡು ಚೈತ್ರಕಳೆದ ಡಾ. ಸಂಗಮೇಶ ಬಿರಾದಾರವರಲ್ಲಿ ಕಾವ್ಯಕನ್ನಿಕೆ ಮೂಡಿದುದು ಇದು ಇವರ ಪ್ರಾರಂಭಿಕ ಗೀತೆಯಾದುದರಿಂದ ಸಹಜವಾಗಿಯೇ ಆ ತಲೆಮಾರಿನ

ಕವಿಗಳಾದ ಕೆ. ಎಸ್. ನರಸಿಂಹಸ್ವಾಮಿ ಮಧುರ ಚೆನ್ನ, ಬೇಂದ್ರೆ, ಕುವೆಂಪುರವರ ಪ್ರಭಾವ ಬಿರಿದನ್ನು ಕಾಣಬಹುದು.

ಡಾ. ಸಂಗಮೇಶ ಬಿರಾದಾರದವರು ತಮ್ಮ ಕಾವ್ಯಕನ್ನಿಕೆಯ ಆಗಮನವನ್ನು ಕುರಿತು ಹೀಗೆ ಹೇಳುತ್ತಾ –

‘ಅಂದು ಮುಂಜಾವಿನಲಿ ತಣ್ಣೆಳಲ ಹಾಸಿನಲಿ
ಗೆಳೆಯರೊಡನೇನೇನೊ ಹರಟು ತಿದ್ದೆ
ಆ ಮಾತು ಈ ಮಾತು ಹೊತ್ತು ದಿಕ್ಕಿರಲಿಲ್ಲ
ಸಾವಕಾಶದಿ ನೀನು ಸುಳಿದು ಬಂದೆ’

ಎಂದು ಹೇಳಿದಾಗ ಕಾವ್ಯಕನ್ನಿಕೆ ಸ್ಥಾನ ಬಯಸಿ ಬಂದ ಪರಿಯನ್ನು ಇಲ್ಲಿ ಕವಿ ಬಣ್ಣಿಸಿದ್ದಾರೆ. ಕಾವ್ಯ ಏಕಾಂತದಲ್ಲಿ ಅರಳಿದಲ್ಲ (೧೨ರ ವಯದಲ್ಲಿ ಏತರ ಏಕಾಂತೆ); ಲೋಕಾಂತರದಲ್ಲಿ ಹೊರಳಿದ್ದು ಇಲ್ಲಿಯ ಅನೇಕ ಕವಿತೆಗಳು ಇದಕ್ಕೆ ಸಾಗಿಯಾಗಿದನ್ನು ದನಿಸುತ್ತದೆ.

ಕಾವ್ಯಕನ್ನಿಕೆ ‘ಸಾವಕಾಶದಿ’ ಸುಳಿದು ಬಂದಳಂತೆ ಅಂದರೆ ಇವರ, ಕಾವ್ಯ....... Wordsworth ಹೇಳುವಂತೆ, ‘Peotry is the spontaneous over flow of the powerfull feelings’ ಅಲ್ಲ ‘ಮಜ್ಜಿಗೆಯೊಳಗಿನ ಬೆಣ್ಣೆಯಂತೆ’ ಮಾತು ಮಥಿಸಿ ಬಂದಿದ್ದು.

ಈ ಕವನ ಸಂಕಲನದಲ್ಲಿ ಪ್ರೇಮಗೀತೆ, ನಾಡಗೀತೆ ಶೋಕಗೀತೆ ಎಂದು ವಿಭಾಗಗಳನ್ನು ಮಾಡಲಾಗಿದೆ. ಪ್ರೇಮಗೀತೆ ಕವನಗಳಲ್ಲಿ ಎಳೆಯ ಪ್ರೇಮದ ಸ್ನಿಗ್ಧ ಮನೋಭಾವವನ್ನು ಚಿತ್ರಿಸಲಾಗಿದೆ.

ನಾಡಗೀತೆ ವಿಭಾಗದಲ್ಲಿ ಒಟ್ಟು ೮ ಕವಿತೆಗಳಿವೆ. ಕರ್ನಾಟಕದ ಕರಾವಳಿಯನ್ನು ಸೌಂದರ್ಯವನ್ನು ವರ್ಣಿಸುವ ‘ಕಡಲ ಕರೆ’ ಕನ್ನಡದ ಮಹಿಮಾನ್ವಿತರನ್ನು ನೆನೆಯುವ ‘ಮರೆಯುವನೆಂತು’ ಐಕ್ಯತೆ, ದುಡಿಮೆ, ಸಮತಾಭಾವಗಳನ್ನುದ್ದೀಪಿಸುವ ಶ್ರಮದಾನ ನಾಡ ಚೆಲುವನ್ನು ಬಣ್ಣಿಸುವ ‘ಅಭಯ’ ಕೆಚ್ಚೆದೆಯ ಹೋರಾಟಕ್ಕೆ ಕರೆ ನೀಡುವ ‘ಆಹ್ವಾನ’ ಕವಿತೆಗಳು ತಮ್ಮ ಉದ್ದೇಶವನ್ನು ಈಡೇರಿಸಿವೆ.

ಡಾ. ಸಂಗಮೇಶ ಬಿರಾದಾರವರು ತಮ್ಮ ಗೆಳೆಯ ರಾಮಚಂದ್ರ ಶಿವಭಟ್ಟರು ನಿಧನರಾದಾಗ ರಚಿಸಿದ ‘ಹೋದೆಯಾ ಸಾಗಿ’ ಎಂ. ಜಿ. ಅರಕೇರಿ ಎಂಬ ವಿದ್ಯಾರ್ಥಿಯೊಬ್ಬ ವಿಜಯಪುರದ ಉಪಲಿ ಬುರುಜಿನಿಂದ ಬಿದ್ದು ಮಡಿದಾಗಿನ ‘ಅಳಿದರಳದರಳು’ ಲಾಲ ಬಹೂದ್ದೂರ ಶಾಸ್ತ್ರೀಗಳು ನಿಧನರಾದಾಗ ‘ಬಂದೆಯಾ ಲಾಲ’ ಕವಿತೆಗಳು ವಿದ್ಯಾರ್ಥಿ ಮತ್ತು ಗೆಳೆಯರ ಜೊತೆಗೆ ಇರಿಸಿಕೊಂಡು ಭಾವನಾತ್ಮಕ ಸಂಬಂಧಕ್ಕೆ ನಿದರ್ಶನವೆನಿಸಿದೆ.

ಹಿರಿಯ ಕವಿಯೊಬ್ಬ ಹೇಳುವಂತೆ –

ತನ್ನ ತಾನರಿತವನು ಘುನ್ನವನ್ನರಿವ ನಾಳೆ
ಆತ್ಮದರ್ಶಿಯ ಮುಂದೆ ದಿಟ ವಿಶ್ವಾತ್ಮದರ್ಶಿ ಎನ್ನುವಂತಿದೆ.

ಆಂಗ್ಲ ಕವಿ ಶೆಲ್ಲಿ ಹಾಗೂ ಎಫ್.ಡಬ್ಲ್ಯೂ. ಬೋರ್ಡಿಲೆನರ್ ೯ ಕವಿತೆಗಳ ಅನುವಾದವನ್ನೊಳಗೊಂಡ 'ಸಂಕೀರ್ಣ ಗೀತೆಗಳು' ವಿಭಾಗದಲ್ಲಿ ಹದಿನಾಲ್ಕು ಕವಿತೆಗಳಿವೆ.

ಡಾ. ಸಂಗಮೇಶ ಬಿರಾದಾರವರ ಪ್ರಾರಂಭಿಕ ಕವಿತೆಗಳಾಗಿರುವುದರಿಂದ ಶೈಲಿ ಸಾಂಪ್ರದಾಯಕವಾದುದು ವಸ್ತು ವಯೋಸಹಜವಾದುದು. ಉತ್ಸಾಹ ಭಾವೋನ್ಮಾದಗಳಿಂದ ಇಲ್ಲಿನ ಕವಿತೆಗಳು ಹೊಸ ಅರ್ಥ ಕಟ್ಟುವಲ್ಲಿ ಕಾಲನ ಇರುವಿಕೆಯನ್ನು ಅರಿಯುವಲ್ಲಿ ಸಫಲವಾಗಿವೆ ಎನ್ನಬಹುದು.

ಸದ್ಗುರು ಸಮರ್ಥ (೧೯೯೩) :

ಇಂಚಗೇರಿ ಸಂಪ್ರದಾಯದ ಸ. ಸ. ಗಿರಿಮಲ್ಲೇಶ್ವರ ಮಹಾರಾಜರ ಚರಿತೆಯನ್ನು ಒಳಗೊಂಡ 'ಗೆಳೆಯರ ಬಳಗ ತುಂಗಳ'ರವರ ಪ್ರಕಾಶನದಲ್ಲಿ ಪ್ರಕಟಿಸಿದ ಈ ಕೃತಿಯಲ್ಲಿ ಡಾ. ಸಂಗಮೇಶ ಬಿರಾದಾರವರು 'ಸದ್ಗುರು ಸಮರ್ಥ' ಗಿರಿಮಲ್ಲೇಶ್ವರರ ಬಾಲ್ಯ, ಯೌವನ, ಗ್ರಹಸ್ಥಾಶ್ರಮದ ಜೊತೆ ಅವರ ಬದುಕು ಆಧ್ಯಾತ್ಮದದತ್ತ ಹೊರಳಿ ಗುರುವಿನಿಂದಲೇ ಸದ್ಗುರು ಸಮರ್ಥನಾದ ಶಿಷ್ಯನೆಂಬ ಪ್ರಖ್ಯಾತಿ ಪಡೆದಿದನ್ನು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾರೆ[೩].

ಪುಸ್ತಕದ ಪ್ರಾರಂಭದಲ್ಲಿ ಇಂಚಗೇರಿ ಸಂಪ್ರದಾಯದ ಮೂಲ ಪುರುಷ 'ಗುರುಲಿಂಗ ಜಂಗಮ' ಮಹಾರಾಜರು ಮುಪ್ಪಿನ ಕಾಡಸಿದ್ಧೇಶ್ವರರ ಅನುಗ್ರಹವಾಗಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಸಾಧಿಸಿದ ಪರಿ ಇಲ್ಲಿ – ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅಷ್ಟೆ ಅಲ್ಲದೇ ಇಂಚಗೇರಿ ಸಂಪ್ರದಾಯ ನಿತ್ಯ ನಿಯಮಾವಳಿಗಳನ್ನು ಅದರಲ್ಲೂ ಸದ್ಗುರು ರಾಮದಾಸ 'ದಾಸಬೋಧವೇ' ಇವರ ಧರ್ಮ ಗ್ರಂಥವಾಗಿದೆ. ಗುರುಕೊಟ್ಟ ನಾಮ ಜಪ ಮತ್ತು ಭಜನೆಗಳು ಈ ಸಂಪ್ರದಾಯದ ಸಾಧನೆಗಳಾಗಿವೆ. ನಿತ್ಯ ನಿಯಮಗಳಲ್ಲಿ ಒಂದಾಗಿರುವ ಕಾಕಡಾರತಿ ಮುಂಜಾವಿನ ಭಜನೆ, ಅನನ್ಯ ಕೋರಿಕೆಯ ರಾತ್ರಿ ಭಜನೆ ಜಯ ಜಯ ಕಾರ ಹಾರ್ಯಕೆ ಪ್ರಾರ್ಥನೆ, ಅರ್ಪಣೆ, ಧ್ಯಾನ, ಮಂಗಳಾರತಿ, ಶೇಜಾರತಿ, ಆರ್ತಕರೆ, ಕರುಣಾಷ್ಟಕಗಳನ್ನು ವಿವರಣೆಯನ್ನು ನೀಡಲಾಗಿದೆ.

ಮನುಷ್ಯ ತನ್ನ ಆತ್ಮವನ್ನು ಪರಮಾತ್ಮನಲ್ಲಿ ಒಂದಾಗಿಸುವ ಮುಂಚೆ ಎಲ್ಲರಂತೆ ಸದ್ಗುರು ಸಮರ್ಥ ಗಿರಿಮಲ್ಲೇಶ್ವರರು ಒಬ್ಬ ಸಾಮಾನ್ಯ ಗೃಹಸ್ಥ ಬದುಕನ್ನು ಸಾಗಿಸುತ್ತಾ

ವ್ಯಾಪಾರವನ್ನು ವೃತ್ತಿಯನ್ನಾಗಿಸಿಕೊಂಡು ಬದುಕಿನ ಬಂಡಿಯನ್ನು ಸಾಗಿಸುತ್ತಿದ್ದರು. ಈ ಬದುಕಿನ ವಿವರವನ್ನು ಒಳಗೊಂಡ ಮಾಹಿತಿಯನ್ನು ಭೋಗ ಸಮರ್ಥ ವಿಭಾಗದಲ್ಲಿ ಪ್ರತಿಪಾಧಿಸಲಾಗಿದೆ. ಇನ್ನೊಂದು ಭಾಗ ಯೋಗಾ ಯೋಗವನ್ನು ಅಂದರೆ ಒಬ್ಬ ಸಾಮಾನ್ಯ ವ್ಯಾಪಾರಸ್ಥನಾದ ಗಿರಿಮಲ್ಲಪ್ಪ ಸದ್ಗುರು ಸಮರ್ಥನಾದ ಬಗೆಯನ್ನು 'ಯೋಗ ಸಮರ್ಥ'ದಲ್ಲಿ ವಿವರಿಸಲಾಗಿದೆ.

ಜಮಖಂಡಿ ನಾಡಿನ ಮಣ್ಣಿನಲ್ಲಿ ಸಾಂಸ್ಕೃತಿಕ ಕಂಪು ವಿಸ್ತರವಾಗಿ ಹರಡಿರುತ್ತದೆ. ಗಿರಿಮಲ್ಲಪ್ಪನವರು ಆಧ್ಯಾತ್ಮಿಕದ ಕಡೆ ಒಲುವು ಮೂಡಲು ಇಲ್ಲಿಯ ಪರಿಸರವೂ ಕಾರಣವಾಗಿದೆ. ಇದೊಂದು ಮಹಾಯೋಗಿಗಳ ತಪಸ್ವಿಗಳ ಸಿದ್ಧರ, ಸಾಧಕರ ಯೌಗಿಕ ಶಲಾಕಾಸ್ಥಳ. ಉತ್ತರ-ಪಶ್ಚಿಮವಾಹಿನಿಗಳು ಸಾಗರ ಝುರಿಯಲ್ಲಿ ಮಿಲನಗೊಳ್ಳುವ ಸಂಗಮಸ್ಥಾನ. ಇಲ್ಲಿ ಮಿಂದ ಪವಿತ್ರೇಕೃತರಾದ ತಪಸ್ಸನ್ನಾಚರಿಸಿದ ಜಂಬುಮುನಿಗಳ ಅವಾಸಸ್ಥಾನ. ಅಂತೆಯೇ ಈ ಖಂಡಿ (ಕೋಡಿ) ಜಂಬುಖಂಡಿ. ಆ ಜಂಬುಕೇಶ್ವರ ಇಂದು ಚಿರಸ್ಥಾಯಿಯಾದ ಗ್ರಾಮದೇವತೆ.

ಅನೇಕ ಮತ-ಪಂಥಗಳಿಗೆ ಆಶ್ರಯ ಕೊಟ್ಟ ಇಂಚಗೇರಿ ಸಂಪ್ರದಾಯದ ಮೂಲ ಪುರುಷ ಗುರುಲಿಂಗ ಜಂಗಮ ಮಹಾರಾಜರು ಸಿದ್ಧಗಿರಿಯ ಕಾಡಸಿದ್ಧೇಶ್ವರರ ಅನುಗ್ರಹದಿಂದ ಪ್ರಾರಂಭಿಸಿದ್ದು ಮುಂದೆ ಇದು ಇಂಚಗೇರಿ ಸಂಪ್ರದಾಯವೆಂದು ಹೆಸರುವಾಸಿಯಾಯಿತು. ಈ ಸಂಪ್ರದಾಯಕ್ಕೆ ಇಲ್ಲಿ ಆಶ್ರಯ ದೊರೆಯಿತು. ಸದ್ಗುರು ಸಮರ್ಥ ಶ್ರೀ ಬಾಹುಸಾಹೇಬ ಮಹಾರಾಜರು ಈ ಸಂಪ್ರದಾಯವನ್ನು ಜಮಖಂಡಿಯಲ್ಲಿ ಬೆಳೆಸಲು ಪರಿಶ್ರಮವಹಿಸಿದರು. ಈ ಸಂಪ್ರದಾಯದ ಜಾತಿರಾಹಿತ್ಯ ಕರ್ಮಠತನದ ವಿದುರತೆ, ಸ್ತ್ರೀ-ಪುರುಷ ಸಮಾನತೆ, ನಿರಾಡಂಬರ ಜೀವನ ಇವೇ ಮುಂತಾದವುಗಳು ಜನರನ್ನು ಭಕ್ತಿ ಮಾರ್ಗಕ್ಕೆ ಹೆಚ್ಚಿದವು.

ಸ್ವಾತಂತ್ರ್ಯ ಚಳುವಳಿಯಲ್ಲಿ ಇಂಚಗೇರಿ ಸಂಪ್ರದಾಯದವರೇ ಆದ ಶ್ರೀ ಮಹಾದೇವಪ್ಪನವರು ಇದರಲ್ಲಿ ಭಾಗಿಗಳಾಗಿದ್ದರು. ಜಮಖಂಡಿ ಒಂದು ಸಂಸ್ಥಾನವಾಗಿತ್ತು. ಆದ್ದರಿಂದ ಬ್ರಿಟಿಷರಿಂದ ತಪ್ಪಿಸಿಕೊಳ್ಳಲು ಇದೊಂದು ಒಳ್ಳೆಯ ಸ್ಥಾನವಾಗಿತ್ತು. ಮಹಾದೇವಪ್ಪನವರ ಟೊಳ್ಳಿಯವರು ಇಲ್ಲಿರುವರೆಂದು ಸಂಸ್ಥಾನಿಕರ ಅನುಮತಿ ಪಡೆದು ಅವರನ್ನು ಹಿಡಿಯಲು ಒಂದು ಪೋಲೀಸ್ ಪಡೆ ಅವರ ಹಿಂದೆಯೇ ಇತ್ತು. ಇಲ್ಲಿ ಪುರಾಣ ನಡೆದುದರಿಂದ ಇಲ್ಲಿಯೂ ಅವರ ಜನರು ಇವರೆಂದು ಕೆಲವು ಕುಹತಿಗಳು ತಿಳಿಸಿದರು. ಈ ಪ್ರಕಾರವಾಗಿ ಶ್ರೀ ಘಂಟಿ ಫೌಜುದಾರರ ನೇತೃತ್ವದಲ್ಲಿ ಒಂದು ಪಡೆ ಜಮಖಂಡಿಯಲ್ಲಿ ಬೀಡು ಬಿಟ್ಟಿತು.

ಶ್ರೀ ಘಂಟಿ ಫೌಜುದಾರರು ಜಮಖಂಡಿ ಬಲ್ಲವರಾಗಿದ್ದರು. ಗುಪ್ತವಾಗಿ ಕವಟಗಿಯವರ ಮನೆಯಲ್ಲಿ ನಡೆಯುತ್ತಿರುವ ಸಪ್ತಾಹದಲ್ಲಿರುವ ಜನರನ್ನು ಪರೀಕ್ಷಿಸಿದರು. ಅವರ ಚಲ, ಚಲಾವಣೆಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿದರು. ಅಲ್ಲಿ ಸ್ವಾತಂತ್ರ್ಯ ಚಳುವಳಿಯ ಯಾವ ಸುಳಿವೂ ದೊರೆಯಲಿಲ್ಲ. ಆಗ ಅವರು ಚಳುವಳಿಯವರಲ್ಲವೆಂದೂ ತಮ್ಮ ಪಡೆಯನ್ನು ಬೇರೆಡೆಗೆ ತಿರುಗಿಸಿದರು. ಹೀಗೆ ಮುಂದೆ ಎರಗಬಹುದಾದ ಕುತ್ತಿನ ಸೂಚನೆಯನ್ನು ಗಿರೀಶರು ಮೊದಲೆ ತಿಳಿಸಿದ್ದರು. ಬಂದ ಕುತ್ತು ಗಟ್ಟಿಗೊಂಡು ಗುರುವಿನ ಮೇಲೆ ಹಾಕಿದ್ದರಿಂದ ಹೊರಗಿಂದ ಹೊರಗೆ ಹೋಯಿತು. ಅಂದು ಗಟ್ಟಿಗೊಂಡ ಕಾಳು ಕೊನೆಯವರೆಗೆ ಉಳಿದವು. ಹೀಗೆ ಭೋಗ ಸಮರ್ಥದಲ್ಲಿ ವಿವರಿಸಲಾಗಿದೆ[೪].

ಇನ್ನೂ ಯೋಗ ಸಮರ್ಥದಲ್ಲಿ ಡಾ. ಸಂಗಮೇಶ ಬಿರಾದಾರವರು ಸದ್ಗುರು ಸಮರ್ಥ ಗಿರೀಶ (ಗಿರಿಮಲ್ಲಪ್ಪ) ಸದ್ಗುರು ಸಮರ್ಥ ಗಿರಿಮಲ್ಲೇಶ್ವರನಾದುದು ಮತ್ತು ಲೌಕಿಕ ಬದುಕಿನಿಂದ ಪಾರಮಾರ್ಥಿಕ ಬದುಕಿಗೆ ಬದಲಾದ ಸಂಕ್ರಮಣ ಕಾಲವನ್ನು ತುಂಬಾ ಸಮರ್ಥವಾಗಿ ಚಿತ್ರಿಸಿದ್ದಾರೆ.

ಎಲ್ಲ ಜೀವರಾಶಿಗಳೆಲ್ಲಿ ಮಾನವ ಜನ್ಮ ಶ್ರೇಷ್ಟ. ಉತ್‌ಕ್ರಾಂತಿವಾದವೂ ಇದನ್ನೇ ಹೇಳುತ್ತದೆ. ಸಾರಾಸಾರ ವಿವೇಚನೆಯ ಇವನಲ್ಲಿರುವುದೇ ಈ ಶ್ರೇಷ್ಠತೆಗೆ ಕಾರಣ ಮಾನವನ ಅಂತಿಮ ಗುರಿ ಮುಕ್ತಿ. ಮುಕ್ತಿ ಎಂದರೆ ಬಿಡುಗಡೆ. ಈ ಬಿಡುಗಡೆಗೆ ಸಾಧನ ಅವನು ಮಾಡುವ ಕಾರ್ಯ. ಯಾವುದು ಒಳ್ಳೆಯದು, ಯಾವುದು ಕೆಟ್ಟದೂ ಎನ್ನುವದು ಸಾಪೇಕ್ಷವಾಗಿದ್ದರೂ ಮಹಾತ್ಮರು ಆಚರಿಸಿ ತೋರಿದ ಮಾರ್ಗವು ಉತ್ತಮವಾದುದೆಂದು ಸಾಮಾನ್ಯವಾಗಿ ಗ್ರಹಿಸಬಹುದಾಗಿದೆ. ಸ್ವಾರ್ಥವನ್ನು ಬಯಸದೇ 'ಸರ್ವೇಜನಾಃ ಸುಖಿನೋ ಭವಂತು' ಎಂಬುವುದೇ ಅವರ ಆಶೆಯ.

ಈ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಗಿಹೋದ ವಿಭೂತಿ ಪುರುಷರಲ್ಲಿ ಇಂಚಗೇರಿಯ ಶ್ರೀ ಗಿರಿಮಲ್ಲೇಶ್ವರ ಮಹಾರಾಜರು ಒಬ್ಬರು. ಕರ್ನಾಟಕ ಮಹಾರಾಷ್ಟ್ರದಲ್ಲಿ ಅವರ ಪ್ರಭಾವ ಯೋಗ ಸಮರ್ಥದಲ್ಲಿ ನೋಡಿದ ಅವರ ಜೀವನವೇ ಒಂದು ಮಾರ್ಗದರ್ಶನವಾಗಿದೆ. ಬಹುತರವಾಗಿ ಮಹಾತ್ಮರು ತಾವು ಹೀಗೆ ಆಚರಿಸಿ ಎಂದು ಹೇಳುವುದಕ್ಕಿಂತ ತಾವೇ ಹಾಗೆ ಆಚರಿಸಿ ತೋರಿಸಿ ಮಾರ್ಗದರ್ಶಕರಾಗುತ್ತಾರೆ.

ಶ್ರೀ ಗಿರಿಮಲ್ಲೇಶ್ವರ ಮಹಾರಾಜರ ಜೀವನ ಹತ್ತಾರು ರೀತಿಯಿಂದ ದಾರಿದೀಪವಾಗಿದೆ. ಅವರ ಜೀವನ ಚರಿತ್ರೆಯನ್ನು ಹೆಕ್ಕಿ ನೋಡಿದಾಗ ಪ್ರತ್ಯಂಗದಲ್ಲೂ ಒಂದೊಂದು ಮೌಲ್ಯವನ್ನು ಕಂಡುಕೊಳ್ಳಬಹುದಾಗಿದೆ.

೧) 'ಶರೀರ ಮಾಧ್ಯಂ ಖಲು ಧರ್ಮ ಸಾಧನಂ'
೨) ಮನುಷ್ಯ ಸ್ಥಿತಪ್ರಜ್ಞನಾಗಿರಬೇಕು ಎನ್ನುವುದು ಇವರು ಬದುಕಿನ ಮಂತ್ರವನ್ನಾಗಿಸಿಕೊಂಡಿದ್ದರು.
೩) ಧನದ ವ್ಯಾಮೋಹಕ್ಕೆ ನಿಲುಕದಾತನು ಧನಿಕನಾಗಬಹುದು. ಆದರೆ ಆತ್ಮ ಸಂತೃಪ್ತಿಯಿಂದಿರಲಾರ. ಅವನಿಗೆಂದೂ ನೆಮ್ಮದಿ ಇರಲಾರದು. ಗಂಟೆಗೆ ಗಂಟು ಹಾಕುವಲ್ಲಿಯೇ ಅವನ ವೇಳೆ ವ್ಯಯವಾಗುವುದಲ್ಲದೆ ಸದ್ವಿನಿಯೋಗವಾಗುವುದಿಲ್ಲ.
೪) ಶ್ರೀ ಗಿರಿಮಲ್ಲೇಶ್ವರ ಮಹಾರಾಜರಿಗೆ ತಾನೆಂಬುದೇ ಇಲ್ಲ. ಎಲ್ಲವೂ ಗುರುವಿನ ಕೃಪೆ. ಗುರುವಿನ ಮೇಲೆ ಭಾರ ಭಕ್ತಿಯ ಮೂಲತತ್ವವಾಗಿ ಇದನ್ನು ಬಳಸಿಕೊಂಡು ಬಂದರು.

ಹೀಗೆ ಸರಳವಾದ ವಿಚಾರ ಉನ್ನತವಾದ ಆಲೋಚನೆಯಿಂದ ಲಕ್ಷೋಪಲಕ್ಷ ಶಿಷ್ಯ ಬಳಗವನ್ನು ತನ್ನದನ್ನಾಗಿಸಿತು. ಈ ಸಂಪ್ರದಾಯದವರು ಕಾಯಯೋಗಿಗಳು. ಕಾಯಕದಲ್ಲಿ ಮೇಲೂ ಕೀಳೆಂಬುವುದನ್ನು ಅರಿಯುವವರಾಗಿದ್ದಾನೆ ಎನ್ನುವುದೇ ಈ ಪುಸ್ತಕದ ಮಹತ್ವವಾಗಿದೆ.

ಚಾಪ ಹಾಕತೀವ ಡಪ್ಪಿನ ಮ್ಯಾಲ : ತರಂಗ-೩ : ತೇರದಾಳದ ಲಾವಣಿಗಳ ಭಾಗ-೧ (ಸಂಗ್ರಹ) :

ಡಾ. ಸಂಗಮೇಶ ಬಿರಾದಾರವರು ಸಂಪಾದಿಸಿದ ಚಾಪ ಹಾಕತೀವ ಡಪ್ಪಿನ ಮ್ಯಾಲ (ತೇರದಾಳದ ಲಾವಣಿ, ಸಂಗ್ರಹ)ದ ಈ ಕೃತಿಯನ್ನು ವಿನಯ ಪ್ರಕಾಶನ ಜಮಖಂಡಿಯವರು ೨೦೦೮ರಲ್ಲಿ ಪ್ರಕಟಿಸಿದ್ದಾರೆ.

ಈ ಹಿಂದೆಯು ಲಾವಣಿ ಕುರಿತು ಒಂದನೆಯದರಲ್ಲಿ ಲಾವಣಿ ಸಾಹಿತ್ಯ ಮೀಮಾಂಸೆಯನ್ನು ಒಳಗೊಂಡಿದೆ. ಎರಡನೆಯ ಕೃತಿ ಪೌರಾಣಿಕ ಲಾವಣಿಗಳ ಸಂಗ್ರಹವಾಗಿದೆ. ತರಂಗ ೩ ಇದು ಕೇವಲ ತೇರದಾಳದ ಲಾವಣಿಗಳ ಸಂಗ್ರಹದ ಕುರಿತಾಗಿದೆ.

ಕನ್ನಡದ ಲಾವಣಿ ಸಾಹಿತ್ಯಕ್ಕೆ ತೇರದಾಳದವರದು ಅಪಾರವಾದ ಕೊಡುಗೆ. ಲಾವಣಿ ಸಾಹಿತ್ಯಕ್ಕೆ ಕವಿಗಳಾಗಿ ಬರೆದಿದ್ದಾರೆ. ವಸ್ತಾದರಾಗಿ ಕಲಿಸಿದ್ದಾರೆ. ಗಾಯಕರಾಗಿ ಹಾಡಿದ್ದಾರೆ, ಬಹುಶ್ರುತರಾಗಿ ಸಲಹೆ ನೀಡಿದ್ದಾರೆ, ಗೆಳೆಯರಾಗಿ ಹುರಿದುಂಬಿಸಿದ್ದಾರೆ, ಹೀಗೆ ಹತ್ತು ಹಲವು ರೀತಿಯಲ್ಲಿ ಲಾವಣಿ ಸಾಹಿತ್ಯದಲ್ಲಿ ಕೃಷಿ ಮಾಡಿದ್ದಾರೆ. ಆದರ್ಶಪ್ರೀಯರಾಗಿದ್ದಾರೆ. ಮೈಲುಗಲ್ಲಾಗಿ ನಿಂತಿದ್ದಾರೆ. ತೇರದಾಳದ ಒಂದು ಸಂಪ್ರದಾಯವನ್ನೇ ಹುಟ್ಟಿ ಹಾಕಿ ಬೆಳೆಸಿದ್ದಾರೆ.

ಕುರಿತೋದದೆಯೂ ಕಾವ್ಯ ಪ್ರಯೋಗ ಪರಿಣಿತ ಮತಿಗಳಾದ ಇವರು ಸಾಮಾಜಿಕ ಐತಿಹಾಸಿಕ, ಪೌರಾಣಿಕ ಪದ್ಯಗಳನ್ನು ಬರೆದಿದ್ದಾರೆ. ತಾತ್ವಿಕ ಪದ್ಯಗಳಲ್ಲಿ ಇವರದು ಸಿದ್ಧ ಹಸ್ತರು, ಹರದೇಶಿ ಹಾಡುಗಾರಿಕೆ, ಮಜಲಿನಲ್ಲಿ ಸೋಲನ್ನೇ ಕಂಡರಿಯದವರು, 'ಮೇಕ ಮಂಗಲಿ' ಕಟ್ಟಿ ಮೆರೆದವರೂ 'ಕಾಟಾಕಾ ಹಚ್ಚಿ' ಹಾಡಿದವರು. ಹಾಸ್ಯ ಹೊನಲಾಗಿ ಹರಿದಿದೆ. ವಿಡಂಬನೆ ಮೊನಚಾಗಿ ಮೂಡಿ ಬಂದುದನ್ನು ಈ ಕೆಳಗಿನ ಪದ್ಯಗಳಿಂದ ಅರಿಯಬಹುದು.

ಜ್ಯೋತೆಪ್ಪ ಸೈ ಸೌದಾಗರ ರಚಿಸಿದ 'ಸರ್ವಜ್ಞಾನದ ಯುಕ್ತಿ' 'ಎಲ್ಲಾ ಸುಳ್ಳ' ಎಲ್ಲಾ ಸುಳ್ಳ ಎಂಬ ಪದ್ಯದಲ್ಲಿ ಪಲ್ಲವಿಯಂತೂ ಬಹಳ ಪ್ರಸಿದ್ಧವಾಗಿದೆ.

ಪ್ರಪಂಚದಲ್ಲಿ ನೀ ತಿಳಿದ ನೋಡಿಕೊ ಸಂಸಾರ ಹೊಳಿ ಸುಳ್ಳಾ ।
ಬ್ರಹ್ಮಜ್ಞಾನ ಅನುಭಾವ ತಿಳಿದವಂತ ಮಾಯಾಜಾಲ ಸುಳ್ಳ ।
ದುಷ್ಟಬುದ್ಧಿ ದುರ್ಗುಣದ ಮನಸ್ಯಾಗ ಜ್ಞಾನ ಮಾರ್ಗ ಸುಳ್ಳಾ ।
ಜ್ಞಾನ ಅಮೃತ ಸಂವಿ ಉಂಡಂವಗ ಮಾನಾಪಮಾನ ಸುಳ್ಳ ।[೫]

ಹೀಗೆ ತತ್ವಜ್ಞಾನವನ್ನು ಹೊಂದಿದಂತೆ ಕಂಡರು ಸಾಮಾನ್ಯ ಜನರ ತಮ್ಮ ತತ್ವಗಳನ್ನು ವಿಚಾರಗಳನ್ನು ಹೀಗೆ ತಮ್ಮ ಲಾವಣಿಯ ಮುಖಾಂತರ ಹೇಳಿದ್ದನ್ನು ಇಲ್ಲಿ ಡಾ. ಸಂಗಮೇಶ ಬಿರಾದಾರವರು ತುಂಬಾ ನಿಷ್ಠೆಯಿಂದ ಆ ಲಾವಣಿಕಾರ ಬಳಿ ಹೋಗಿ ಹಾಡು ಸಂಗ್ರಹ ಮಾಡಿ ಸಂಪಾದಿಸಿದ್ದಾರೆ.

ಚತುರ ತುಕಾರಾಮ ಈತ ಲಾವಣಿ ಸಂಪ್ರದಾಯಕ್ಕೆ ಹೆಸರು ತಂದವನು. ಈತ ಜಮಖಂಡಿ ತಾಲೂಕಿನ ತೇರದಾಳದವ. ಅವನ ಕಾಲದಲ್ಲಿ ಇದು ಸಾಂಗಲಿ ಸಂಸ್ಥಾನಕ್ಕೆ ಸೇರಿತ್ತು. ಇಲ್ಲಿ ಮೊಪಗಾರರ ಒಂದೇ ಮನೆತನ, ಮೋಪಗಾರಿಕೆಯ – ಮನೆ ಕಟ್ಟುವ ಕೆಲಸ ಮಾಡುತ್ತಲೆ ಪದ ರಚನೆ ಮಾಡುತ್ತಿದ್ದ. ಸೈ ಸೌದಾಗಾರನೆಂದು ಬಿರುದಾಂಕಿತನಾದ ಜ್ಯೋತೆಪ್ಪ ಹನಗಂಡಿ ಇವನ ಗುರು ತುಳಜಾರಾಮ ಇವನ ವಸ್ತಾದ ಇವನು ತುಕಾರಾಮನಂತೆ ಮೋಪಗಾರಿಕೆ ಮಾಡಿದವ ನಿರಕ್ಷರಿ – ಆದರೂ ಬಹುಶ್ರುತನಾದುದರಿಂದ ಪದಗಳಿಗೆ ಸಾಮಗ್ರಿ ಒದಗಿಸುತ್ತ ತನ್ನ ಶಿಷ್ಯನನ್ನು ಈತ ಚತುರ ತುಕಾರಾಮ ಎಂದು ಕರೆದಿದ್ದಾನೆ ಎಂದೂ ಅವನ ಮೂಲವನ್ನು ವಿವರಿಸುತ್ತಾರೆ.

ಅಖಂಡ ಮಾತ ಚೌಕ – ೧ ರಲ್ಲಿ
ವೇದ ಓದಿದಂವ ಆದಿ ಬಲ್ಲನೊ ಅನಾದಿ ಮಾತಿದು ಬಾಡ್ಡಿಂದಾ ।
ಶಾಸ್ತ್ರ ಪುರಾಣಗಳ ವ್ಯಾಸ ಬಿರದಾನೋ ಖಾಸ ಉತ್ಪತ್ತಿ ಅವನಿಂದ ।

ಪದ್ಯದ ಕೊನೆಗೆ –

ತುಕಾರಾಮ ವಸ್ತಾದ ಬಿರುದ ಕೊಟ್ಟ ಹೋದವ್ವಾ ನಮಗ ।
ಗೋಪಾಳ – ದುರದುಂಡಿ ಯಂಕ ಮಾಧುಗ ॥ ೧ ॥
ಅಣ್ಣಾರಾಮನ ಹಾಡಾ ಸುತ್ತ ನಾಲ್ಕು ದಿಕ್ಕ ನಾಡಾಗ
ಮ್ಯಾಲ ಕೊಂಕಣ ನಾಡಾಗ ।

ಎನ್ನುವದರೊಂದಿಗೆ ಪೂರ್ಣಗೊಳ್ಳುತ್ತದೆ. ಇಲ್ಲಿಯೂ ಡಾ. ಸಂಗಮೇಶ ಬಿರಾದಾರವರ ಹಾಡುಗಾರರ ಸಾಮಾನ್ಯ ನುಡಿಯನ್ನು ವ್ಯಾಕರಣಾತ್ಮಕವಾಗಿ ಅರ್ಥ ಕೆಡದಂತೆ ಸಂಗ್ರಹಿಸಿ ಬರೆದು ಅವರ ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಮಾಧು – ಫುಲಾರಾಮ ಕ್ರಿ.ಶ. ೧೮೨೦ ರಲ್ಲಿ ಮಾಧುಗೌಂಡಿ – ಗೌಂಡಿ ಎನ್ನುವದು ಮನೆಯ ಕಟ್ಟಡ ಕೆಲಸವನ್ನು ಮಾಡುವವರಿಗೆ ಗೌಂಡಿ ಎನ್ನುತ್ತಾರೆ. ಘುಲಾರಾಮ ಶೇಡಜಿ, ಭಾಂಡೆಯ ವ್ಯಾಪಾರ ಮಾಡುತ್ತಿದ್ದ. ಇವರ ಹಾಡುಗಾರರು ಮಾತ್ರವಲ್ಲ ಸ್ವತಃ ಪದ್ಯವನ್ನು ರಚನೆ ಮಾಡುವರಾಗಿದ್ದರೋ ಎನ್ನುವುದನ್ನು ಬಿರಾದಾರವರ ಅವರ ಒಂದು ಪದ್ಯದ ಸಾಲನ್ನು ಹೆಕ್ಕಿ ತಗಿದಿದ್ದಾರೆ. ಅದು ಈ ರೀತಿ ಇದೆ ಎಂದು ಹೇಳುತ್ತಾರೆ. **'ಕಾಗದಮ್ಯಾಗ ಲಗುಮಾಡಿ ನೀ ಬರೆದ ತಾ ಮಾಧವರಾವ್ ಅರ್ಥ ಹೇಳಿದ'** ಎಂಬರ್ಥದಲ್ಲಿ ನಾವು ಇದರ ವಿವರಣೆಯನ್ನು ಕಾಣುತ್ತೇವೆ.

ಅಣ್ಣಾರಾಮ ಯಂಕಣ್ಣನ 'ಅನುಭಾವ'ದ ಹಾಡು ಈ ರೀತಿಯಿದೆ.

ಆಡು ಮಾತು ಎಲ್ಲಾ ಹಾಡಾ ಮಾಡೆತೀರಿ
ಯಾವ ನಾಡಾಗ ಆಯ್ತಿ ಅನುಭಾವಾ
ಮನಸಿನಂತೆ ಮಾತ ಯಾವ ಆಡತಾನ
ಅವಗ ಅನಬೇಕ ಸಂಬಶಿವ ॥[೬]

ಆಡುಮಾತಲ್ಲ ಹಾಡು ಆಗುವುದಿಲ್ಲ ಮನಸ್ಸಿನಿಂದ ಹೇಳಿದ ಮಾತು ಹಾಡು ಆಗುತ್ತದೆ. ಅವನನ್ನು ನಾವು ಸಾಂಬಶಿವ ಪರಮಾತ್ಮ ಎನ್ನಬಹುದೇ ಎನ್ನುವ ಮಾತು ತುಂಬಾ ಮಾರ್ಮಿಕವಾಗಿದೆ.

ಲಾವಣಿ ಎಂದರೆ ಲಾವಣ್ಯಗೀತೆ. ಶಾವಿರಕಿ ಎಂದರೆ ವೀರಗೀತೆ ಎಂಬ ಲಘುವಾದ ವ್ಯಾಖ್ಯಾನವನ್ನು ಮಾಡಲಾಗುತ್ತದೆ. ಶಾಬ್ದಿಕ ಅರ್ಥ ಏನೆ ಇದ್ದರೂ ಲಾವಣಿ ಸಾಹಿತ್ಯ ಎರಡನ್ನೂ ಒಳಗೊಂಡಿದ್ದ ಕಥನಗೀತ ಪ್ರಕಾರವಾಗಿದೆ. ಮೌಖಿಕ ಪರಂಪರೆಯಲ್ಲಿ ಇದರ ಮೂಲವನ್ನು ಕಂಡುಕೊಳ್ಳುವ ಪ್ರಯತ್ನ ಸಾಧ್ಯವಿಲ್ಲ. ಸುದೀರ್ಘವಾದ ಕಥಾನಕದ ಬೆಳವಣಿಗೆ ಹಾಗೂ ಅದರ ಉಳಿವಿಗೆ ಒಂದು ಹಂತದಲ್ಲಿ ಪಂಡಿತರ ಪ್ರವೇಶ ಅನಿವಾರ್ಯ ಹಾಗಾಗಿ 'ವಸ್ತಾದ'ರು ಈ ಲಾವಣಿ ಪರಂಪರೆಯ ಮೂಲ ಪುರುಷರು. ಕಾರಣಿಕರ್ತರು

ಕವಿ ಮಾಡಿ ಕಲಿಸಿದರು ಎಂಬ ಮಾತನ್ನು ಒಪ್ಪಲೇಬೇಕಾಗುತ್ತದೆ. ಹಾಡಬಲ್ಲ ಶಿಷ್ಯ – ಪ್ರಶಿಷ್ಯರಿಂದ ಪರಂಪರೆಯಿಂದ ಈ ಸಾಹಿತ್ಯ ಉಳಿದು ಬೆಳೆದು ಬಂದಿದೆ ಎಂದರೆ ತಪ್ಪಾಗಲಾರದು. ಇಲ್ಲಿ ಪಾಂಡಿತ್ಯಕ್ಕಿಂತ ಅನುಭವ ಮುಖ್ಯವೆಂದು ಈ ಗ್ರಂಥದ ಲೇಖಕರಾದ ಡಾ. ಸಂಗಮೇಶ ಬಿರಾದಾರವರು ಒಪ್ಪಿಕೊಂಡಿದ್ದಾರೆ.

ಈ ಕೃತಿಯಲ್ಲಿ ವಿಶೇಷವಾಗಿ ತೇರದಾಳದ ಲಾವಣಿಕಾರರ ಬಗ್ಗೆ ಅತ್ಯಂತ ಮಹತ್ವದ ಮಾಹಿತಿ ಸಂಗ್ರಹಿಸಿ ಮೂಲಪುರುಷ ಜ್ಯೋತೆಪ್ಪನಿಂದ ಚತುರ ತುಕಾರಾಮ ಅಲ್ಲದೆ ಜ್ಯೋತೆಪ್ಪನ ಶಿಷ್ಯ-ಪ್ರಶಿಷ್ಯರ ಕುರಿತು ವಿವರಿಸಿ ವಿವೇಚಿಸಿರುವುದು ಗಮನಾರ್ಹ. ಇದು ಕೇವಲ ಪರಿಚಯ ಗ್ರಂಥ ಎಂದು ಹೇಳಿರುವುದು ಅವರ ವಿನಮಯವನ್ನು ಎತ್ತಿ ತೋರಿಸುತ್ತ ಖಂಡಿತವಾಗಿಯೂ ಈ ಗ್ರಂಥಕ್ಕೆ ಒಂದು ಸಂಶೋಧನಾ ಮಹಾಪ್ರಬಂಧದ ಹರವಿದೆ.

ತುಂಬು ಪರಿಶ್ರಮ ಪಟ್ಟು, ಕ್ಷೇತ್ರ ಕಾರ್ಯ ಮಾಡಿ ಸಾಮಗ್ರಿಯನ್ನು ಸಂಗ್ರಹಿಸಿ ಮೂರು ತಲೆಮಾರಿನ ಲಾವಣಿಕಾರರು ಹಾಗೂ ಗಾಯಕರೊಂದಿಗೆ ಚರ್ಚಿಸಿ ಈ ಗ್ರಂಥ ರಚಿಸಿದ್ದಾರೆ. ತುಂಬ ಎಚ್ಚರದಿಂದ ಹನ್ನೊಂದು ಅಡಿವಟ್ಟೆಗಳನ್ನಿಟ್ಟು ಲಾವಣಿಯ ಪ್ರೇಕ್ಷಕರಿಂದ ಹಿಡಿದು ಮಾಹಿತಿ ನೀಡಿದವರವರೆಗೆ ವಿಷಯ ಸಂಗ್ರಹಿಸಿರುವುದು ಶಾಸ್ತ್ರ ಗ್ರಂಥ ರಚನಕಾರರಿಗೆ ಮಾದರಿಯಾಗಿದೆ.

ಕೆಲವೊಂದು ಕಡೆ ಲಾವಣಿಕಾರರ ಜಾತಿ ಮತ್ತು ಹೆಸರಿನ ಬಗ್ಗೆ ಬಿನ್ನಾಭಿಪ್ರಾಯಗಳು ಗಮನಕ್ಕೆ ಬಂದಾಗ ಅದರ ಬಗ್ಗೆ ಅಡಿಟಿಪ್ಪಣಿಯಲ್ಲಿ ಸೂಚಿಸಿ ವಿಮರ್ಶಾತ್ಮಕವಾಗಿ ಅದನ್ನು ತಿಳಿಯಲು ಮತ್ತು ತಿಳಿಸಲು ಪ್ರಯತ್ನಿಸಿದ್ದಾರೆ.

ಅಳಿವಿನಂಚಿನಲ್ಲಿರುವ ಇಂತಹ ಪದ್ಯಗಳನ್ನು ಸಂಗ್ರಹಿಸಿ ಮುಂದಿನ ತಲೆಮಾರಿಗೆ ವರ್ಗಾಯಿಸುವ ಪ್ರಕ್ರಿಯೆ ಇದೆಯಲ್ಲ ಇದು ಪ್ರಶಂಸನೀಯವಾದುದು.

ಬಯಲ ಬಯಕೆ (ಕಾವ್ಯ) :

ಬೆಳಗಿನ ಸೂರ್ಯ ರಶ್ಮಿಗೆ ಮೈಯೊಡ್ಡಿ ಅರಳಿದ ಕುಸುಮ ಎಲ್ಲರನ್ನು ಆಕರ್ಷಿಸಿ ಮನದಲ್ಲಿ ಮಂದಹಾಸವನ್ನು ಮೂಡಿಸುವುದರೊಂದಿಗೆ ತನ್ನ ಪರಿಮಳವನ್ನು ಸುತ್ತಲೆಲ್ಲ ಹರಡಿಸಿ ವಾತಾವರಣವನ್ನು ಆಹ್ಲಾದಕರಗೊಳಿಸುತ್ತದೆ. ಅಂತಹ ಕುಸುಮ ಅರಳಿರುವುದು 'ಬಯಲ ಬಯಕೆ' ಎಂಬ ಕಾವ್ಯದಲ್ಲಿ.

‘ಅಂಕುರ’ ಶೀರ್ಷಿಕೆಯ ಅಡಿಯಲ್ಲಿ ರಚಿತವಾದ ಕಾವ್ಯವು ಬಾಲ್ಯವನ್ನು ಮತ್ತೊಮ್ಮೆ ನೆನಪಿಸುತ್ತದೆ. ಮರಳಿನಲ್ಲಿ ಗುಬ್ಬಿಗೂಡು ಕಟ್ಟಿ ಆಟವಾಡುವ, ಕುಂಟುಪಿಲ್ಲಿ, ಬಿಲ್ಲಿಯ ಆಟಗಳಲ್ಲಿಯ ಆನಂದವನ್ನು ಮೆಲುಕು ಹಾಕಿದ್ದಾರೆ. ಅಷ್ಟೇ ಅಲ್ಲದೆ ಯೌವನದಲ್ಲಿ ಕಂಡ ಕನಸುಗಳ ಚಿತ್ರಣವಿದೆ. ಪ್ರೀತಿಯ ಹಲವು ರೂಪಗಳಾದ ಪ್ರೇಮ, ವಾತ್ಸಲ್ಯ, ಪ್ರಣಯ, ಭಕ್ತಿ ಮುಂತಾದವುಗಳನ್ನು ನಿದರ್ಶನಗಳ ಮೂಲಕ ಹೇಳಿಕೊಂಡಿದ್ದಾರೆ.

ಇಡೀ ಪದ್ಯದಲ್ಲಿ ಶಿವನೆ ಸಖ, ಸುಖ, ಪ್ರಾಣ, ಪತಿ, ಗತಿ, ಮತಿ, ಸರ್ವಸ್ವ ಎಂಬ ಭಕ್ತಿಯ ಅಂಕುರವಿದೆ.

‘ಬಯಕೆ’ ಎಂಬ ಕಾವ್ಯದಲ್ಲಿ ವ್ಯಕ್ತಿ ಹೊರಗಿನಿಂದ ಸಾಂಸಾರಿಕ ಬದುಕನ್ನು ನೆಚ್ಚಿಕೊಂಡು ಎಲ್ಲವೂ ನನ್ನದಾಗಬೇಕೆಂಬ ಮನಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಎಂ. ಗೋಪಾಲಕೃಷ್ಣರ ಮಾತು ‘ಇರುವುದೆಲ್ಲವ ಬಿಟ್ಟು ಇರುದುದೆಡೆಗೆ ಸೆಳೆಯುವುದೇ ಜೀವನ’ ಎಂಬುವುದನ್ನು ನೆನಪಿಸುತ್ತದೆ. ಇಡೀ ಪದ್ಯ ಇದ್ದು ಇರದಿರುವ ಅಂದರೆ ಪ್ರಯೋಜನಕ್ಕೆ ಬಾರದಿರುವ ಸೋಮನಾಥನ ಶತಕದಲ್ಲಿ ಹೇಳುವಂತೆ ‘ಉಣದಿರ್ಪಾ ಧನಮಿರ್ದೊಡೇನು ಸುತನಿರ್ದೇಂ ಮುಪ್ಪಿನಲ್ಲಾಗದ’ ಎನ್ನುವಂತಿದೆ ಪರಮಾತ್ಮನ ಅರಿಯದ ಜ್ಞಾನ ವ್ಯರ್ಥ, ಅರಿಯುವಂಥ ಆತ್ಮ ಜ್ಞಾನವನ್ನು ಕರುಣಿಸು ಎಂದು ನಿವೇದಿಸಿದ್ದಾರೆ.

ಒಬ್ಬ ತಾಯಿ ಫಲವು ತಪ್ಪಿದ ಬಂಜೆತನದ ವೇದನೆಯಂತೆ ಕರವು ಕಳೆದುಕೊಂಡ ಆಕಳಿನಂತೆ ಪರಮಾತ್ಮನ ಅಗಲುವಿಕೆಯಿಂದ ನೋವು ಅದನ್ನರಿಯುವದು ಬೇರೆಯವರಿಗೆ ಅರ್ಥವಾಗದು ಎಂಬುವುದನ್ನು ‘ವಿರಹ’ದಲ್ಲಿ ತಿಳಿಸಿದ್ದಾರೆ.

ಇನ್ನೂ ಪರಮಾತ್ಮನ ಇರುವಿಕೆಯನ್ನು ಅಲ್ಲಮಪ್ರಭು ತಿಳಿಸುವಂತೆ ಶಿಲೆಯೊಳಗಿನ ಬೆಂಕಿಯಂತೆ, ಜಲದೊಳಗಿನ ಪ್ರತಿಬಿಂಬದಂತೆ, ಬೀಜದೊಳಗಿನ ಮರದಂತೆ, ಫಲದೊಳಗಿನ ಮಾಧುರ್ಯದಂತೆ ಪರಮಾತ್ಮನು, ಪ್ರತಿಯೊಂದು ಜೀವನದಲ್ಲಿದ್ದಾನೆಂಬುದನ್ನು ‘ಸ್ವರೂಪ’ ಪದ್ಯ ತಿಳಿಸುತ್ತದೆ.

ಲೋಕದ ಚೆಷ್ಟೆಗೆ ರವಿ ಬೀಜವಾದಂತೆ, ಕರ್ಣಂಗಳ ಚೆಷ್ಟೆಗಳ ಮನವೇ ಬೀಜ, ಎನಗುಳ್ಳದೊಂದು ಮನ ಆ ಮನ ನಿನ್ನಲ್ಲಿ ಸಿಲುಕಿದಡೆ ಎನಗೆ ಭವ ಉಂಟೆ ಎಂದು ಕೇಳುವಂತೆ ಎಲ್ಲ ಕೆಲಸಗಳಿಗೆ ಮೂಲವಾದ ಮನಸ್ಸನ್ನು ಅರಿಯುವುದು ಅದನ್ನು ಪರಮಾತ್ಮನಲ್ಲಿ ನೆಲಸಿದರೆ ಭವವಿಲ್ಲ ಎನ್ನುತ್ತಾರೆ. ಜನರು ಫಲಭರಿತವಾದ ಮರಕ್ಕೆ ಕಲ್ಲೆಸೆಯುತ್ತಾರೆ. ಫಲವಿಲ್ಲದ ಮರಕ್ಕೆ ಯಾರು ಕಲ್ಲು ಎಸೆಯುವುದಿಲ್ಲ. ಹಾಗೆಯೇ ಭಕ್ತಿ ಮಾರ್ಗದಿಂದ ನಡೆಯುವವರಿಗೆ ಅನೇಕ ನಿಂದನೆಗಳು ಬಂದರು ಅವುಗಳನ್ನು ಸಹಿಸಿಕೊಳ್ಳಬೇಕು ಎನ್ನುತ್ತಾರೆ.

ಅನಂತ ನೀಲಾಕಾಶದಲ್ಲಿ ಎಲ್ಲವೂ ಕಂಡು ಕ್ಷಣ ಮಾತ್ರದಲ್ಲಿ ಭ್ರಮಗೆ ಸಿಲುಕುವಂತೆ ಮಾಡಿ ಮಾಯವಾಗುವ ಅನಂತದಲ್ಲಿ ಲೀನವಾಗುವಿಕೆ ಎಲ್ಲದರ ಹಂಗು ತೊರೆದು ನಿರ್ಭಾವ ನಿರ್ಗುಣದೊಂದಿಗೆ ಬಯಲಿನಲ್ಲಿ ಬಯಲಾಗುವ ಬಯಕೆಯನ್ನು ಡಾ. ಸಂಗಮೇಶ ಬಿರಾದಾರವರು ಈ ಕಾವ್ಯದಲ್ಲಿ ನಿವೇದಿಸಿಕೊಂಡಿದ್ದಾರೆ.

ಪಾರಿಜಾತ ಪುಷ್ಪಗಳು :

ದಕ್ಷಿಣ ಕನ್ನಡದಲ್ಲಿ ಯಕ್ಷಗಾನ ಕಲೆಯನ್ನು ಎಷ್ಟು ಶ್ರದ್ಧಾ ಭಕ್ತಿಯಿಂದ ಮೇಳದವರು ನಡೆಸಿಕೊಂಡು ಬರುತ್ತಾರೊ ಹಾಗೆ ಉತ್ತರ ಕರ್ನಾಟಕದಲ್ಲಿ ಜಾನಪದ ಕಲೆಯಲ್ಲಿ 'ಪಾರಿಜಾತ'ವೂ ಒಂದು. ಇದರಲ್ಲಿ ಪೌರಾಣಿಕ ಕತೆಗಳಿವೆ. ವ್ಯಂಗ್ಯವಿದೆ, ಭಕ್ತಿಮಾರ್ಗವಿದೆ. ಹೀಗೆ ಹಲವಾರು ವೈವಿಧ್ಯತೆಯನ್ನು ಹೊಂದಿರುವ 'ಪಾರಿಜಾತ'ದ ಕುರಿತು ಡಾ. ಸಂಗಮೇಶ ಬಿರಾದಾರವರು ೨೦೦೯ರಲ್ಲಿ 'ಪಾರಿಜಾತ ಪುಷ್ಪಗಳು' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಇದರಲ್ಲಿ ಪಾರಿಜಾತಕ್ಕೆ ಸಂಬಂಧಪಟ್ಟಂತೆ ನಾಲ್ಕು ಲೇಖನಗಳು, ಸಣ್ಣಾಟಕ್ಕೆ ಸಂಬಂಧಪಟ್ಟಂತೆ ಒಂದು ಲೇಖನ. ಹೀಗೆ ಒಟ್ಟು ಐದು ಲೇಖನಗಳು ೮೨ ಪುಟಗಳಲ್ಲಿ ರೂಪಿತವಾಗಿದೆ. ತುಂಗಳ ಗೆಳೆಯರ ಬಳಗ ಪ್ರಕಾಶನದಲ್ಲಿ ಕೃತಿ ಹೊರ ಬಂದಿದೆ.

ಈ ಪುಸ್ತಕದ ಮೊದಲ ಲೇಖನ 'ಜಮಖಂಡಿ ತಾಲೂಕಿನ ಶ್ರೀಕೃಷ್ಣ ಪಾರಿಜಾತ ಕಂಪನಿಗಳು' ಇದರಲ್ಲಿ ಡಾ. ಸಂಗಮೇಶ ಬಿರಾದಾರವರು ಪಾರಿಜಾತ ಕಂಪನಿಗಳ ಹುಟ್ಟು ಬೆಳವಣಿಗೆ ಅಂತ್ಯ ಕುರಿತು ವಿಷಯದ ಮಾಹಿತಿಯನ್ನು ನೀಡುತ್ತಾರೆ. ಕಂಪನಿ ಮಾಲಿಕರು ಕೊಡುವ ಸಂಬಳಕ್ಕಿಂತಲೂ ಕಲಾರಾಧನೆಯನ್ನು ಆರಾಧಿಸಿ ದುಡಿಯುವ ನಟಿಸುವ ಕಲಾವಿದರಿದ್ದದನ್ನು ಮತ್ತು ಕಂಪನಿ ಮಾಲಿಕರಿಗೆ ಮತ್ತು ಕಲಾವಿದರಲ್ಲಿ ಎಷ್ಟೇ ಐಕ್ಯಮತವನ್ನು ಸ್ಥಾಪಿಸುವಲ್ಲಿ ಪ್ರಯತ್ನ ಪಟ್ಟರೂ ಕಂಪನಿ ಮುರಿದು ಹಠಕ್ಕೆ ಬಿದ್ದು ಹೊಸ ಕಂಪನಿಯನ್ನು ಸ್ಥಾಪಿಸಿದನ್ನು ತಮ್ಮ ಕ್ಷೇತ್ರ ಕಾರ್ಯದಲ್ಲಿ ಕಂಡುಕೊಂಡದ್ದನ್ನು ತುಂಬಾ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಆ ಭಾಗದ ಜನರು ಹಬ್ಬ ಹರಿದಿನಗಳಲ್ಲಿ ದೇವರ ರಥೋತ್ಸವ ಜಾತ್ರೆಗಳಲ್ಲಿ 'ಪಾರಿಜಾತ'ವನ್ನು ಕರೆಯಿಸುವ ರಂಗ ಆಸಕ್ತಿಯನ್ನು ಅರಿಯುವಲ್ಲಿ ಇವರ ಕಾರ್ಯವನ್ನು ಮೆಚ್ಚಬೇಕು.

ಬೆಳಗಾವಿ ಜಿಲ್ಲೆಯಲ್ಲಿ ಹುಟ್ಟಿದ 'ಶ್ರೀಕೃಷ್ಣ ಪಾರಿಜಾತ' ವಿಜಯಪುರ (ವಿಜಾಪುರ) ಬಾಗಲಕೋಟ ಜಿಲ್ಲೆಗಳಲ್ಲಿಯೂ ಹತ್ತಾರು ಕಂಪನಿಗಳನ್ನು ನೂರಾರು ಕಲಾವಿದರನ್ನು ಪಡೆದುಕೊಂಡು ಜನಪದ ರಂಗ ಭೂಮಿಯನ್ನು ಶ್ರೀಮಂತಗೊಳಿಸಿದ್ದು ನಿಜ. ಜಮಖಂಡಿ ತಾಲ್ಲೂಕಿನಲ್ಲಿಯೂ ಹಲವಾರು ಪಾರಿಜಾತ ಕಂಪನಿಗಳ ಹೆಜ್ಜೆ ಗುರುತುಗಳನ್ನು ಗುರುತಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಊರಿನಿಂದ ವ್ಯಕ್ತಿಯಿಂದ ಪಾರಿಜಾತ ಕಂಪನಿಗಳು ಪ್ರಸಿದ್ಧಿಗೆ ಬಂದುದುಂಟು ಎಂದು ಹೇಳುತ್ತಾ ಈ ಕೆಳಗಿನವುಗಳನ್ನು ಹೆಸರಿಸುತ್ತಾರೆ.

ಕುಂಚನೂರು ಪಾರಿಜಾತ, ನಾವಲಗಿಯ ಪಾರಿಜಾತ, ಇವು ಊರ ಹೆಸರಿನಿಂದ ಪ್ರಸಿದ್ಧವಾದವು. ಸೌದಿ ಮಲ್ಲಯ್ಯನ ಪಾರಿಜಾತ, ಜಮಖಂಡಿಯ ಅಪ್ಪಾಲಾಲನ ಪಾರಿಜಾತ ಇವು ವ್ಯಕ್ತಿಗತ ಹೆಸರಿನಿಂದ ಪ್ರಸಿದ್ಧವಾದವುಗಳಾಗಿವೆ. ಕೆಲವೊಂದು ಕಂಪನಿಗಳು ದೇವರ ಹೆಸರನ್ನು ಇಟ್ಟುಕೊಂಡಿವೆ. ಉದಾ : ಶ್ರೀ ಮಹಾದೇವ ಕೃಷ್ಣ ಪಾರಿಜಾತ (೧೯೨೦), ಶ್ರೀ ಗುರು ಮಹಾದೇವ ಪ್ರಸಾದ ಪಾರಿಜಾತ (೧೯೪೮), ಶ್ರೀ ಕಾಡಸಿದ್ಧೇಶ್ವರ ಶ್ರೀಕೃಷ್ಣ ಪಾರಿಜಾತ ಸಂಘ, ಶ್ರೀ ರಾಮೇಶ್ವರ ಶ್ರೀಕೃಷ್ಣ ಪಾರಿಜಾತ, ಶ್ರೀ ಕೃಷ್ಣ ಪಾರಿಜಾತ ಸಂಘ, ತಿಕೋಟಾ, ನಾವಲಗಿಯ ಪಾರಿಜಾತ ಕಂಪನಿ (೧೯೩೦), ಶ್ರೀ ಶಂಕರಾನಂದ ಪರಮಹಂಸ, ಶ್ರೀ ಕೃಷ್ಣ ಪಾರಿಜಾತ ಕಂಪನಿ (೧೯೫೧), ಶ್ರೀ ನಿರುಪಾದೇಶ್ವರ ಶ್ರೀಕೃಷ್ಣ ಪಾರಿಜಾತ ಕಂಪನಿ ನಾವಲಗಿ ಹೀಗೆ ಜಮಖಂಡಿ ಪರಿಸರದಲ್ಲಿ ಹುಟ್ಟಿಕೊಂಡ ಪಾರಿಜಾತದ ಪರಿಮಳವು ಎಲ್ಲೆಡೆ ಹರಡಿದನ್ನು ಚರ್ಚಿಸುತ್ತಾರೆ. ಜೊತೆಗೆ ಆಯಾ ಮೇಳದಲ್ಲಿರುವ ಪ್ರಧಾನ ಪಾತ್ರದಾರಿಗಳ ಕುರಿತು ವಿವರಿಸಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ 'ಶ್ರೀಕೃಷ್ಣ ಪಾರಿಜಾತ ಹಾಸ್ಯ ಮತ್ತು ಆಧ್ಯಾತ್ಮ' ಎಂಬ ವಿಷಯವನ್ನು ತೆಗೆದುಕೊಂಡು ಚರ್ಚಿಸಿದ್ದಾರೆ. ಪಾರಿಜಾತವೂ ಹಲವು ವೈಶಿಷ್ಟ್ಯದಿಂದ ತೂಗಿ ನೋಡಿದರೂ ಸಣ್ಣಾಟವೇ ಹೊರತು ಬೇರೆನಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಪಾರಿಜಾತವೂ ಮಾನವನ ಬಾಲ್ಯ, ಯೌವನ, ವೃದ್ಧಾಪ್ಯಗಳನ್ನು ಪ್ರತಿನಿಧಿಸುವಂತೆ ಅನುಕ್ರಮವಾಗಿ ಗೊಲ್ಲತಿ ಬಾಲಗೋಪಾಲರ ಕ್ರೀಡಾ ವಿಲಾಸ, ಕೃಷ್ಣ–ರುಕ್ಮಿಣಿ–ಸತ್ಯಭಾಮೆಯರ ಸಾಂಸಾರಿಕ ಜೀವನ ಮತ್ತು ಕೃಷ್ಣ ಕೊರವಂಜಿಯಾಗಿ ಬರುವ ಆಧ್ಯಾತ್ಮಿಕ ಸನ್ನಿವೇಶಗಳನ್ನು ಕಲ್ಪಿಸಿ ಸಂಯೋಜಿಸಲಾಗಿದೆ ಎಂದು ಲೇಖಕರಾದ ಡಾ. ಸಂಗಮೇಶ ಬಿರಾದಾರವರು ತರ್ಕಿಸಿದ್ದು ಆಲೋಚನೆಕೊಂಡೊಯ್ಯುತ್ತದೆ. ಅವರು ಇಲ್ಲಿ ಮುಖ್ಯವಾಗಿ ಗಮನಿಸಿದ್ದು ಹಾಸ್ಯರಸ ಪೋಷಣೆ ಮತ್ತು ಆಧ್ಯಾತ್ಮ ಚಿಂತನೆ. 'ನಕ್ಕರದೆ ಸ್ವರ್ಗ' ಎನ್ನುವ ಅನುಭವಪೂರಿತ ಮಾತಿನ ತಥ್ಯ ಶ್ರೀಕೃಷ್ಣ ಪಾರಿಜಾತದಲ್ಲಿ ಹಾಸು ಹೊಕ್ಕಾಗಿದ್ದನ್ನು ಗಮನಿಸುತ್ತಾರೆ.

ಹಾಸ್ಯದ ಮೂಲಕವೇ ಆಧ್ಯಾತ್ಮ ಹಾಗೂ ನೀತಿಯ ವಿಚಾರಗಳನ್ನು ಬಿತ್ತರಿಸುವುದು. ಪಾರಿಜಾತದ ಉದ್ದೇಶ. ಭಾಗವತ (ದೂತೆ) ಮರಿಭಾಗವತ (ಅಡ್ಡದೂತೆ)ರು ಹಾಸ್ಯದ ಹೊನಲನ್ನೆ ಪಾರಿಜಾತದುದ್ದಕ್ಕೂ ಹರಿಸುತ್ತ ಬಂದಿದ್ದಾರೆ. ಭಾಗವತ ನಕ್ಕು ನಗಿಸುವುದೇ ಮೂಲ ಸೂತ್ರ ಎಂಬಂತೆ ಪಾರಿಜಾತವನ್ನು ಮುಂದುವರೆಸುತ್ತಾರೆ. ಪಾರಿಜಾತದ ಸೂತ್ರದಾರ ಮಾತು ಮಾತಿಗೆ ನಗೆಯನ್ನು ಹೊತ್ತಿಸಬಲ್ಲ, ಪಾರಿಜಾತದ ನಿಜವಾದ ನಗೆಗಾರ – ಭಾಗವತನೆ. ಕೃಷ್ಣ, ರುಕ್ಮಿಣಿ, ಸತ್ಯಭಾಮೆ, ಕೊರವಂಜಿ, ನಾರದ ಎಲ್ಲ ಪಾತ್ರಗಳೊಂದಿಗೆ ಈತನ ಸರಿಗೆಯ ಹಾಸ್ಯ ಇದ್ದದ್ದೇ ಕೊನೆಗೆ ತನ್ನನ್ನು ತಾನೇ ಗೇಲಿಮಾಡಿಕೊಂಡು ಕಳವಳ ಪಡುತ್ತ ಮುಸು ಮುಸುನಗುವ ಭಾಗವತನ ವಿನೋದ ವಿಲಾಸಕ್ಕೆ 'ಬೇಶ್–ಭಲೇ' ಎನ್ನದೆ ಮಾರು ದೂತೆಯ ಮೂಲಕ ಹುಟ್ಟುವ ಹಾಸ್ಯವನ್ನು ಲೇಖಕರು

ಮುಖ್ಯವಾಗಿ ಶಬ್ದ ಚಮತ್ಕಾರ, ಶಬ್ದಮಾಲೆ, ದ್ವಂದ್ವಾರ್ಥ ವ್ಯಂಗೋಕ್ತಿ ಮತ್ತು ವಿರೋಧಾಭಾಸ ಎಂಬ ಐದು ಪ್ರಕಾರಗಳಾಗಿ ವಿಂಗಡಿಸಿ, ಉದಾಹರಣೆಯೊಂದಿಗೆ ಸ್ಪಷ್ಟವಾಗಿ ಹೇಳುವ ಮೂಲಕ, 'ಹಾಸ್ಯದೊಂದಿಗೆ ಪಾರಿಜಾತಕ್ಕೆ ಒಂದು ಮೆರಗು' ಎಂದು ಹೇಳುತ್ತಾರೆ. ಅದೇ ಕಾಲಕ್ಕೆ ಅಧ್ಯಾತ್ಮವೂ ಕೂಡ ಹಾಸ್ಯದೊಂದಿಗೆ ಸಮ್ಮಿಲತವಾದದನ್ನು ಹೇಳುತ್ತಾರೆ.

ಮೂರನೆಯ ಲೇಖನ 'ಶ್ರೀಕೃಷ್ಣ ಪಾರಿಜಾತ; ಛಂದಸ್ಸು' ಶ್ರೀಕೃಷ್ಣ ಪಾರಿಜಾತ ಸಣ್ಣಾಟಗಳಿಗಿಂತ ಭಿನ್ನವಾದುದು. ತನ್ನದೆಯಾದ ವಿಶಿಷ್ಟ ಸಂಗೀತ ಶೈಲಿಯಿಂದ ಅದೊಂದು ಸ್ವತಂತ್ರ ರಂಗ ಪ್ರಕಾರವೆಂದು ಗುರುತಿಸಲಾಗಿದ್ದರೂ ಅನ್ಯಾದೃಶ್ಯವಾದ ಸಂಭಾಷಣೆ, ವಿಶಿಷ್ಟ ಹಾಡುಗಾರಿಕೆ, ಮೇಲಾದ ಸನ್ನಿವೇಶ ಸಂಯೋಜನೆಗಳಿಂದ ಜನಮನವನ್ನು ಗೆದ್ದಿದೆ. ಛಂದಸ್ಸು ಕೂಡ ಇಲ್ಲಿ ತನ್ನತನವನ್ನು ಅಚ್ಚೊತ್ತಿದೆ. ಇಂದು ಪ್ರಚಾರದಲ್ಲಿರುವ ದೇಸಿಯ ವೃತ್ತಗಳಿಗೆ ವ್ಯತಿರಿಕ್ತವಾದ ಪದ್ಯ ಜಾತಿಗಳು ಈ ಆಟದಲ್ಲಿ ಬಂದಿವೆ. ಕವಿರಾಜಮಾರ್ಗ ಕಾವ್ಯಾವಲೋಕನಕಾರರು ಹೇಳಿದರೂ. ಉದಾಹರಿಸಿದಿರುವ ಹಾಡಿನ ಮಟ್ಟಗಳು ಇಲ್ಲಿವೆ. ಇಲ್ಲಿನ ಹಾಡಿನ ಲಯಕ್ಕನುಗುಣವಾಗಿ ಛಂದಸ್ಸನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಅಪರಾಳ ತಮ್ಮಣ್ಣನ ಕೆಲವು ಪದ್ಯಗಳಿಗೆ ಛಂದಸ್ಸನ್ನು ಗುರುತಿಸುವ ಪ್ರಯತ್ನ ಡಾ. ಸಂಗಮೇಶ ಬಿರಾದಾರವರು ಮಾಡಿದ್ದಾರೆ. ಪಲ್ಲವಿ ರಹಿತ ಪದ್ಯಗಳಲ್ಲಿ ದ್ವಿಪದಿ ತ್ರಿಪದಿ ಮತ್ತು ಚೌಪದಿ ಎಂದು ಮೂರು ಪ್ರಕಾರಗಳು ಮತ್ತೆ ಅದರಲ್ಲಿ ಉಪಪ್ರಧಾನ ಮಾಡುತ್ತಾರೆ. 'ದ್ವಿಪದಿ'ಗಳಲ್ಲಿ ಮಥನ, ಮದನ, ನವನೀತ, ಸಂದಾನ, ಶ್ರೀಕಾಂಡ, ಕಾಮಿನಿ, ರುಕ್ಮೀಣಿ, ಗೋಕುಲ ಎಂದು ಗುರುತಿಸಿ ಪಾರಿಜಾತದ ಹಾಡುಗಳು ವಿವರಿಸುತ್ತಾರೆ.

ನಾಲ್ಕನೆಯ ಅಧ್ಯಾಯದಲ್ಲಿ 'ಶ್ರೀಕೃಷ್ಣ ಪಾರಿಜಾತ; ಶಿವಪಾರಿಜಾತ' ಇವುಗಳ ತೌಲನಿಕ ಅಧ್ಯಯನದ ವಿವೇಚನೆ ಇಲ್ಲಿ ಸಮಗ್ರವಾಗಿ ನಡೆದಿದೆ. ಇವುಗಳೊಂದಿಗಿನ ಸೂಕ್ಷ್ಮ ನೋಟಗಳೊಂದಿಗೆ ಸಾಮ್ಯ-ವೈಷಮ್ಯವನ್ನು ತುಂಬ ಕರಾರುವಕ್ಕಾಗಿ ಗುರುತಿಸಿದ್ದಾರೆ. ಪಾರಿಜಾತ ಕಥೆ ಮತ್ತು ಪ್ರಯೋಗಗಳ ಸ್ಪಷ್ಟ ಕಲ್ಪನೆ ಲೇಖಕರಿಗೆ ಇರುವುದರಿಂದ ಇಂಥ ಅಧ್ಯಯನ ಸಾಧ್ಯವಾಗಿದೆ. ತೌಲನಿಕ ಅಧ್ಯಯನಕ್ಕೊಂದು ಮಾದರಿ ಇದು.

ಪಾರಿಜಾತ ಪುಷ್ಪದ ಸುತ್ತ ಹೆಣೆದ ಕಥೆ ತುಂಬಾ ಪ್ರಾಚೀನವಾದುದು. ಲೋಕ ವಿಖ್ಯಾತವಾದುದು ಕೂಡ. ಇದು ಅತ್ಯಂತ ಚಿಕ್ಕ ರೂಪದಲ್ಲಿ ತುಂಬ ಸ್ವಾರಸ್ಯಕರವಾಗಿ ಮೊಟ್ಟ ಮೊದಲು 'ಭಾಗವತ'ದಲ್ಲಿ ಕಾಣಿಸಿಕೊಂಡಿದೆ. ಇದೆ ಕತೆ 'ಹರಿವಂಶ' ಪುರಾಣದಲ್ಲಿ ವಿಸ್ತಾರವಾಗಿ ಬೆಳೆದಿದೆ. ಈ ಕಥೆಯಲ್ಲಿ ಅಂತರ್ಗತವಾದ ಪ್ರೇಮ, ಸವತಿ ಮತ್ಸರ್ಯಾದಿ ಸನ್ನಿವೇಶಗಳು ಮುಂದಿನ ಹಲವಾರು ಕವಿಗಳಿಗೆ ಸ್ಫೂರ್ತಿಯಾಗಿವೆ. ಇದೇ ಕಥೆಯನ್ನು ಆಧರಿಸಿ ಅಪರಾಳ ತಮ್ಮಣ್ಣ ಇದನ್ನು ಕನ್ನಡದಲ್ಲಿ ಹಾಡುಗಬ್ಬವಾಗಿ ರಚಿಸಿದನು. ಈ ಹಾಡುಗಬ್ಬವೇ ಕುಲಗೋಡ ತಮ್ಮಣ್ಣನಿಂದ 'ಪಾರಿಜಾತ'ವಾಗಿ ರೂಪಗೊಂಡಿತು. ಈ

ಬಯಲಾಟದ ಪ್ರಭಾವ ಪರಿಣಾಮದಿಂದ ಕಾಡಾಪೂರದ ಬಸವಂತಾಚಾರ್ಯ ಸಾಲಿಶಾಸ್ತ್ರೀಯವರು 'ಶಿವಪಾರಿಜಾತ'ವನ್ನು ಕೃಷ್ಣ ಪಾರಿಜಾತವಾಗಿ ಬರೆದರು. ಹೀಗಾಗಿ ಡಾ. ಸಂಗಮೇಶ ಬಿರಾದಾರವರು 'ತೌಲನಿಕ ಅಧ್ಯಯನ'ಕ್ಕೆ ಒಳಪಡಿಸಿದ್ದು ಸೂಕ್ತವಾಗಿದೆ.

'ಕನ್ನಡ ಸಣ್ಣಾಟ' ಕನ್ನಡ ಬಯಲಾಟ ಎಂಬುವುದು ಕೊನೆಯ ಲೇಖನವಾಗಿದೆ. ಬಯಲಾಟ-ಸಣ್ಣಾಟ 'ಡಪ್ಪಿನಾಟ ಕುರಿತು ಹಲವು ಅಧ್ಯಯನಗಳು ಆಗಿವೆ. ತಾವು ಕಂಡ ಜ್ಞಾನ ಅನುಭವದ ನೆಲೆಯಲ್ಲಿಯೇ ಸಣ್ಣಾಟ ಕುರಿತು ವಿಶ್ಲೇಷಿಸಿದ್ದಾರೆ. ದೊಡ್ಡಾಟಕ್ಕೆ ಭಿನ್ನವಾದ ರೀತಿಯಲ್ಲಿ ಸಣ್ಣಾಟ ಇರುವುದರಿಂದ ಶಾಸ್ತ್ರಕಾರರೇ ಇದನ್ನು ಸಣ್ಣಾಟವೆಂದು ಹೆಸರಿಸಿದುಂಟು. ಹಳ್ಳಿಗರು ಈ ಬಗೆಯ ಆಟಗಳನ್ನು ಆಟದ ಹೆಸರಿನಿಂದಲೇ ಕರೆಯುವುದು ವಾಡಿಕೆ. ಉದಾ : ಸಂಗ್ಯಾಬಾಳ್ಯಾನ ಆಟ, ರಾಧಾನಾಟ ಇತ್ಯಾದಿ. ಬೀದಿಯ ಆಟಗಳು ಒಂದಲ್ಲ ಒಂದ ರೀತಿಯಲ್ಲಿ ನಮ್ಮ ಹಳ್ಳಿಯ ಆಟ/ಬಯಲಾಟಗಳಿಗೆ ಮೂಲ ಪ್ರೇರಣೆಗಳಾಗಿವೆ.

ಒಟ್ಟಿನಲ್ಲಿ ಪಾರಿಜಾತ ಮತ್ತು ಸಣ್ಣಾಟ ರಂಗಪರಂಪರೆಯ ಸ್ಪಷ್ಟ ಪರಿಕಲ್ಪನೆಯನ್ನು ಲೇಖಕರು ಅತ್ಯಂತ ಸರಳ-ಸುಲಭ ಭಾಷೆಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. 'ಪಾರಿಜಾತ ಪುಷ್ಪಗಳು' ಈ ಕೃತಿ ಪಾರಿಜಾತ ರಂಗ ಪರಂಪರೆಯ ಅಧ್ಯಯನಕ್ಕೊಂದು ಗಮನಾರ್ಹ ಕೊಡುಗೆಯಾಗಿದೆ.

ಶ್ರದ್ಧಾ ಸುಮನ :

ಉತ್ತರ ಕರ್ನಾಟಕದ ಜೀವನಾಡಿ ಕೃಷ್ಣಾ ನದಿ ಈ ನದಿಯ ತಟದಲ್ಲಿರುವ ಜೂಗುಳವನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿಸಿಕೊಂಡು ಸುತ್ತಮುತ್ತಲಿನ ಗ್ರಾಮಗಳಲ್ಲಿ ಸಂಚರಿಸುತ್ತಾ ಪ್ರವಚನದ ಮೂಲಕ ಹೆಸರುವಾಸಿಯಾದ ಪರಮಪೂಜ್ಯ ಲಿಂಗೈಕ್ಯ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳವರ ೪೦ ವರ್ಷಗಳ ಜೀವನ ಚಿತ್ರಣವನ್ನು ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ.

ಪರಮಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಜೀವನವನ್ನು ಪ್ರಸ್ತುತ ಕೃತಿ ಹಂತ-ಹಂತವಾಗಿ ಚಿತ್ರಿಸುತ್ತದೆ. ಮೊದಲಿಗೆ ಅವರಿಗೆ ಗುರುನಮನ ಇಲ್ಲಿ ಗುರುಗಳ ಜೀವನ ಚಿತ್ರಣವನ್ನು ಕಾವ್ಯರೂಪದಲ್ಲಿ ಚಿತ್ರಿಸಲಾಗಿದೆ. ನಂತರ ಗುರುಗಳ ವಯಕ್ತಿಕ ಪರಿಚಯ, ಊರೂರು ಸುತ್ತುತ್ತಾ ಅವರು ಕೈಗೊಂಡ ಪ್ರವಚನಗಳು, ಪ್ರವಚನದ ಫಲಶೃತಿ, ಗುರುಗಳ ಸಾಹಿತ್ಯಿಕ ಸೇವೆ, ಅವರಿಂದ ರಚಿತವಾದ ಕೃತಿಗಳು ಗುರುವಿನ ಒಟ್ಟಾರೆ ಸಾಧನೆಗಳು ಇವುಗಳಿಗೆ ಸಾಕ್ಷಿಯಾಗಲಿರುವ ಕೆಲವು ಸುಂದರ ಭಾವಚಿತ್ರಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಗುರು-ಭಕ್ತ ನಡುವಿನ ಅನ್ಯೋನ್ಯ ಸಂಬಂಧವನ್ನು ಒಳಗೊಂಡಿರುವುದೇ ಈ ಪುಸ್ತಕದ ಹೂರಣವಾಗಿದೆ. ವೇದಾಂತ ಕೇಸರಿ ಎನಿಸಿಕೊಂಡ ಶ್ರೀ ಮಲ್ಲಿಕಾರ್ಜುನ ಮಹಾ ಶಿವಯೋಗಿಗಳೊಬ್ಬರ ಶರಣರು, ಸಾಧುಗಳು, ಸಂತರು, ಅವರೊಬ್ಬ ದೇವಪುರುಷರು. ಪ್ರವಚನ ಪ್ರಿಯರು, ಅನುಭಪೂರ್ಣ ವೇದೋಪನಿಸತ್ತು, ಆಗಮಗೀತೆ, ನಿಜಗುಣಶಾಸ್ತ್ರ, ಶರಣರ ವಚನಗಳನ್ನು ಮುಖೋದ್ಗತ ಮಾಡಿಕೊಂಡವರು.

ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಪೂರ್ವ ಹೆಸರು ಮುದಕಪ್ಪ ಸಾಮಾನ್ಯ ಒಕ್ಕಲುತನದಲ್ಲಿ ಮನೆತನದಲ್ಲಿ ಜನಿಸಿ ಸುಮಾರು ೨೦, ೨೧ ವರ್ಷಗಳವರೆಗೆ ಸಾಮಾನ್ಯ ಒಕ್ಕಲಿಗಕಾಗಿಯೇ ಇದ್ದರು. ೧೯೨೪ರಲ್ಲಿ ನಾಗನೂರಿನಲ್ಲಿ 'ಶಿವಾನಂದ'ರಿಂದ ಅನುಗ್ರಹ ಪಡೆದುಕೊಂಡು ಗುರು ದೀಕ್ಷೆ ನಂತರ ತಮ್ಮ ಮೂಲ ದಿಶೆಯನ್ನು ಬದಲಾಯಿಸಿದರು. ವ್ಯಾಕರಣ, ಕಾವ್ಯನ್ಯಾಯ, ವೇದಾಂತಧ್ಯಯನ ಗುರುವಿನ ಮಾರ್ಗದರ್ಶನಗಳ ಫಲವಾಗಿ ಜ್ಞಾನಯೋಗ ಮತ್ತು ಶಿವಯೋಗಗಳನ್ನು ಹೊಂದಿದರು. ಸಂಸ್ಕೃತ ಹಾಗೂ ಕನ್ನಡ ಎರಡೂ ವಿಷಯಗಳಲ್ಲಿ ಪಾಂಡಿತ್ಯವನ್ನು ಪಡೆದು ಇವರು ರಾಗಬದ್ಧವಾಗಿ ಹಾಡುತ್ತಾ ಪ್ರವಚನ ಮಾಡುತ್ತ ಶೋತ್ರಗಳ ಮನಗೆದ್ದಿದ್ದಾರೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಎರಡು ರಾಜ್ಯಗಳಲ್ಲಿ ಸಂಚರಿಸಿ ಪ್ರವಚನ ಮಾಡುತ್ತಾ ಹೃನ್ಮನ ಗೆಲ್ಲುವುದಲ್ಲದೆ ಶಿವಾನುಭವ ಮಂಟಪ ಹಾಗೂ ಜ್ಞಾನಯೋಗಾಶ್ರಮಗಳನ್ನು ಸ್ಥಾಪಿಸುವಲ್ಲಿ ಇದ್ದ ಇವರ ಶ್ರದ್ಧೆ ಹಾಗೂ ಮಾನಸ ಪುತ್ರರಾದ ಪೂಜ್ಯ ಸಿದ್ಧೇಶ್ವರ ಸ್ವಾಮಿಜಿಯವರನ್ನು ಶಿಷ್ಯರನ್ನಾಗಿ ಪಡೆದುಕೊಂಡು ಇವರ ವಿದ್ವತ್‌ನಿಂದ ಪೂಜ್ಯಶ್ರೀಗಳು ಅಂದರೆ ಗುರು ಶಿಷ್ಯರು ಲೋಕ ಶ್ರೇಷ್ಟರಾದರು ಎಂಬುವುದನ್ನು ತುಂಬಾ ಚೆನ್ನಾಗಿ ವಿವರಿಸಿದ್ದಾರೆ.

ಶ್ರದ್ಧಾ-ಸುಮನ ಪುಸ್ತಕವು ಒಂದು ಕಡೆ ಸಂಪೂರ್ಣವಾಗಿ ಮಲ್ಲಿಕಾರ್ಜುನ ಶ್ರೀಗಳ ಸಾಧನೆ ಸಿದ್ಧಿಗಳನ್ನು ಪರಿಚಯಿಸಿದರೆ ಇನ್ನೊಂದು ಕಡೆ ಜುಗೂಳ ಗ್ರಾಮದ ಭೌಗೋಳಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಹೋರಾಟದಲ್ಲಿ ಮಾತ್ರ ಇಲ್ಲಿಯ ಜನರು ಪಾಲ್ಗೊಳ್ಳದೇ ಅಧ್ಯಾತ್ಮಿಕ ಕ್ಷೇತ್ರಕ್ಕೂ ಸಾಕಷ್ಟು ಕೊಡುಗೆ ಕೊಟ್ಟಿದ್ದನ್ನು ಸ್ಮರಿಸಿದ್ದಾರೆ.

ಮಲ್ಲಿಕಾರ್ಜುನ ಶ್ರೀಗಳ ಕೃಪಾಶೀರ್ವಾದದಿಂದ ಜುಗೂಳವು ಅಭಿವೃದ್ಧಿ ಹೊಂದಿದ ಗ್ರಾಮವಾಗಿದೆ. ಇಲ್ಲಿನ ಎಲ್ಲ ಮಂದಿರಗಳ ವಿವರಣೆಯೊಂದಿಗೆ ಕೂಪೇಶ್ವರ ದೇವಾಲಯದ ಶಿಲ್ಪಕಲಾ ವೈಭವವೂ ಈ ಕ್ಷೇತ್ರದ ಅಭಿವೃದ್ಧಿಗೆ ಮತ್ತು ಪ್ರಸಿದ್ಧಿಗೆ ಕಾರಣವಾಗಿದೆ.

ಸತತ ೨೦-೨೯ ವರ್ಷಗಳ ಗುರು-ಭಕ್ತಿ ಅವಿನಾಭಾವ ಸಂಬಂಧ ಜುಗೂಳದಲ್ಲಿ ಹಚ್ಚ ಹಸಿರಾಗಿಯೇ ಉಳಿದಿದೆ. ಶ್ರೀಗಳವರ ಮಾನಸ ಪುತ್ರರಾದ ಶ್ರೀ ಸಿದ್ದೇಶ್ವರ ಸ್ವಾಮಿಗಳು ಜ್ಞಾನ ಯೋಗಾಶ್ರಮದಲ್ಲಿ ನೆಲೆ ನಿಂತಿರುವುದು ಜುಗೂಳ ಭಕ್ತಜನರ ಪುಣ್ಯ ವಿಶೇಷವೆಂದು ಹೇಳಿದ್ದಾರೆ.

ಹೀಗೆ ಶ್ರದ್ಧಾ-ಸುಮನ ಪುಸ್ತಕವು ಜುಗೂಳ ಗ್ರಾಮದ ಜನರ ಶ್ರದ್ಧೆ-ಭಕ್ತಿ-ನಿಷ್ಠೆಗಳ ಪ್ರತೀಕವಾಗಿ ಮೂಡಿಬಂದಿದೆ. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ಜೀವನ ಸಾಧನೆಯನ್ನು ಅತ್ಯಂತ ಸರಳವಾಗಿ ನಿರೂಪಿಸಿದ್ದಾರೆ. ಭಾವ ಚೈತ್ರಗಳು ಸನ್ನಿವೇಶಗಳಿಗೆ ಹಿಡಿದ ಕನ್ನಡಿಯಾಗಿ ವಿಷಯದ ಸ್ಪಷ್ಟತೆಗೆ ಸಾಕ್ಷಿಯಾಗಿದೆ ಎಂದು ಹೇಳಬಹುದು.

ಪೂರ್ಣಿಮೆಯ ಬೆಳದಿಂಗಳಲ್ಲಿ ಗುರುದರ್ಶನ :

ವೇದಾಂತ ಕೇಸರಿಗಳೆಂದೇ ಖ್ಯಾತನಾಮರಾಗಿದ್ದ ಬಿಜಾಪುರದ ಜ್ಞಾನಯೋಗಾಶ್ರಮದ ಪೂಜ್ಯರಾದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳ ಸಂಕ್ಷಿಪ್ತ ಜೀವನ ದರ್ಶನ 'ಗುರು ಪೂರ್ಣಿಮೆ' ಕಿರುಪುಸ್ತಕದಲ್ಲಿದೆ.

ಗುರುದೇವ ಮಲ್ಲಿಕಾರ್ಜುನ ೨೦೦೪ರಲ್ಲಿ ಶಿವಯೋಗಿಗಳ ಜನ್ಮಶತಮಾನೋತ್ಸವ (೨೦೦೪)ದ ಶುಭ ಸಂದರ್ಭದಲ್ಲಿ ಈ ರೂಪಕ ಬೆಳಕು ಕಂಡಿದೆ. 'ಕರಿಯ ಕನ್ನಡಿಯಲ್ಲಿ ಹಿಡಿದಿರಿಸುವ' ಹಾಗೆ ಗುರುಗಳ ಮಹಾನ್ ವ್ಯಕ್ತಿತ್ವವನ್ನು ಈ ಸಣ್ಣ ರೂಪಕದಲ್ಲಿ ಪ್ರತಿಬಿಂಬಿಸುವ ಪ್ರಯತ್ನ ಮಾಡಿರುವುದಾಗಿ ಲೇಖಕರು ಹೇಳುತ್ತಾರೆ.

ಹಿಮಾಲಯ ಸದೃಶ್ಯ ಘನ ವ್ಯಕ್ತಿತ್ವದ ಒಂದು ಮಹಾನ್ ಚೇತನದ ಕಾರ್ಯಸಿದ್ಧಿಗಳನ್ನು ೩೦ ಪುಟಗಳ ಒಂದು ಮಿತಿಯೊಳಗೆ ಹಿಡಿದು, ಚಿತ್ರಿಸುವುದು ಸಾಮಾನ್ಯ ಸಂಗತಿಯಲ್ಲ. ಉಪನಿಷತ್ತು, ಗೀತೆ, ಶರಣಸಾಹಿತ್ಯ, ಯೋಗ, ಜ್ಞಾನಗಳನ್ನು ಆಳವಾಗಿ ಅಧ್ಯಯನ ಮಾಡಿದವರು, ಸಾಧನೆ ಶ್ರಮಗಳಿಂದ ಗಳಿಸಿದ ಜ್ಞಾನವನ್ನು ಲೋಕ ಕಲ್ಯಾಣಕ್ಕಾಗಿ ಬಳಸಿಕೊಂಡವರು.

ಇಂಥ 'ಮಹಿಮ'ರನ್ನು ಅಕ್ಷರಗಳ ಮೂಲಕ ಪ್ರತಿಬಿಂಬಿಸುವುದು, ಸಾಹಸದ ಕಾರ್ಯವೇ ಸರಿ. ಈ ರೂಪಕದಲ್ಲಿ ಬರುವ ಇಬ್ಬರು ನಿರೂಪಕರು (ಅವರನ್ನು ನಿರೂಪಕ-೧, ನಿರೂಪಕ-೨ ಎಂದು ಕರೆದಿದ್ದಾರೆ) ಗುರುದೇವರ ಜೀವನದ ಎಳೆಯನ್ನು ಬಿಚ್ಚಿಡುತ್ತಾರೆ.

ಈ ನಿರೂಪಕರಿಗೆ ಪೂರಕವಾಗಿ ಬರುವ ಮುದುಕಪ್ಪ, ಗೆಳೆಯ, ತಾಯಿ, ತಂದೆ, ಶಿವಾನಂದ (ಸ್ವಾಮೀಜಿ) ಒಬ್ಬ, ಇನ್ನೊಬ್ಬ, ಮತ್ತೊಬ್ಬ..... ಹೀಗೆ ಹಲವಾರು ಪಾತ್ರಗಳ ಮೂಲಕ ಗುರುದೇವರ ವ್ಯಕ್ತಿತ್ವ ಅರಳತೊಡಗುತ್ತದೆ.

'ದುಡಿಯದವನಿಗೆ ತಿನ್ನುವ ಹಕ್ಕು ಇಲ್ಲ' ಎಂಬುದನ್ನು ತಾಯಿಯಿಂದ ಕೇಳಿಸಿಕೊಳ್ಳುವ ಮುದುಕಪ್ಪನ ಮೇಲೆ ಗದುಗಿನ ಶಿವಾನಂದ ಸ್ವಾಮಿಗಳು ಪ್ರಭಾವ ಬೀರುತ್ತಾರೆ. ಗುರು ಸನ್ನಿಧಿಯಲ್ಲಿ ಅಧ್ಯಯನ ಮುಂದುವರೆಯುತ್ತದೆ. ವ್ಯಾಕರಣ, ಕಾವ್ಯ, ನ್ಯಾಯ, ವೇದಾಂತ ಓದುತ್ತಾರೆ.

ಜ್ಞಾನಯೋಗ-ಶಿವಯೋಗಗಳನ್ನು ಪ್ರಾರಂಭಿಸಿದ್ದರಿಂದ ಮುಖದಲ್ಲಿ ದಿವ್ಯತೇಜ ಮೂಡುತ್ತದೆ. ವಾಣಿ ಶುದ್ಧವಾಗಿ ಅದು 'ಪ್ರಸಾದ ವಾಣಿ'ಯಾಗುತ್ತದೆ. ಹೀಗೆ ಪೂಜ್ಯರು ಬೆಳೆಯುತ್ತಾರೆ, ಬೆಳಗುತ್ತಾರೆ.

ಶ್ರೀ ಕಟ್ಟಿ ಅವರಂಥ ವೈಷ್ಣವ ಮತಾನುಯಾಯಿಗಳು, ಶ್ರೀ ಕಲ್ಲಪ್ಪ ಜಕಾತಿಯಂಥವರೂ ಪೂಜ್ಯರ ಪ್ರಭಾವಕ್ಕೆ ಒಳಗಾಗುತ್ತಾರೆ. ಮಹಾರಾಷ್ಟ್ರದ ಭಕ್ತರಿಗಾಗಿ ಎಂಟು ದಿನದಲ್ಲಿ ಮರಾಠಿ ಕಲಿತು, ಆ ಭಾಷೆಯಲ್ಲಿ ಪ್ರವಚನ ನೀಡುವಂಥವರಾಗುತ್ತಾರೆ.

ಹೀಗೆ ಪೂಜ್ಯರನ್ನು ಸರಳ ರೀತಿಯಲ್ಲಿ ಆದರೆ ಸಮರ್ಥವಾಗಿ ಚಿತ್ರಿಸುತ್ತಾರೆ. ಜಗತ್ತಿನ ಕಲ್ಯಾಣಕ್ಕಾಗಿ ಎಂಟು ದಶಕಗಳ ಕಾಲ ಸಮರ್ಪಿತ ಜೀವನ ನಡೆಸಿದ ಪೂಜ್ಯರು, ಗುರು ಪೂರ್ಣಿಮೆಯ ದಿನದಂದೇ ಶಿವಸಾಯುಜ್ಯ ಪಡೆಯುತ್ತಾರೆ.

ಪ್ರಸ್ತುತ 'ಗುರುಪೂರ್ಣಿಮೆ' ರೂಪಕದಲ್ಲಿ ಡಾ. ಸಂಗಮೇಶ ಬಿರಾದಾರವರು ಆಲೋಚನಾ ರೀತಿ, ವಿಧಾನ ಮತ್ತು ಸಿದ್ಧಿಗಳನ್ನು ನಾವು ಗುರುತಿಸಬಹುದಾಗಿದೆ. ಅವರ ಜಾನಪದ ಪ್ರೀತಿ, ಸಾಂಸ್ಕೃತಿಕ ಕಾಳಜಿ, ಆಧ್ಯಾತ್ಮಿಕ ಪ್ರಜ್ಞೆ, ಇತಿಹಾಸದ ಬಗೆಗಿನ ಕುತೂಹಲಾಸಕ್ತಿ, ಪರಂಪರೆಯನ್ನು ಅರಿಯುವ, ಅರ್ಥೈಸುವ ಕಾರ್ಯದಲ್ಲಿನ ಲವಲವಿಕೆ, ಉಪಲಬ್ಧ ಸಾಮಗ್ರಿಯ ಆಧಾರದಲ್ಲಿ ಮಹಾತ್ಮನೊಬ್ಬನನ್ನು 'ದರ್ಶಿಸುವ', ಸತ್ಯವನ್ನು ಅನಾವರಣಗೊಳಿಸುವ, ಸೃಜನಶೀಲ ಲೇಖಕರಾಗಿ ನಮ್ಮ ಗಮನಸೆಳೆಯುತ್ತಾರೆ.

ಹಗಲ ಚುಕ್ಕೆ :

'ಹಗಲು ಚುಕ್ಕೆ' ಇದು ಕವಿ ಶ್ರೀಧರ ಖಾನೋಳಕರರವರ ಕವನ ಸಂಕಲನವನ್ನು ಡಾ. ಸಂಗಮೇಶ ಬಿರಾದಾರವರು ಸಂಪಾದಿಸದಿದ್ದರೆ ಅದು ಅಗ್ನಿಗೆ ಆಹುತಿಯಾಗಿ ಹೋಗುತ್ತಿತ್ತು. ಅದು ಹೇಗೆ ಎಂಬುವುದನ್ನು ಬಿರಾದಾರವರೇ ಹೇಳುವಂತೆ –

ಕವಿ ಶ್ರೀಧರರ ಒಡನಾಡಿಗಳಾದ ವರಕವಿ ದ. ರಾ. ಬೇಂದ್ರೆಯವರು ಪ್ರಸ್ತುತ ಕವನಸಂಕಲನಕ್ಕೆ ಆತ್ಮೀಯವಾದ ಮುನ್ನುಡಿ ಬರೆದಿದ್ದಾರೆ. 'ಹಗಲು-ಚುಕ್ಕೆ' ಎಂಬ ನಾಮಕರಣವನ್ನು ಅವರೇ ಮಾಡಿದ್ದು ತುಂಬ ಅರ್ಥಪೂರ್ಣವಾಗಿದೆ. 'ಇಲ್ಲಿಯ ಐವತ್ತೆರಡು

ಕವನಗಳ ಹೆಸರುಗಳನ್ನೇ ಸರಳಗೊಳಿಸಿದರೆ ವಿಮರ್ಶಾಮುಖ ಆದೀತು' ಎಂದು ಹೇಳುತ್ತ, ಆ ರೀತಿ ಕವನಗಳ ಹೆಸರುಗಳನ್ನು ಮಾರ್ಮಿಕವಾಗಿ ಜೋಡಿಸಿಯೂ ತೋರಿಸಿದ್ದಾರೆ. ಮುಂದುವರಿದು ಅವರು ಬರೆಯುತ್ತಾರೆ; 'ಮರಣೋತ್ತರ ಖ್ಯಾತಿ ಅವರ ಹಣೆಯಲ್ಲಿ ಬರೆದಿತ್ತು ಎಂದು ತೋರುತ್ತದೆ'.

ಈ 'ಹಗಲು-ಚುಕ್ಕೆ' ಕಾವ್ಯಾಂಬರದಲ್ಲಿ ಕಾಣಿಸಿಕೊಂಡದ್ದು ಕೇವಲ ಆಕಸ್ಮಿಕ. ಶ್ರೀ ಸಂಗಮೇಶ ಬಿರಾದಾರವರ 'ಛಾಪ ಹಾಕತೀವ ಡಪ್ಪಿನ ಮ್ಯಾಲ' ಪ್ರಕಟಿಸುವ ಸಂದರ್ಭದಲ್ಲಿ ಕೆ. ವಿ. ಪುರುಳೇಕರ ವಕೀಲರು ಭೇಟಿಯಾಗುತ್ತಾರೆ. ಜೀವನದಲ್ಲಿ ನಿರಾಶೆಗೊಂಡ ಶ್ರೀಧರರು ಆ ಪದ್ಯಗಳಿಂದೇನು ಪ್ರಯೋಜನ? ಎಂದು ನೀರು ಕಾಯಿಸಲು ಬಂಬಿಗೆ ಒಂದೊಂದೇ ಪುಟವನ್ನು ಹರಿದು ಹಾಕುತ್ತಿರುವಾಗ, ತಾವು ಹೇಗಾದರೂ ಮಾಡಿ ಅಚ್ಚು ಹಾಕಿಸುವುದಾಗಿ ಹೇಳಿ ಪಡೆದುಕೊಂಡು ಬಂದಿದ್ದನ್ನು ತಿಳಿಸುತ್ತಾರೆ. ಪುರಳೇಕರ ವಕೀಲರಿಂದ 'ನಂದಾದೀಪ', 'ಪ್ರಭಾತ ದೀಪ' ಎಂಬ ಎರಡು ಸಂಗ್ರಹಗಳು ದೊರೆಯುತ್ತವೆ. ಡಾ. ಸಂಗಮೇಶ ಬಿರಾದಾರವರು ಅವುಗಳೊಳಗಿಂದ ಐವತ್ತೆರಡು ಕವನಗಳನ್ನು ಆಯ್ಕೆ ಮಾಡಿ ಈ 'ಹಗಲು-ಚುಕ್ಕೆ'ಯನ್ನು ಪ್ರಕಾಶಿಸಿದ್ದಾರೆ.

ತಮ್ಮದೇ ಪರಾಕು ಪಂಪನ್ನೊತ್ತುತ್ತ, ಸ್ವರತಿ ಸರಿಪ್ರೀತ ಕವಿಗಳೇ ಹೆಚ್ಚಾಗಿರುವ ಇಂದಿನ ದಿನಮಾನಗಳಲ್ಲಿ ಜಾತಿ-ಮತ, ಬಂಧು-ಬಳಗ ಮುಂತಾದ ಎಲ್ಲೆಗಳನ್ನು ಮೀರಿ ಅಪ್ಪಟ ಸಹೃದಯತೆಯಿಂದ ಕಳೆದುಹೋಗಬಹುದಾಗಿದ್ದ ಒಬ್ಬ ಒಳ್ಳೆಯ ಕವಿಯನ್ನು ಕಾವ್ಯಲೋಕಕ್ಕೆ ಪರಿಚಯಿಸಿ, ಅದನ್ನು ದಾಖಲಿಸುವ ಸ್ತುತ್ಯಕಾರ್ಯ ಮಾಡಿದ್ದಾರೆ. ಮೊದಲು ಡಾ. ಸಂಗಮೇಶ ಬಿರಾದಾರವರ ಅವರನ್ನು ನಾನು ಅಭಿನಂದಿಸುತ್ತೇನೆ.

ಕವಿ ಕಾಲಮಾನದ ಕೂಸು, ನವೋದಯ ಕಾವ್ಯ ಭರಾಟೆಯ ಸಂದರ್ಭದಲ್ಲಿ ರಚಿತವಾದ ಇಲ್ಲಿಂಯ ಕವನಗಳು ಸಹಜವಾಗಿಯೇ ಆ ಕಾವ್ಯದ ಎಲ್ಲ ಲಕ್ಷಣಗಳನ್ನೊಳಗೊಂಡಿವೆ. ಪ್ರಕೃತಿ, ಪ್ರೇಮ, ದೈವಭಕ್ತಿ ಪ್ರಧಾನವಾಗಿ ಕಾವ್ಯವಸ್ತುವಾಗಿದ್ದರೂ, ಶ್ರೀಧರ ಅಭಿವ್ಯಕ್ತಿಯಲ್ಲಿ ವೈಯಕ್ತಿಕತೆ, ಸ್ವಂತಿಕೆ ಇದೆ.

ಕವಿ ಬೇಡಿಕೊಳ್ಳುತ್ತಾನೆ ದೇವರಿಗೆ - ತನ್ನನ್ನು ವೀಣೆ, ಮದ್ದಳೆ, ತಂಬೂರಿ, ಕಹಳೆ, ಸೋಗೆ, ಮಿಂಚು, ಕಡಲು ಮಾಡೆಂದು. ಸುಂದರ ಪ್ರಕೃತಿಯನ್ನು ಸೃಷ್ಟಿಸಿದ ಭಗವಂತನನ್ನು ಹಾಡಿಹೊಗಳಲು ಹಂಬಲಿಸುತ್ತಾನೆ.

ನಡುಗನ್ನಡದಲ್ಲಿ ಮುದ್ದಣ್ಣ ಗದ್ಯ ಪದ್ಯದ ಕುರಿತು 'ಪದ್ಯಂ ವಧ್ಯಂ; ಗದ್ಯಂ ಹೃದ್ಯಂ' ಎಂದು ಹೇಳಿದರೆ ಶ್ರೀಧರವರು ಗದ್ಯವಿಲ್ಲದ ಬದುಕು ಸುಡುಗಾಡು ಮೌನ

ಪದ್ಯವಿಲ್ಲದ ಬದುಕು ಹರ್ಷ-ರುಚಿ ಹೀನ ಎಂದು ಅರ್ಥಿಸಿದ್ದು ತುಂಬಾ ಸ್ವಾರಸ್ಯವಾಗಿದೆ. ಡಾ. ಸಂಗಮೇಶ ಬಿರಾದಾರವರ ಪ್ರಯತ್ನ ಫಲವಾಗಿ ಕವಿಯ ಮರಣೋತ್ತರವಾದರು ಬೆಳಕಿಗೆ ಬಂದದು ಸಮಾಧಾನವನ್ನುಂಟು ಮಾಡುತ್ತದೆ.

ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ :

೧೨ನೆಯ ಶತಮಾನ ಕನ್ನಡ ಸಾಹಿತ್ಯ ಲೋಕಕ್ಕೆ ಒಂದು ಪರ್ವಕಾಲವೆಂದೆ ಹೇಳಬೇಕು. ಇಲ್ಲಿ ಪುರುಷರಂತೆ ಮಹಿಳೆಯರು ವಚನ ಸಾಹಿತ್ಯವನ್ನು ರಚಿಸಿರುವುದು ವಿಶೇಷವಾಗಿದೆ. ಡಾ. ಸಂಗಮೇಶ ಬಿರಾದಾರವರು ಜಾನಪದ, ಹಳೆಗನ್ನಡ ಮತ್ತು ವ್ಯಾಕರಣ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ ಇವರು ಶರಣ ಸಾಹಿತ್ಯದ ಬಗ್ಗೆಯೂ ವಿಶೇಷ ಆಸಕ್ತವುಳ್ಳವರಾಗಿದ್ದಾರೆ. ಅವರು ನೀಡಿದ ಉಪನ್ಯಾಸದ ಲಿಖಿತ ರೂಪವಾದ 'ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ' ಕಿರು ಹೊತ್ತಿಗೆಯನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಂಗ ೩೩೬ನೆಯ ಪ್ರಕಟನೆಯಾಗಿದೆ.

ಪ್ರಸ್ತುತ ಕೃತಿಯಲ್ಲಿ ಒಟ್ಟು ಐದು ಅಧ್ಯಾಯಗಳಿವೆ. 'ಅನುಭವ ಮಂಟಪಕ್ಕೆ ಮೊದಲು' ಎಂಬ ಅಧ್ಯಾಯದಲ್ಲಿ ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ನಡೆದ ಕ್ರಾಂತಿಯ ಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ೧೨ನೆಯ ಶತಮಾನ ಕನ್ನಡ ನಾಡಿನಲ್ಲಿ ಕ್ರಾಂತಿಯ ಕಿಡಿ ಹೊತ್ತಿಸಿದುದನ್ನು ಎತ್ತಿ ಹೇಳಿದ್ದಾರೆ. ಇಂತಹ ಕ್ರಾಂತಿಗೆ ಜನತೆಯಲ್ಲಿಯ ಮೂಢನಂಬಿಕೆ, ಆಚಾರ ವಿಚಾರಗಳು ಮೂಲ ಕಾರಣಗಳಾಗಿವೆ ಎಂದು ಹೇಳಿದ್ದಾರೆ. ಆ ಎಲ್ಲ ತಾರತಮ್ಯತೆಗಳನ್ನು ಕುರಿತು ಚರ್ಚಿಸುವುದಕ್ಕಾಗಿಯೇ ಬಸವಣ್ಣನವರು ಅನುಭವ ಮಂಟಪವೆಂಬ ಮಹಾಮನೆಯನ್ನು ನಿರ್ಮಿಸಿದರು. ಆ ಮಹಾಮನೆ ಎಲ್ಲರ ವಿಚಾರಶಕ್ತಿ ಅರಳಲು ಮೂಲ ನೆಲೆಯಾಯಿತೆಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ಸ್ಪಷ್ಟಪಡಿಸಿದ್ದಾರೆ. ಇಂತಹ ಅನುಭವ ಮಂಟಪದಲ್ಲಿ ಶ್ರೇಷ್ಠ ಶಿವಶರಣೆ ಎನಿಸಿದ ಅಕ್ಕಮಹಾದೇವಿಯ ಮಹತ್ವ ಏನು ಎಂಬುದನ್ನು ತಿಳಿಸಲು ಪ್ರಯತ್ನಿಸಿರುವುದು ಸ್ತುತ್ಯ ಕಾರ್ಯವಾಗಿದೆ.

'ಅಕ್ಕಮಹಾದೇವಿ' ಎಂಬ ಎರಡನೆಯ ಅಧ್ಯಾಯದಲ್ಲಿ ಅಕ್ಕ ಎಂಬ ಮನುಷ್ಯ ಸಂಬಂಧಗಳ ಗೌರವಸೂಚಕ ಪದಕ್ಕೆ ಆಕೆ ಹೇಗೆ ಹಿರಿಮೆಯನ್ನು ತಂದುಕೊಟ್ಟಳು. ಆಕೆಯ ಚರಿತ್ರೆಗೆ ಪೂರಕವಾಗಿರುವ ಕೃತಿಗಳು ಯಾವು-ಯಾವು ಎಂಬುದನ್ನು ಸೂಚಿಸಿದ್ದಾರೆ. ಹರಿಹರನ 'ಮಹಾದೇವಿಯಕ್ಕನ ರಗಳೆ', ಚಾಮರಸನ ಪ್ರಭುಲಿಂಗಲೀಲೆ ಮೊದಲಾದ ವೀರಶೈವ ಚಾರಿತ್ರಿಕ ಗ್ರಂಥಗಳನ್ನು ಪೂರಕವಾಗಿ ಇಟ್ಟುಕೊಂಡು ಅಕ್ಕಮಹಾದೇವಿಯ ಚರಿತ್ರೆಯನ್ನು ಜನಸಾಮಾನ್ಯರಿಗೆ ಸ್ಪಷ್ಟವಾಗುವಂತೆ ನಿರೂಪಿಸಿದ್ದಾರೆ. ಹೀಗೆ ಅಕ್ಕಮಹಾದೇವಿ ಬಸವಣ್ಣ, ಅಲ್ಲಮ ಪ್ರಭುವನ್ನು ಅರಸುತ್ತ ಅನುಭವ ಮಂಟಪಕ್ಕೆ ಬಂದ ಸಂಗತಿಯನ್ನು ವಿವರಿಸಿದ್ದಾರೆ.

'ಅನುಭವ ಮಂಟಪದಲ್ಲಿ' ಎಂಬ ಮೂರನೆಯ ಅಧ್ಯಾಯ ಈ ಗ್ರಂಥದ ಹೃದಯ ಭಾಗವಾಗಿದೆ. ಇದರಲ್ಲಿ ಕಲ್ಯಾಣ ಪಟ್ಟಣ ಪ್ರವೇಶ, ಮಹಾಮನೆಯಲ್ಲಿ ಪ್ರಥಮ ದಿನ, ಇನ್ನೊಂದು ದಿನ, ಮತ್ತೊಂದು ದಿನ ಹಾಗೂ ಕೊನೆಯ ನಮಸ್ಕಾರ ಎಂಬ ವಿಭಾಗಗಳನ್ನು ಮಾಡಿಕೊಂಡು ಅಕ್ಕಮಹಾದೇವಿಯ ಅನುಭವ ಮಂಟಪದಲ್ಲಿಯ ದಿನಚರಿಯನ್ನು ಹೇಳಿದ್ದಾರೆ. ಅನುಭವ ಮಂಟಪಕ್ಕೆ ಅಕ್ಕ ಮಹಾದೇವಿ ಪ್ರವೇಶಿಸುತ್ತಾಳೆ ಎಂಬ ಸುದ್ದಿಯನ್ನು ಅರಿತ ಅಲ್ಲಮಪ್ರಭು ಕಲ್ಯಾಣದ ಹೊರವಲಯದಿಂದ ಆಕೆಯನ್ನು ಪರೀಕ್ಷಿಸುತ್ತ ಬಂದ ವಿವರಗಳನ್ನು ಕೊಟ್ಟಿದ್ದಾರೆ. ಕಲ್ಯಾಣ ಪಟ್ಟಣ ಪ್ರವೇಶ ಸಂದರ್ಭದಲ್ಲಿ ಕಿನ್ನರಯ್ಯ ಮೊದಲಾದವರಿಂದ ಪರೀಕ್ಷೆಗೆ ಒಳಗಾದರೂ, ಆಕೆಯ ದಿವ್ಯ ಸ್ವರೂಪವನ್ನು ಕಂಡು ಬೆರಗಾದ ವಿವರಗಳನ್ನು ವಿವರಿಸಿದ್ದಾರೆ. ಚೆನ್ನಮಲ್ಲಿಕಾರ್ಜುನನನ್ನು ನೆನೆಯುತ್ತ, ಬಸವಣ್ಣನವರ ಪಾದಕ್ಕೆ ವಂದಿಸುತ್ತ ಕಲ್ಯಾಣ ಪಟ್ಟಣ ಪ್ರವೇಶ ಮಾಡುತ್ತಾಳೆ. ಈ ಎಲ್ಲ ಸಂಗತಿಗಳನ್ನು ಆಕೆಯ ವಚನಗಳನ್ನು ಆದರಿಸಿ ವಿವರಿಸಿದ್ದು ಡಾ. ಸಂಗಮೇಶ ಬಿರಾದಾರ ಅವರ ಶರಣ ಸಾಹಿತ್ಯದಲ್ಲಿದ್ದ ಪಾಂಡಿತ್ಯವನ್ನು ಅರಿಯಬಹುದಾಗಿದೆ. ಆ ಮಹಾಮನೆಯಲ್ಲಿ ಪ್ರಥಮ ದಿನ ಅಕ್ಕ ಮಹಾದೇವಿ ಬಸವಣ್ಣನವರನ್ನು ವಂದಿಸಿದ ವಿವರಗಳು ಇಲ್ಲಿವೆ. ಆಗ ಸ್ವತಃ ಬಸವಣ್ಣನವರು ಮಹಾಮನೆಯ ಎಲ್ಲ ಶರಣರಿಗೆ ಅಕ್ಕಮಹಾದೇವಿಯ ಘನ ವ್ಯಕ್ತಿತ್ವವನ್ನು ವಿವರಿಸುವ ಮೂಲಕ, ಆಕೆಯನ್ನು ಪರಿಚಯಿಸುತ್ತಾರೆ. ಈ ಪರೀಕ್ಷೆ ಎಲ್ಲರಿಗೂ ಸಮಾಧಾನವನ್ನು ತಂದುಕೊಡುವುದಿಲ್ಲ. 'ಅಕ್ಕನ ಪತಿಯ ಕುರುಹು' ಕೇಳುವ ಮೂಲಕ ಅವಳ ಪರೀಕ್ಷೆ ಆರಂಭವಾಗುತ್ತದೆ. ಯೌವನ ಮತ್ತು ಅದಕ್ಕೆ ತಕ್ಕ ರೂಪವನ್ನು ಹೊಂದಿದ್ದ ಅಕ್ಕಮಹಾದೇವಿಯ ಬಗೆಗೆ ಎಲ್ಲರೂ ಸಂಶಯದ ದೃಷ್ಟಿಯಿಂದ ನೋಡಿದುದು ಆ ಕಾಲದಲ್ಲಿ ಅವಿವಾಹಿತ ಮಹಿಳೆಯರಿಗೆ ಅನುಭವ ಮಂಟಪದಲ್ಲಿ ಪ್ರವೇಶವಿರಲಿಲ್ಲ ಎಂದು ತೋರುತ್ತದೆ. ಇಂತಹ ಮೊದಲಾದ ಸಂಗತಿಗಳನ್ನು ಡಾ. ಸಂಗಮೇಶ ಬಿರಾದಾರ ಅವರು ಈ ಪುಟ್ಟ ಹೊತ್ತಿಗೆಯಲ್ಲಿ ಸಂಶೋಧನಾತ್ಮಕ ದೃಷ್ಟಿಯಿಂದ ವಿವರಿಸಿರುವುದು ಗಮನಾರ್ಹವಾಗಿದೆ. ಆಕೆಯನ್ನು ಎಲ್ಲ ರೀತಿಯಲ್ಲಿ ಪರೀಕ್ಷಿಸಿದ ಸಂದರ್ಭಗಳನ್ನು ವಚನಗಳನ್ನಾಧರಿಸಿ ಇಲ್ಲಿ ಕೊಟ್ಟಿರುವುದು ಸಮಂಜಸವಾಗಿದೆ. ಆಕೆಯ ದಿಗಂಬರತ್ವದ ಪ್ರಶ್ನೆಯೂ ಇಲ್ಲಿ ಚರ್ಚಿತವಾದುದನ್ನು, ಕೇಶದ ಮರೆ ಕುರಿತ ಕುತೂಹಲವನ್ನು ಹಾಗೂ ದೇಹದ ಗುಣಧರ್ಮ ಕುರಿತ ಚರ್ಚೆಗಳು ಹೇಗೆ ನಡೆದವು ಎಂಬ ಸಂಗತಿಗಳನ್ನೆಲ್ಲ ಇಲ್ಲಿ ಕಲೆ ಹಾಕಿದ್ದಾರೆ.

'ಇನ್ನೊಂದು ದಿನ' ಎಂಬ ಉಪಶೀರ್ಷಿಕೆಯ ಅಡಿಯಲ್ಲಿ ರೂಪ ನಿರೂಪಗಳ ಸಂಬಂಧಗಳನ್ನು ವಿವರಿಸಿದ್ದಾರೆ. ಅಕ್ಕಮಹಾದೇವಿಯ ನಿರಹಂಭಾವ, ಲಿಂಗಾಂಗ ಸಂಬಂಧಗಳನ್ನು ಸೂಕ್ಷ್ಮವಾಗಿ ಎತ್ತಿ ತೋರಿಸಿದ್ದಾರೆ. 'ಮತ್ತೊಂದು ದಿನ' ಎಂಬ ಭಾಗದಲ್ಲಿ ಅಕ್ಕನ ವೈರಾಗ್ಯ, ಜ್ಞಾನ ಸಂಪನ್ನತೆಯನ್ನು ಮೆಚ್ಚಿ ಪ್ರಶಂಸೆ ಮಾಡಿದ ವಿವರಗಳನ್ನು ಒದಗಿಸಿದ್ದಾರೆ. ಅಲ್ಲಮ ಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ

ಮೊದಲಾದ ಶಿವಶರಣರಿಂದ ಅಕ್ಕಮಹಾದೇವಿಯ ಘನ ವ್ಯಕ್ತಿತ್ವವನ್ನು ಹಾಡಿ ಹೊಗಳಿದ ವಿವರಗಳನ್ನು ಇಲ್ಲಿ ಕೊಟ್ಟಿದ್ದಾರೆ. ಆಕೆ ಅಂಗದ ಅವಸಾನವಾಗುವ ಸ್ಥಳವನ್ನು ಕುರಿತು ಪ್ರಭುವನ್ನು ಕೇಳಿದಾಗ ಆ ಸ್ಥಳವನ್ನು ಸೂಚಿಸುತ್ತಾನೆ. ನಂತರ 'ಕೊನೆಯ ನಮಸ್ಕಾರ' ಎಂಬ ಭಾಗದಲ್ಲಿ ಅಕ್ಕನ ಜೀವನದ ಸಾರ್ಥಕತೆಯ ದಿನಗಳನ್ನೂ ಗ್ರಹಿಸಿದುದು ಅನನ್ಯವಾಗಿದೆ. ಅದನ್ನು ಡಾ. ಸಂಗಮೇಶ ಬಿರಾದಾರ ಅವರು ಆಕೆಯ ವಚನಗಳನ್ನು ಉದ್ಧರಿಸಿ ಜೀವನದ ಸಾರ್ಥಕತೆಯನ್ನು ಎತ್ತಿ ತೋರಿಸಿದುದು ಮಹತ್ವದ್ದಾಗಿದೆ.

ಅಕ್ಕಮಹಾದೇವಿ ಸಾಂಸಾರಿಕ ಜೀವನವನ್ನು ತ್ಯಜಿಸಿ ಅಧ್ಯಾತ್ಮಿಕ ಬದುಕನ್ನು ಕಟ್ಟಿಕೊಳ್ಳುವಲ್ಲಿ ಪಟ್ಟ ಪರಿಶ್ರಮವನ್ನು ತುಂಬಾ ಚೆನ್ನಾಗಿ ಚಿತ್ರಿಸಿದ್ದಾರೆ. ಅಕ್ಕಮಹಾದೇವಿಯ ಬದುಕು ಆದರ್ಶ ಬದುಕಾಗಿದೆ, ಮಹಾಬೆಳಕಾಗಿದೆ ಎಂಬುವುದನ್ನು ಸಾರಿ ಹೇಳಿದ್ದಾರೆ ಡಾ. ಸಂಗಮೇಶ ಬಿರಾದಾರವರು.

ಶ್ರೀ ಸದ್ಗುರು ಶಿವಾನಂದ ಚರಿತೆ :

ಗದುಗಿನ ಜಗದ್ಗುರು ಶ್ರೀ ಶಿವಾನಂದ ಮಹಾಸ್ವಾಮಿಗಳ ಪರಮ ಸತ್‌ಶಿಷ್ಯರಾದ ವೇದಾಂತ ಕೇಸರಿ ಪೂಜ್ಯ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳು. ಗುರುಗಳ ಆದೇಶದಂತೆ ಮುಮುಕ್ಷುಗಳಿಗೆ ಉಪದೇಶಿಸುತ್ತ ಕರ್ನಾಟಕ ಮಹಾರಾಷ್ಟ್ರಗಳನ್ನು ಸುತ್ತಿದವರು. ಪ್ರಭುಲಿಂಗಲೀಲೆ, ನಿಜಗುಣಶಾಸ್ತ್ರ, ವಚನಶಾಸ್ತ್ರ, ಭಗವದ್ಗೀತೆಗಳ ರಹಸ್ಯದ ಸವಿಯನ್ನು ಉಣಬಡಿಸಿದ ಉತ್ತಮ ವಾಗ್ಮಿಗಳು. ಕವಿಗಳಾದ ಪೂಜ್ಯರು ಅನೇಕ ಸ್ತೋತ್ರಪದಗಳನ್ನು ರಚಿಸಿದ್ದಾರೆ. ತಮ್ಮ ಗುರುಗಳ ದಿವ್ಯ ಚರಿತ್ರೆಯನ್ನು ವಾರ್ಧಕ ಷಟ್ಪದಿಯಲ್ಲಿ ಪುರಾಣ ರೂಪವಾಗಿ ರಚಿಸಿದ್ದಾರೆ. ಅದರ ಗದ್ಯಾನುವಾದವೇ 'ಶ್ರೀ ಸದ್ಗುರು ಶಿವಾನಂದ ಚರಿತೆ' ೨೦೦೪ ರಲ್ಲಿ ಪ್ರಕಟಿಸಲಾಗಿದೆ.

ಈ ಕೃತಿಯು ಬೇರೆ-ಬೇರೆ ವಿಷಯಗಳಿಗನುಗುಣವಾಗಿ ವಿಸ್ತಾರವಾಗುತ್ತ ಹೋಗಿದೆ. ಈ ಕೃತಿಯು ಭಾರತ ದೇಶದ ಮಹಿಮೆಯನ್ನು ಹೇಳುವುದರೊಂದಿಗೆ ಆರಂಭವಾಗುತ್ತದೆ. ದ್ರೋಣಪುರವೆಂದು ಕರೆಯಿಸಿಕೊಳ್ಳುತ್ತಿದ್ದ ರೋಣದ ಬಸಮ್ಮ ಲಿಂಗನಗೌಡರ ಪುತ್ರರಾಗಿ ಜನಿಸಿದವರು ವೀರೇಶರೆಂಬ ನಾಮಧೇಯ ಹೊತ್ತ ಶಿವಾನಂದ ಶ್ರೀಗಳು. ಬಾಲ್ಯದಲ್ಲಿಯೇ ಮೌನವನ್ನು ಮನೆಮಾಡಿಕೊಂಡ ಶ್ರೀಗಳು ಶಾಸ್ತ್ರಗಳನ್ನೆಲ್ಲ ತಿಳಿದುಕೊಂಡರು. ಒಂಭತ್ತು ವರ್ಷದವರಾದ ಮೇಲೆ ಮೌನ ಮುರಿದು ಮಾತನಾಡಿದರು. ಚಿಕ್ಕಂದಿನಲ್ಲಿಯೇ ಆಧ್ಯಾತ್ಮದ ಒಳಗಣ್ಣನ್ನ ತಿಳಿಯ ಬಯಸಿದ ಬಾಲಕ, ಗುರುಗಳಿಂದ ಗದರಿಸಿಕೊಂಡದ್ದೂ ಉಂಟು. ಗಣಿತ ಮತ್ತು ವ್ಯಾಕರಣಗಳನ್ನು ಚೆನ್ನಾಗಿ ಕಲಿತ ಕುಶಾಲಮತಿಯಾದರು. ಚಿಕ್ಕಂದಿನಲ್ಲಿಯೇ ಬಡವರನ್ನು ದೀನ-ದಲಿತರನ್ನು ಕಂಡು ಮರುಗಿದವರು. ಸಿಕ್ಕಿದ್ದನ್ನು ದಾನ ಮಾಡುತ್ತಿದ್ದರು. ಬದುಕಿನಲ್ಲಿ ಕರುಣೆ, ವಿರತಿ, ತ್ಯಾಗ, ತಪ, ಸತ್ಯ, ಕ್ಷಮೆ, ದಯೆ, ಸಜ್ಜನ ಸಮಾಗಮ, ವಿವೇಕ, ಗುರುಭಕ್ತಿ, ಮೌನವೆಂಬ ಗುಣಗಳು ಬೇಕೆಂದು ಅರಿತಿದ್ದರು.

ಹಿರಿಯರು ಹೇಳಿದ ವಿಚಾರಗಳನ್ನು ಮುಗ್ಧತನದಿಂದ ಪಾಲಿಸುತ್ತಿದ್ದರು. ಬಾಲ್ಯದಲ್ಲಿಯೇ ವೈರಾಗ್ಯ ಅವರನ್ನು ಆವರಿಸತೊಡಗಿತು. 'ಕಮಲದಳದ ಜಲಬಿಂದುವಿನಂತೆ ಜೀವನ' ಎಂಬುದನ್ನರಿತ ಅವರು ವಿಷಯಗಳ ಆಕರ್ಷಣೆಗೊಳಗಾಗಲಿಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಉದಾತ್ತರ ವಿಚಾರಗಳನ್ನು ಮೈಗೂಡಿಸಿಕೊಂಡರು. ಸತ್ಪುರುಷರ ದರ್ಶನ ಪಡೆದರು. ಬುದ್ಧಿಯ ಮಾಲಿನ್ಯ ಕಳೆಯುವ ವಿದ್ಯೆಯನ್ನು ದಾನಮಾಡಲು ಸನ್ನದ್ಧರಾದರು. ನ್ಯಾಯ ನಿಷ್ಠುರಿಗಳೂ ಆದ ಕೆಲವು ಪ್ರಸಂಗಗಳನ್ನು ಲೇಖಕರು ಇಲ್ಲಿ ದಾಖಲಿಸಿದ್ದಾರೆ. ಜ್ಞಾನಿಗೆ ಜ್ಞಾನಿ, ಕ್ರೂರಿಗೆ ಕ್ರೂರಿ, ಶಾಂತನಿಗೆ ಅತಿಶಾಂತ, ಸಾಧುಗೆ ಸಾಧುಗಳಾಗಿ ಬಾಳಿದರು. ಸೊಟಕನಾಳ ಗ್ರಾಮದ ಉತ್ತರಕ್ಕಿರುವ ಬನಹಟ್ಟಿಯ ಹಿರೇಮಠದ ಅಧಿಪತಿಯಾದರು. ರುದ್ರಸ್ವಾಮಿಗಳ ಶಿಷ್ಯರಾದರು. ದೀಕ್ಷೆಯನ್ನು ಪಡೆದರು. ಮುಂದೆ ಅವರ ಜೀವನದಲ್ಲಿ ಅನೇಕಾನೇಕ ಪವಾಡಗಳು ನಡೆದವು. ಹುಲಿ, ಸರ್ಪ, ದುಷ್ಟ ಜನರೇ ಇವರನ್ನು ಕಂಡು ಹಿಂದೆ ಸರಿದುದು, ಆಪತ್ಕಾಲದಲ್ಲಿ ಮಳೆ ಬರಿಸಿದ್ದು, ಕೂಸನ್ನು ರಕ್ಷಿಸಿದ್ದು ಲಕ್ಕಮ್ಮನ ಬಾಗಿಲ ತೆರೆಸಿದ್ದು, ಕೊಲೆಗಡುಕನನ್ನು ಭಕ್ತನನ್ನಾಗಿಸಿದ್ದು, ಕಾಳುಗಳನ್ನು ತೂರಿ ಬೆಳೆಕೊಟ್ಟಿದ್ದು, ದುಡಿದ ಬೇನೆಯ ಬಿಡಿಸಿದ್ದು, ದೃಷ್ಟಿದಾನ, ಕುರುವಿನ ಬಾಧೆ ಪರಿಹಾರ, ಮಂಟಪದ ಉರಿ ನಂದಿಸಿದುದು ಮೊದಲಾದ ಪವಾಡಗಳನ್ನು ಲೇಖಕರು ವಿವರಿಸಿದ್ದಾರೆ. ಇಂಥ ಪವಾಡ ಪುರುಷರು ಕೇವಲ ಜಪ-ಯಜ್ಞಗಳಿಂದ ಏನೆಲ್ಲ ಸಾಧಿಸಿದುದು ಈ ಕೃತಿಯಿಂದ ತಿಳಿಯುತ್ತದೆ. ಆಧ್ಯಾತ್ಮಿಕ ಔನ್ನತ್ಯವನ್ನು ನಾವಿಲ್ಲಿ ಗಮನಿಸಬಹುದಾಗಿದೆ. ಇವರ ಕರುಣ ಕಟಾಕ್ಷದಲ್ಲಿ ಮಿಂದ ಕಟುಕ ಕೊಲೆಗಡುಕ ಕರುಣಿಯಾದ.

ಶಿವಾನಂದರ ಜಪ-ತಪ-ಅನುಷ್ಠಾನಗಳು ಬಲಿತವು. ಪೂಜಾ ಪ್ರಭಾವ ಎಲ್ಲೆಡೆಗೂ ಹಬ್ಬಿತು. ಹುಬ್ಬಳ್ಳಿಯ ಯತಿವರ ಸಿದ್ಧಾರೂಢರು ಶಿವಾನಂದರನ್ನು ಕರೆಯಿಸಿಕೊಂಡರು. ಅವರ ರೀತಿ, ದೃಢವೈರಾಗ್ಯಗಳು ಸಿದ್ಧಾರೂಢರ ಮೇಲೆ ವಿಶೇಷ ಪರಿಣಾಮ ಬೀರಿದವು. ಹೀಗೆ ಶಿವಾನಂದರು ತಮ್ಮ ತಪಬಲದಿಂದ ಅನೇಕಾನೇಕ ಭಕ್ತರ ಮನದಿಂಗಿತವನ್ನು ಪೂರೈಸಿ, ಕಷ್ಟಗಳನ್ನು ದೂರಮಾಡಿದರು.

ಹೀಗೆ ಡಾ. ಸಂಗಮೇಶ ಬಿರಾದಾರ ಅವರು ಶ್ರೀ ಸದ್ಗುರು ಶಿವಾನಂದ ಚರಿತೆಯನ್ನು ರಚಿಸಿದ್ದಾರೆ. ವಾರ್ಧಕ ಷಟ್ಪದಿಯಲ್ಲಿರುವ ಪುರಾಣದ ಗದ್ಯಾನುವಾದವಾದರೂ ಓದುಗರನ್ನು ಸೆರೆಹಿಡಿಯುತ್ತದೆ. ವಿವಿಧ ಶೀರ್ಷಿಕೆಗಳಲ್ಲಿ ವಿಷಯುವನ್ನು ಎಳೆ-ಎಳೆಯಾಗಿ ಬಿಡಿಸಿರುವುದರಿಂದ ಪುರಾಣದ ಓದು ಸರಳವೆನಿಸುತ್ತದೆ.

ಚಾಪ ಹಾಕತೀವ ಡಪ್ಪಿನ ಮ್ಯಾಲ (ತರಂಗ ೨) :

ಸಂಪಾದನೆಯ ಕೆಲಸ ಸುಲಭವಲ್ಲ. ಅದರಲ್ಲೂ ಜಾನಪದ ಸಾಹಿತ್ಯದ ಸಂಪಾದನಾ ಕಾರ್ಯವಂತೂ ಕಷ್ಟದ ಕೆಲಸ. ಕಲಾಕಾರರಿಂದ ಬರುವ ಪದ್ಯಗಳನ್ನು ಅರ್ಥಕೆಡದಂತೆ,

ಅವರ ಧಾಟಿಯಲ್ಲಿ ಹಾಗೂ ತಳಕ್ಕೆ ತಕ್ಕಂತೆ ಸಂಗ್ರಹಿಸಬೇಕಾಗುವದು. ಕಲಾಕಾರರು ಇರುವ ಸ್ಥಳಗಳಿಗೆ ಹೋಗಿ, ಅವರು ಸಿಗುವವರೆಗೂ ದಾರಿಕಾಯ್ದು ಅವರ ಬಾಯಿಂದ ಪದ್ಯ ಹೇಳಿಸುವದೆಂದರೆ, ಅದೊಂದು 'ಫಜೀತಿ' ಎಂದೇ ಹೇಳಬೇಕು. ಸಂಗ್ರಹಕಾರರಲ್ಲಿ ತಾಳ್ಮೆ ಅವಶ್ಯ. ಅದನ್ನು ಡಾ. ಸಂಗಮೇಶ ಬಿರಾದಾರವರು ಮಾಡಿದ್ದಾರೆ. ಜಾನಪದ ಹಾಡುಗಳಲ್ಲಿ 'ಲಾವಣಿ' ಎಂಬವು ಮಹತ್ವ ಉಳ್ಳವು ಹಾಗೂ ಸ್ವಾರಸ್ಯ ಉಳ್ಳವು. ಲಾವಣಿಗಳ ಇತಿಹಾಸ ದೀರ್ಘವಾಗಿದ್ದರೂ, ಐತಿಹ್ಯ ದೊರೆಯುವದು ಒಂದು ಅಥವಾ ಒಂದೂವರೆ ಶತಮಾನಗಳಿಂದೀಚೆಗೆ ಎಂದು ಹೇಳಬಹುದು. ಹರದೇಶಿ-ನಾಗೇಶಿ ಎಂದು ಪಂಗಡ ಮಾಡಿಕೊಂಡು ಲಾವಣಿ ಹಾಡುವವರು ಅಂದು ಗ್ರಾಮೀಣ ಪ್ರದೇಶದಲ್ಲಿದ್ದರು. ಒಂದು ವಿಚಾರವನ್ನು ಒಂದು ವಿಷಯವನ್ನು, ಒಂದು ಘಟನೆಯನ್ನು ಅಥವಾ ಒಬ್ಬ ವ್ಯಕ್ತಿಯನ್ನು ಕುರಿತು ದೀರ್ಘವಾಗಿ ಹೇಳುವದು ಲಾವಣಿಯ ಗುಟ್ಟಾಗಿದೆ. ಹಾಡುವಾಗ ಬರುವ ವಾಕ್ಯಗಳ ವೈಚಿತ್ರ್ಯಗಳನ್ನು, ಶಬ್ದಗಳ ಚಮತ್ಕಾರಿಕೆಗಳನ್ನು ಕೇಳಿಯೇ ಸಂತೋಷ ಪಡಬೇಕು.

ಡಾ. ಸಂಗಮೇಶ ಬಿರಾದಾರವರ 'ಚಾಪ ಹಾಕತೀವ ಡಪ್ಪಿನ ಮ್ಯಾಲ' ತರಂಗ ೨ ರಲ್ಲಿ ಪೌರಾಣಿಕ ವ್ಯಕ್ತಿಗಳ-ವಿಷಯಗಳ ಸಂಗ್ರಹವಿರುತ್ತವೆ. 'ರಾಮಾಯಣ' ಮತ್ತು 'ಮಹಾಭಾರತ'ಗಳಿಗೆ ಸಂಬಂಧಪಟ್ಟ ಲಾವಣಿಗಳಿದ್ದು ಅವುಗಳಲ್ಲಿ ಮಹಾಭಾರತಕ್ಕೆ ಸಿಂಹಪಾಲಾಗಿರುವದು ಕಂಡುಬರುತ್ತದೆ. ಒಟ್ಟು ಹದಿನಾರು ಲಾವಣಿಗಳಿದ್ದು ಅದರಲ್ಲಿ ಮೊದಲನೆಯದು ಗಣಪತಿಯ ಸ್ತೋತ್ರ ಕೊನೆಯದಾಗಿ ಮಂಗಲ ಲಾವಣಿ ಇರುತ್ತದೆ. ಸಮಾಲೋಚನೆ ಭಾಗದಲ್ಲಿ ಲಾವಣಿ ಕಟ್ಟಿದ ಕವಿಯ ಹೆಸರು, ಅವನ ಊರು, ಹಾಡಿದವನ ಹೆಸರು ಹಾಗೂ ಹಾಡುವವನಿಗೆ ಮಾರ್ಗದರ್ಶನ ಮಾಡಿದ ಗುರು (ವಸ್ತಾದ)ವಿನ ಹೆಸರನ್ನು ದಾಖಲಿಸಿದ್ದು ಮೆಚ್ಚತಕ್ಕ ಸಂಗತಿಯಾಗಿದೆ.

ಲಾವಣಿಕಾರನು ಹಾಡುತ್ತ ಹೋಗುವನೇ ವಿನಃ ವ್ಯಾಕರಣಾಂಶಗಳ ಕಡೆಗೆ ಗಮನ ಹರಿಸುವುದಿಲ್ಲ. ಏಕೆಂದರೆ ಅವುಗಳ ಅವಶ್ಯಕತೆ ಅವನಿಗಿರುವುದಿಲ್ಲ. ಡಾ. ಸಂಗಮೇಶ ಬಿರಾದಾರವರು ಹಾಡುವವನ ಧಾಟಿ ಪದ್ಯ ಹಾಡುವಾಗ ಬದಲಾವಣೆಯಾಗುವದನ್ನು, ಧ್ವನಿಯ ಏರಿಳಿತವನ್ನು ಗುರುತಿಸಿದ್ದಾರೆ. ಆದ್ದರಿಂದಲೇ ಪ್ರತಿಯೊಂದು ಲಾವಣಿ ಪದ್ಯಗಳಲ್ಲಿ ಪಲ್ಲವಿ, ಚೌಕ, ನುಡಿ, ಚಾಲಗಳನ್ನು ಗುರುತಿಸಿರುವುದರಿಂದ ಲಾವಣಿಯ ಇರುವನ್ನು, ಹರವನ್ನು ಹಾಗೂ ಓದುಗನಿಗೆ ಅದರ ಮಟ್ಟವನ್ನು ತಿಳಿಸಿಕೊಟ್ಟಿದ್ದಾರೆ. ಗ್ರಂಥಸ್ಥ ಭಾಷೆಗಳಲ್ಲಿ ಬರುವ ಪಾತ್ರಗಳನ್ನು, ಸನ್ನಿವೇಶಗಳನ್ನು ಲಾವಣಿಕಾರರು ಅಲ್ಪ-ಸ್ವಲ್ಪ ಬದಲಾವಣೆ ಮಾಡಿಕೊಂಡು, ದಿನನಿತ್ಯದ ಪಾತ್ರ ಹಾಗೂ ಸನ್ನಿವೇಶಗಳೊಂದಿಗೆ ಸಮ್ಮಿಳಿತಗೊಳಿಸಿರುವದನ್ನು ಸಂಗ್ರಹಕಾರರು ಒಪ್ಪಿಕೊಂಡಿರುವದು ಅವರ ಪ್ರಾಮಾಣಿಕತೆಗೆ ಸಾಕ್ಷಿಯಾಗಿದೆ. ಲಾವಣಿಗಳನ್ನು ನೋಡಿದರೆ 'ರಗಳೆ' ಛಂದಸ್ಸಿನಂತೆ ಕಾಣುವದೆಂದೂ, ಇದರ ಛಂದಸ್ಸು ತೊಡಕಿನದೆಂದೂ, ನಿರ್ಧಿಷ್ಟವಾದ ಛಂದಸ್ಸಿಗೆ ಒಳಪಟ್ಟಿಲ್ಲವೆಂಬುದನ್ನು ಗುರುತಿಸಿರುವದು ಸತ್ಯ ಸಂಗತಿಯು.

'ಶಿಬಿ' ಚಕ್ರವರ್ತಿಯ ಲಾವಣಿ ತುಂಬಾ ಸ್ವಾರಸ್ಯ ಉಳ್ಳದ್ದು. 'ಶಿಬಿ' ಚಕ್ರವರ್ತಿಯ ಪರೀಕ್ಷೆಗಾಗಿ 'ಇಂದ್ರ', 'ಪಾರಿವಾಳ'ವಾಗಿಯೂ, 'ಅಗ್ನಿ' 'ಗಿಡುಗ' ಆಗಿಯೂ ಬಂದು ಪಾರಿವಾಳ ತನ್ನ ರಕ್ಷಣೆ ಮಾಡುವಂತೆ ಅರಸನಲ್ಲಿ ಬೇಡಿಕೊಳ್ಳುವದು. ಗಿಡುಗವು ಪಾರಿವಾಳವು ನನ್ನ ಆಹಾರ ಅದನ್ನು ಕೊಡಬೇಕೆಂದು ಒತ್ತಾಯಿಸಿದಾಗ 'ಶಿಬಿ' ಚಕ್ರವರ್ತಿಯು 'ನನ್ನ ಪ್ರಾಣವನ್ನಾದರೂ ಕೊಟ್ಟೇನೂ ಆದರೆ ರಕ್ಷಣೆ ಬೇಡಿಕೊಂಡ ಪಾರಿವಾಳವನ್ನು ಕೊಡಲಾರೆ' ಎಂದು ಮಾರುತ್ತರ ಕೊಟ್ಟಾಗ, ಹಾಗಾದರೆ ಪಾರಿವಾಳದ ತೂಕದಷ್ಟೇ ನಿನ್ನ ಮಾಂಸವನ್ನು ಕೊಡಬೇಕೆಂದು ಗಿಡುಗವು ಅರಸನಿಗೆ ಕೇಳಿಕೊಂಡಿತು. ಅರಸನು ತನ್ನ ಶರೀರದ ಎಲ್ಲ ಭಾಗಗಳನ್ನು ತುಂಡು ತುಂಡು ಮಾಡಿ ತಕ್ಕಡಿಯಲ್ಲಿ ಹಾಕಿದರೂ ಪಾರಿವಾಳದ ತೂಕಕ್ಕೆ ಬರಲೇ ಇಲ್ಲ. ಕೊನೆಗೆ ತನ್ನ ಶಿರಚ್ಛೇದನ ಮಾಡಿ ತೂಗಲು ಹೇಳಿದಾಗ ದೇವರು ಪ್ರತ್ಯಕ್ಷನಾಗಿ ಅವನಿಗೆ ವರ ಕೊಡಲು ಮುಂದಾದನು. ಅಂತ ವರವನ್ನು ಧಿಕ್ಕರಿಸಿ ನಿಮ್ಮ ಪಾದಸೇವೆಯೇ ನನಗೆ ಸಾಕು ಎಂದು 'ಶಿಬಿ' ಚಕ್ರವರ್ತಿಯು ವಿನಯದಿಂದ ಪ್ರಾರ್ಥಿಸುವನು. ಬೆನ್ನಿಗೆ ಬಿದ್ದವರನ್ನು ರಕ್ಷಿಸುವುದು ಅರಸನ ಆದ್ಯ ಕರ್ತವ್ಯವೆಂಬುದು ಈ ಲಾವಣಿಯಿಂದ ಕಂಡುಬರುವುದು.

'ಪದ್ಮಾವತಿ' ಲಾವಣಿಯು ಪ್ರೀತಿ-ಪ್ರಣಯ ಉಳ್ಳದ್ದು. ಸಖಿಯರೊಡನೆ ವನ ವಿಹಾರದಲ್ಲಿದ್ದಾಗ ಶ್ರೀಹರಿಯ ಕಣ್ಣಿಗೆ ಪದ್ಮಾವತಿ ಬೀಳುವಳು. 'ನಿನ್ನನ್ನು ಪ್ರೀತಿಸುವೆ ನಿನ್ನನ್ನು ಲಗ್ನವಾಗುವೆ ನನ್ನೊಂದಿಗೆ ಬಾ' ಎಂದು ಶ್ರೀಹರಿ ಕೇಳಿದಾಗ ಪದ್ಮಾವತಿಯು ತಿರಸ್ಕರಿಸಿದರೂ ಒಳಗೊಳಗೆ ಅವನನ್ನು ಮೆಚ್ಚಿಕೊಂಡಿದ್ದಳು. ಶ್ರೀಹರಿಯೇ ಕೊರವಂಜಿಯಾಗಿ ಬಂದು ಶಕುನ ಹೇಳುವದಾಗಿ ಹೇಳುವನು. ಪದ್ಮಾವತಿಯ ತಂದೆ ಆಕಾಶರಾಜ ತಾಯಿ ಧರಣಿ ಶಕುನ ಕೇಳಿ ತನ್ನ ಮಗಳಾದ ಪದ್ಮಾವತಿಯನ್ನು ಅವನಿಗೆ ಧಾರೆಯೆರೆಯುವರು. ಅವಳನ್ನು ವರಿಸಿದವನೇ ವೆಂಕಟೇಶನು. ಇಲ್ಲಿ ಶೃಂಗಾರ ಬಲು ಸುಂದರವಾಗಿ ಮೂಡಿಬಂದಿದೆ.

ಶ್ರವಣ ಕುಮಾರನ ಕಥೆ ಸರ್ವರಿಗೂ ಗೊತ್ತಿರುವಂತಹದ್ದೆ. ಅವನ ತಾಯಿ 'ಧರಣಿ ತಂದೆ ಕೇಶವರಿಗೆ ಮಕ್ಕಳಿರಲಿಲ್ಲ. ಮಕ್ಕಳ ಪ್ರಾಪ್ತಿಗಾಗಿ ತೀರ್ಥಯಾತ್ರೆಗಳಿಗೆ ಹೋಗುವಾಗ ದಾರಿಯಲ್ಲಿ ಅಡ್ಡ ಬಂದ ಪಶು-ಪಕ್ಷಿಗಳನ್ನು ಸಂಹಾರ ಮಾಡುತ್ತಾರೆ. ಈ ಹಿಂಸೆಯಿಂದ ಶಾಪವಾಗಿ ಕುರುಡರಾಗುತ್ತಾರೆ. ಆದಾಗ್ಯೂ ತೀರ್ಥಯಾತ್ರೆಯ ಫಲವಾಗಿ 'ಶ್ರವಣ' ಕುಮಾರನನ್ನು ಪಡೆಯುತ್ತಾರೆ. ನಂತರ ತಂದೆ-ತಾಯಿಯರನ್ನು 'ಪೆರಡಿ'ಯಲ್ಲಿ ಕೂಡ್ರಿಸಿಕೊಂಡು ತೀರ್ಥಯಾತ್ರೆಗೆ ಒಯ್ಯುವಾಗ, ಅವರಿಗೆ 'ತೃಷೆ'ಯಾದಾಗ ನೀರು ತರಲು ಹೊಳೆಗೆ ಹೋದ ಸಂದರ್ಭದಲ್ಲಿ ದಶರಥನ ಬಾಣಕ್ಕೆ ಆಹುತಿಯಾಗುತ್ತಾನೆ. ಇದುವೇ ರಾಮಾಯಣಕ್ಕೆ ಬೀಜವೆಂಬುದನ್ನು ಲಾವಣಿಕಾರನು ಬಲು ಸುಂದರವಾಗಿ ಚಿತ್ರಿಸಿದ್ದಾನೆ.

'ಸೀತಾಪಹರಣ' ಲಾವಣಿಯಲ್ಲಿ ರಾಮ–ಸೀತೆ–ಲಕ್ಷ್ಮಣ ಕಷ್ಟಪಟ್ಟಿರುವದನ್ನು ಮನದುಂಬುವಂತೆ ವಿವರಿಸಿದ್ದಾರೆ. ಮಾರೀಚ ಚಿಗರೆಯಾಗಿ ಬಂದಿದ್ದು, ಅದನ್ನು ಸೀತೆ ಬಯಸಿದ್ದು, ರಾಮನು ಅದನ್ನು ತೆಗೆದುಕೊಂಡು ಬರಲು ಹೋದದ್ದು, ಚಿಗರೆಯ ಮರಣ ರಾಮಧ್ವನಿ ಹೊರಟಿದ್ದು ಲಕ್ಷ್ಮಣ ಹೋದದ್ದು ನಂತರ ಸೀತೆಯನ್ನು ರಾವಣ ಒಯ್ದದ್ದು ಎಲ್ಲರಿಗೂ ಗೊತ್ತಿದ್ದ ಸಂಗತಿ. ಆದರೆ ವನವಾಸದಲ್ಲಿದ್ದಾಗ ಅವರೆಲ್ಲ ತಿನ್ನುತ್ತಿದ್ದ ವಸ್ತುಗಳನ್ನು ಪರಿಶೀಲಿಸಿದಾಗ ಲಾವಣಿಕಾರನು ತಿನ್ನುತ್ತಿದ್ದ ಅಥವಾ ವಾಸ್ತವದಲ್ಲಿ ಸಿಗುತ್ತಿದ್ದ ವಸ್ತುಗಳನ್ನು ವರ್ಣಿಸಿರುವದು ಅತ್ಯಂತ ಸೊಗಸಾಗಿದೆ.

ಗಡ್ಡಿ ಗೆಣಸ ತಿಂದ ಅವರ ಗಿರಿಗುಡ್ಡ ವನದ ಒಳಗ
ಗಿಡದ ಗಿಣ್ಣ ತಿಂಬುತಾರ ಹಸಿ ತಪ್ಪಲ್ಲಾ ॥
ಕಾರಿಬಾರಿಕಾಯಿ ಕವಳಿ ಕಾಯಿ ಹಣ್ಣ ಹಂಪಲಾ
ಹುಲ್ಲ ಹುಣಚಿ ಬೀಜ ತಿಂಬುತಾರ ಹೆಂತಾಕಾಲ ॥

ಅರಸು ಕುಮಾರರು ಸಾಮಾನ್ಯ ಜನರು ತಿನ್ನುವ ಆಹಾರ ಪದಾರ್ಥ ತಿನ್ನುವ ಕಾಲ ಪ್ರಾಪ್ತವಾಗಿತ್ತೆಂದು ಮರುಗಿದ್ದಾನೆ.

ರಾಮ–ರಾವಣರ ಕಾಳಗದ ಲಾವಣಿಯಲ್ಲಿ ಲಂಕಾದ ದೊರೆ ರಾವಣನ ವೈಭವವನ್ನು ಅವನ ಠೀವಿಯನ್ನು ಬಲು ಸೌಂದರ್ಯಯುತವಾಗಿ ಚಿತ್ರಿಸಿದ್ದಾನೆ. ಶಿಷ್ಟ ಕವಿಗಳಂತೆ ಲಾವಣಿಕಾರನು ರಾವಣನ ಮೇಲೆ ಪ್ರೀತಿ, ಆದರ, ಗವರ ಇಟ್ಟುಕೊಂಡಿರುವದು ಕಂಡುಬರುವುದು. ರಾವಣ ಸತ್ತು ಬಿದ್ದುದನ್ನು ಅವನ ಆಕೃತಿಯನ್ನು ಒಂದೇ ಸಾಲಿನಲ್ಲಿ ಚಿತ್ರಿಸಿದ್ದಾನೆ. 'ರಾವಣ ಸತ್ತು ಬಿದ್ದ ಗುಡ್ಡ ಬಿದ್ದಂಗ' ಈ ಹೋಲಿಕೆ ನೋಡಿದಾಗ ಲಾವಣಿಕಾರನ ಪ್ರತಿಭೆ ನಮಗೆ ಗೋಚರವಾಗುವುದು.

'ಶ್ರೀ ರಾಮಾಶ್ವಮೇಧ ಲಾವಣಿ'ಯಲ್ಲಿ ಸೀತೆಯ ದುಃಖದ ಸ್ಥಿತಿಯನ್ನು ಲವ–ಕುಶರ ಜನನ, ರಾಮನ ಕುದುರೆಯನ್ನು ಇವರು ಕಟ್ಟಿಹಾಕಿ ಯುದ್ಧ ಮಾಡಿದ ಸನ್ನಿವೇಶವನ್ನು ಚಿತ್ರಿಸಲಾಗಿದೆ. ರಾಮ ಅಗಸನ ಮಾತಿಗೆ ಬೆಲೆಕೊಟ್ಟು ಬಸುರಿಯಾದ ಸೀತೆಯನ್ನು ಕಾಡಿಗೆ ಬಿಟ್ಟು ಬರಲು ಲಕ್ಷ್ಮಣನಿಗೆ ತಿಳಿಸಿದ. ಅಣ್ಣನ ಮಾತನ್ನು ಪಾಲಿಸುವ ಲಕ್ಷ್ಮಣ ಅರಣ್ಯದಲ್ಲಿ ಅವಳನ್ನು ಬಿಟ್ಟು ಬಂದ. ಅರಣ್ಯಕ್ಕೆ ಬಿಟ್ಟು ಬರಲು ಅಣ್ಣ ಹೇಳಿದ ವಾಕ್ಯಗಳನ್ನು ಲಕ್ಷ್ಮಣ ಸೀತೆಗೆ ಹೇಳಿದಾಗ ಅವಳು ಮೂರ್ಛೆ ಹೋಗುತ್ತಾಳೆ. ಆ ಸಮಯದಲ್ಲಿ ಅವಳನ್ನು ಉಪಚರಿಸುವ ಪಶು–ಪಕ್ಷಿಗಳೂ ಸಹ ಉಪವಾಸ ಮಾಡಿದವು ಎಂದು ಹೇಳಿರುವದು ಮನೋಜ್ಞವಾಗಿದೆ. ಉತ್ತಮರಿಗೆ ಪಶು–ಪಕ್ಷಿಗಳು ತೊಂದರೆ ಕೊಡದೆ ರಕ್ಷಿಸಬಲ್ಲವು, ಉಪಕಾರ ಮಾಡಬಲ್ಲವು ಎಂಬುದು ಸ್ಪಷ್ಟವಾಗಿದೆ.

ಪಶು ಪಕ್ಷಿಕಾಡ್ಯಾವು ಸುತ್ತಮುತ್ತ
ನಿರಾಹಾರ ನಿಂತಾವು ಮರಗುತ್ತಾ ॥

ಮೇಲಿನ ಎರಡೇ ಸಾಲು ಸಾಕು ಲಾವಣಿಕಾರನ ಒಳಗುಟ್ಟ ಅರಿಯಲು. ಶ್ರೀ ಕೃಷ್ಣಾವತಾರ, ಕೊರವಂಜಿ, ಕೃಷ್ಣ-ಗಯಾ, ಈ ಮೂರು ಲಾವಣಿಗಳು ಶ್ರೀಕೃಷ್ಣನ ಬಗ್ಗೆ ಇರುವಂತಹವುಗಳಾಗಿವೆ. ಕೃಷ್ಣ ಜನನ, ಅವನ ಅವತಾರ, ನಂತರ ಕೊರವಂಜಿಯಾಗಿ ತಾನೇ ರುಕ್ಮೀಣಿಗೆ ಕೊಟ್ಟ ಪಾರಿಜಾತ ಪುಷ್ಪವನ್ನು ತಿರುಗಿ ಪಡೆದುಕೊಂಡದ್ದು, ಸತ್ಯಭಾಮೆಯೊಂದಿಗಿನ ಸಂವಾದ ಬಲು ಶೃಂಗಾರಯುಕ್ತವಾಗಿ ಬಂದಿವೆ. ಅರ್ಜುನನ ಅಹಂಕಾರ ನಾಶಮಾಡಿದುದು 'ಕೃಷ್ಣ ಗಯಾ'ರ ಲಾವಣಿಯಲ್ಲಿ ಮೂಡಿಬಂದಿದೆ.

ಕೌರವ-ಪಾಂಡವರ ಹುಟ್ಟು, ಗಜಗೌರಿವ್ರತ, ಪಾರ್ಥ-ವೃಷಕೇತು, ಚಂದ್ರ ಚೂಡಾಮಣಿ, ಏಕಲವ್ಯ ಮುಂತಾದ ಎಲ್ಲ ಲಾವಣಿಗಳು ಮಹಾಭಾರತದ ಕಥೆಗೆ ಸಂಬಂಧಪಟ್ಟವುಗಳು. ಶಂತನು ಸುಗಂಧಿಯೊಡನೆ ಮದುವೆಯಾಗಲು ಬಯಸುವನು. ನನಗೆ ಹುಟ್ಟಿದ ಮಗನಿಗೆ ಪಟ್ಟಗಟ್ಟಿದರೆ ಲಗ್ನವಾಗುವುದಾಗಿ ಹೇಳುವಳು. ಇದನ್ನು ತಿಳಿದ ಭೀಷ್ಮ ತಂದೆಯ ಲಗ್ನವನ್ನು ಮಾಡಿ ಅವನು ಬ್ರಹ್ಮಚಾರಿಯಾಗಿ ಉಳಿಯುವನು. ಅವರಿಗೆ ಚಿತ್ರವೀರ್ಯ, ವಿಚಿತ್ರವೀರ್ಯ ಮಕ್ಕಳಾದರು. ಆದರೆ ಅವರಿಗೆ ಮಕ್ಕಳಾಗಲಿಲ್ಲ. ಅವರೀರ್ವರೂ ಮರಣ ಹೊಂದಿದ ಮೇಲೆ ಅವರ ಪತ್ನಿಯರು ವೇದವ್ಯಾಸರ ಆಶೀರ್ವಾದದಿಂದ ಧೃತರಾಷ್ಟ್ರ, ಪಾಂಡುರಾಜರನ್ನು ಹಡೆಯುವರು. ಈ ರೀತಿಯಾಗಿ ಈ ಲಾವಣಿ ಇದೆ. ಕೌರವ-ಪಾಂಡವರಲ್ಲಿ ವೈರತ್ವ ಬೆಳೆದು ಬಂದ ವಿವರ, ಗಜ-ಗೌರೀವ್ರತ ಲಾವಣಿಯಲ್ಲಿದೆ. ಪಾಂಡವರಾರೂ ಶೂರರಲ್ಲವೆಂದು ವೃಷಕೇತು ನುಡಿದುದ್ದನ್ನು ಪ್ರತಿಭಟಿಸಿ ಅರ್ಜುನ ಅವನೊಂದಿಗೆ ಯುದ್ಧಮಾಡುವನು. ವೃಷಕೇತುವು ಅರ್ಜುನನ್ನು ಮೂರ್ಛೆ ಹೋಗುವಂತೆ ಮಾಡುವನು. ಕೃಷ್ಣ ಆಗಮಿಸಿ ಇಬ್ಬರನ್ನು ಸಮಾಧಾನಗೊಳಿಸಿದ ಪ್ರಸಂಗದ ಲಾವಣಿಯೇ ಪಾರ್ಥ-ವೃಷಕೇತು. ಚಂದ್ರ ಚೂಡಾಮಣಿ ಲಾವಣಿಯಲ್ಲಿ ಚಂದ್ರ ಚೂಡಾಮಣಿಯ ವೀರತ್ವದ ವರ್ಣನೆಯಿದೆ. ಬಿಲ್ಲುವಿದ್ಯೆಯನ್ನು ಕಲಿಸಲು ನಿರಾಕರಿಸಿದ ದ್ರೋಣಾಚಾರ್ಯರ ಮೂರ್ತಿ ಮಾಡಿಕೊಂಡು ಬಿಲ್ಲು ವಿದ್ಯೆಯಲ್ಲಿ ಪ್ರಭುತ್ವ ಸಾಧಿಸಿದ ಏಕಲವ್ಯನ ಲಾವಣಿಯೇ ಏಕಲವ್ಯ. ಅವನಿಂದ ದ್ರೋಣಾಚಾರ್ಯರು ಹೆಬ್ಬೆರಳು ಪಡೆದುಕೊಂಡು ವಿವರ ಈ ಲಾವಣಿಯಲ್ಲಿದೆ.

ಒಟ್ಟಿನಲ್ಲಿ ಇದೊಂದು ಅಪರೂಪದ ಪುರಾಣಗಳಿಗೆ ಸಂಬಂಧಪಟ್ಟ ಲಾವಣಿಗಳ ಸಂಗ್ರಹವಾಗಿದೆ. ಹಾಡಿನ ಮುಖಾಂತರ ಪೌರಾಣಿಕ ಕಥೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸುತ್ತದೆ. ಈ ಕಾರ್ಯವನ್ನು ಮನಸಾ ಇಚ್ಛೆಯಿಂದ ಡಾ. ಸಂಗಮೇಶ ಬಿರಾದಾರವರು ಮಾಡಿದ್ದಾರೆ.

ಬಾಳಿಗೆ ಬೆಳಕಾದರು :

ತಮ್ಮ ಇಂದಿನ ಸಂಧ್ಯಾಕಾಲದಲ್ಲಿ ತಮ್ಮ ಬಾಳಿನ ಬಾಲ್ಯ ಮತ್ತು ಹರೆಯದಲ್ಲಿ ಬೆಳಕಾದ ಕೆಲವು ಹಿರಿ ಜೀವಿಗಳ ವ್ಯಕ್ತಿ ಚಿತ್ರಣಗಳನ್ನು ತಮ್ಮ 'ಬಾಳಿಗೆ ಬೆಳಕಾದವರು' ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಅಂದರೆ ಮೂಲತಃ ಇವು ನೆನಪುಗಳು ಅಥವಾ ಮೆಲುಕುಗಳು. ತಮ್ಮ ಜೀವನದ ಒಂದು ವಿಸ್ತಾರವಾದ ಕಾಲಾವಧಿಯಲ್ಲಿ ತಮ್ಮ ಮನಸ್ಸನ್ನು ಪ್ರಜ್ಞೆಯನ್ನು ಪ್ರಭಾವಿಸಿದ ಅನೇಕ ವ್ಯಕ್ತಿಗಳನ್ನು ಇಲ್ಲಿ ನೆನೆದಿದ್ದಾರೆ.

ಇಲ್ಲಿ ರೂಪಿತವಾದ ವ್ಯಕ್ತಿ ಚಿತ್ರಗಳ ಹಿಂದೆ ಇರುವ ವ್ಯಕ್ತಿಗಳೂ ತುಂಬ ವೈವಿಧ್ಯಮಯವಾದ ವ್ಯಕ್ತಿತ್ವವುಳ್ಳವರಾಗಿದ್ದಾರೆ. ಅವರಲ್ಲಿ ಸ್ವಾಮಿಗಳಿದ್ದಾರೆ, ಶಿಕ್ಷಕರಿದ್ದಾರೆ, ರಾಜಕಾರಣಿಗಳಿದ್ದಾರೆ. ಹೀಗೆ ಹಲವು ಬಗೆಯ ಕ್ಷೇತ್ರಗಳ ವ್ಯಕ್ತಿಗಳೂ ಅಲ್ಲದೆ ಕನ್ನಡ ಸಾಹಿತ್ಯ ಮತ್ತು ಶಿಕ್ಷಣ ಲೋಕಗಳಲ್ಲಿ ಸಾಕಷ್ಟು ಹೆಸರು ಪಡೆದಿದ್ದ ಡಾ. ಆರ್. ಸಿ. ಹಿರೇಮಠ, ಡಾ. ಜಯವಂತ ಕುಳ್ಳಿ, ಪ್ರಿನ್ಸಿಪಾಲ್ ಎಚ್. ಕೆ. ಲಗಳಿ ಇತ್ಯಾದಿ ವ್ಯಕ್ತಿಗಳೂ ಅಡಕವಾಗಿದ್ದಾರೆ.

ಮುಖ್ಯವಾಗಿ ಈ ಎಲ್ಲ ವ್ಯಕ್ತಿಗಳು ಡಾ. ಸಂಗಮೇಶ ಬಿರಾದಾರವರ ವಿವಿಧ ಜೀವನ ಸಂದರ್ಭಗಳಲ್ಲಿ ಅವರಿಗೆ ನೆರವಾಗಿದ್ದಾರೆ. ಆ ನೆನಪು ಕೂಡ ಅನೇಕ ಬಗೆಯದು. ಜ್ಞಾನಕೊಟ್ಟವರು, ಆಶ್ರಯಕೊಟ್ಟವರು, ಒಳಗಿನ ಆಲೋಚನಾ ಶಕ್ತಿಗೆ ಸಂಸ್ಕಾರ ನೀಡಿದವರು, ಬಾಳಿನಲ್ಲಿ ಉಚ್ಚ ಮೌಲ್ಯಗಳ ಬಗೆಗೆ ಲಕ್ಷ ಸೆಳೆದವರು, ಅನುಭವಗಳ ನೆಲೆಯಲ್ಲಿ ಮನುಷ್ಯನ ಮನಸ್ಸು ತನ್ನ ಸಮತ್ವವನ್ನೂ ಶುಚಿಯನ್ನೂ ಕಳೆದುಕೊಳ್ಳದಿರುವುದು ಹೇಗೆಂಬ ಬಗೆಗೆ ತಿಳಿಸಿ ಹೇಳಿದವರು ಹೀಗೆ ಕೊಡು ಪಡೆಯ ಜಗತ್ತು ವೈವಿಧ್ಯಮಯವಾಗಿದೆ.

ಈ ಸಂಬಂಧಗಳಲ್ಲಿ ಅನುಭವಿಸಿದ ಧನ್ಯತೆಯ ಮೂಲ. ಮೊದಲ ಸ್ತರದಲ್ಲಿ ಅವರಲ್ಲಿರುವ ಗುಣಗ್ರಾಹಕತೆ ನಿರಂಹಕಾರ, ಜನದಾಹಗಳನ್ನು ಹೆಚ್ಚಾಗಿ ಬಿಚ್ಚಿತೋರುತ್ತದೆ. ಅವರ ಯಾವ-ಯಾವ ವ್ಯಕ್ತಿಗಳಲ್ಲಿ ಯಾವ-ಯಾವ ಬಗೆಯ 'ದೊಡ್ಡಸ್ತಿಕೆ'ಯನ್ನು ಗುರ್ತಿಸಿದ್ದಾರೋ ಅವೆಲ್ಲವೂ ಆ ವ್ಯಕ್ತಿಗಳಲ್ಲಿ ಇರುವದಂತೂ ನಿಜವೆ. ಆದರೂ ಡಾ. ಸಂಗಮೇಶ ಬಿರಾದಾರರ ಒಟ್ಟು ಬರಹದ ಮೂಲಕ ಮುಖ್ಯವಾಗಿ ವ್ಯಕ್ತವಾಗುವುದು ಅವರ ಆ ಬಗೆಯ ಗುಣಗ್ರಾಹ ಶಕ್ತಿ ಹಾಗೂ ಅದಕ್ಕೆ ತಮ್ಮನ್ನು ಅತ್ಯಂತ ವಿಧೇಯತೆಯಿಂದ ಒಪ್ಪಿಸಿಕೊಳ್ಳುವ ನಮನಶೀಲತೆ. ಈ ಬಗೆಯ ಒಡನಾಟದ ವಿವರಗಳು ಕೊಡುವ ಒಟ್ಟು ತಿಳುವಳಿಕೆಯೂ ಆ ಕಾಲದಲ್ಲಿದ್ದ ಸಾರಸ್ವತ ಸಹೃದಯತೆಯುಳ್ಳ ವ್ಯಕ್ತಿಯೊಬ್ಬರ ಸಹಜ ಜೀವನಪ್ರೀತಿಯ ಸಂಕೇತವಾಗಿಯೂ ಕಾಣುತ್ತದೆ. ಅಂದರೆ ಡಾ. ಸಂಗಮೇಶ ಬಿರಾದಾರರು ಒಬ್ಬ ತಮ್ಮೆದುರಿನ ವ್ಯಕ್ತಿತ್ವದ ಇಡೀಯಾದ ಘಟಕದಲ್ಲಿನ ಇತ್ಯಾತ್ಮಕವಾದ ತಮ್ಮ ವ್ಯಕ್ತಿತ್ವಕ್ಕೆ ಪೂರಕವಾದ ಅಸ್ಥಿತ್ವಿಯ ಅಂಶಗಳನ್ನು ಆಯ್ಕೆ ಮಾಡಿಕೊಂಡು ಆ ಆಯ್ದ ಭಾಗವನ್ನು

ತಮ್ಮ ವ್ಯಕ್ತಿತ್ವಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತಾರೆ. ಇನ್ನೂಳಿದ ಭಾಗದ ಬಗೆಗೆ ಅವರು ಅವಜ್ಞರಾಗಿರಬಹುದು. ಅಥವಾ ಅಲಕ್ಷ್ಯ ಮಾಡಿರಬಹುದು. ಇದು ಯಾವ ಕಾಲಕ್ಕೂ ಮನುಷ್ಯ ಸಂಬಂಧಗಳನ್ನು ಆರೋಗ್ಯಪೂರ್ಣವಾಗಿ ಉಳಿಸಿಕೊಳ್ಳುವ ಒಂದು ಬಗೆಯ ಪ್ರಯತ್ನವೇ.

ಡಾ. ಸಂಗಮೇಶ ಬಿರಾದಾರರ ಭಾಷೆಯಲ್ಲಿ ಆತ್ಮೀಯತೆ ಇದೆ. ಆಡುಮಾತಿನ ಸೊಗಸುಗಾರಿಕೆ ಇದೆ. ಗ್ರಾಮೀಣ ಹೃದ್ಯಸಂವಾದದ ಆರ್ತತೆ ಇದೆ. ಸಂಭಾಷಣೆಯಲ್ಲಿ ಸಲುಗೆಯ ಸುಖವಿದೆ. ಮಧ್ಯಮ ವರ್ಗದ ಗ್ರಾಮೀಣ ಜೀವನ ಸಂಸ್ಕಾರಗಳು ಚಿತ್ರಿಸುವ ಬಾಳಿನ ಸುಂದರ ಚಿತ್ರಗಳಿವೆ. ಶೈಲಿ ಹಾಗೂ ವಸ್ತುಗಳ ಸುಮಧುರ ಬಾಂಧವ್ಯದಿಂದಾಗಿ ಈ ವ್ಯಕ್ತಿ ಚಿತ್ರಗಳು ರುಚಿಕಟ್ಟಾಗಿ ಓದಿಸಿಕೊಂಡು ಹೋಗುತ್ತವೆ.

ಜನಪದದಲ್ಲಿ ಮಕ್ಕಳ ಸಾಹಿತ್ಯ :

ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮಾಲೆಯ ೨೩೩ನೆಯ ಉಪನ್ಯಾಸ ಮಾಲೆಯ ಪ್ರಕಟಿತ ಪುಸ್ತಕ ಇದಾಗಿದೆ. ೧೯೭೭ರಲ್ಲಿ ಪ್ರಥಮ ಮುದ್ರಣವನ್ನು ಕಂಡಿರುವ ಈ ಪುಸ್ತಕ ೬೪ ಪುಟಗಳನ್ನು ಒಳಗೊಂಡ ಸವಿವರ ಪುಸ್ತಕವಾಗಿದೆ.

ಪುಸ್ತಕದ ಒಳನೋಟದಲ್ಲಿ ಅಭ್ಯಾಸದ ಅನುಕೂಲಕ್ಕಾಗಿ ಒಂದು ಕ್ರಮ ಅಳವಡಿಸಿಕೊಳ್ಳುವ ಸೌಲಭ್ಯಕ್ಕಾಗಿ ಕೆಲವು ತಾತ್ಕಾಲಿಕ ವಿಭಾಗಗಳನ್ನು ಮಾಡಿಕೊಂಡಿದ್ದಾರೆ. ಆಟಗಳು, ಹಬ್ಬಗಳು ಈ ವಿಭಾಗಗಳು ಪುಸ್ತಕದುದ್ದಕ್ಕೂ ಹೆಚ್ಚು ಚರ್ಚೆಗೆ ಒಳಪಡುತ್ತವೆ.

ಲೇಖಕರು ಜನಪದ ಅಂಶಗಳನ್ನು ಗಮನಿಸುತ್ತ ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಮಕ್ಕಳು, ಯುವಕರು ಮತ್ತು ಮುದುಕರು ಜಾನಪದ ಸಂಭ್ರಮದಲ್ಲಿ ರಂಗೇರುವುದನ್ನು ಉಲ್ಲೇಖಿಸುತ್ತಾರೆ. ಲಿಂಗ ತಾರತಮ್ಯವಿಲ್ಲದೇ ಸಂಭ್ರಮಿಸುವ ಗೀತೆಗಳಿವೆ. ಅಶ್ಲೀಲತೆಯ ಲೇಪನವಿರುವ ಕೆಲವಡೆ ಬದುಕಿನ ಸತ್ಯ ಎದುರಾದ ಸನ್ನಿವೇಶಗಳಿವೆ. ಹೀಗಾಗಿ ಜಾನಪದ ಸಾಹಿತ್ಯವನ್ನು ಬಿಟ್ಟು ಕನ್ನಡ ಸಾಹಿತ್ಯವನ್ನು ಅವಲೋಕಿಸುವುದು ಅಪೂರ್ಣವೆನಿಸುತ್ತದೆ. ಡೆಪ್ಯೂಟಿ ಚೆನ್ನಬಸಪ್ಪ, ವೆಂಕಟರಂಗೋಕಟ್ಟಿ, ಶಾಂತಕವಿಗಳು... ಜಾನಪದ ಸಾಹಿತ್ಯದ ಪ್ರಚಾರಕ್ಕೆ ಸಹಕರಿಸಿದರು. ಪಠ್ಯದಲ್ಲಿ ಅವಕಾಶ ಕಲ್ಪಿಸಿದರು.

ಪ್ರತಿ ಹತ್ತು ಹರದಾರಿಗೂ ಸಂಪ್ರದಾಯ, ಆಟಪಾಟ, ರೀತಿ-ರಿವಾಜುಗಳು ಬದಲಾಗುತ್ತವೆ. ಹೀಗಾಗಿ ಇಲ್ಲಿ ಸಂಗ್ರಹಗೊಂಡಿರುವ ವಿಷಯಕ್ಕೆ ಒಂದು ಮಿತಿ ಇದೆ ಎಂದು ಲೇಖಕರು ಉಲ್ಲೇಖಿಸಿದ್ದಾರೆ. ವಿಜಾಪುರ ಜಿಲ್ಲೆಗೆ ಅದನ್ನು ಸೀಮಿತಗೊಳಿಸಿದ್ದಾರೆ.

ಕಳ್ಳಾ ಮಾಳ್ಯಾ । ಕಾಪಾಟ ಮಾಳ್ಯಾ ।
ಸುರಿ ಮಾಳಿಯೆ । ಸುರಿ ಮಾಳಿಯೇ ।

ಎನ್ನುವಂತಹ ಹಾಡುಗಳ ನಿದರ್ಶನಗಳಿವೆ.

ಗುಡು ಗುಡು ಮುತ್ಯಾ ಬಾಂದಾ ।
ಬೆಣ್ಣೆರೊಟ್ಟಿ ತಾಂದಾ ।

ಗುಡು ಗುಡು ಎಂದು ಗುಡುಗುವ ಮಿಂಚನ್ನು 'ಮುತ್ಯಾ'ನಿಗೆ ಹೋಲಿಸಿ ಗೌರವಿಸಿದ್ದಾರೋ ಅಥವಾ ಒದರುವ ಮೂಲೆಗುಂಪಾದ ಜೀವವೆನ್ನುತ್ತಾರೋ ಅಂತು ಅದನ್ನೊಂದು ಜೀವಕ್ಕೆ ಹೋಲಿಸುವ ಪರಿ ಅಗಾಧವಾದುದು. ಗುಬ್ಬಿ ಗೂಡು ಕಟ್ಟಿ ಆಡುವ ರೀತಿ ವಿಶೇಷವಾಗಿದೆ. ಹಳ್ಳಿಗರ ಆಡುವ ಆಟದಲ್ಲಿ ಇದನ್ನು ಹೇಳುತ್ತಾರೆ. ಕಣ್ಣ ಮುಚ್ಚಣಿಕೆಯ ಆಟದಲ್ಲಿ –

ಕಾದಲ್‌ಬಿದಲ್ । ಕಂಚ್ಯಾಣ ಬಿಂಚ್ಯಾಣ
ಇವರ ಬಿಟ್ಟ ಇವರ್‍ಯಾರ ।

ಎಂದ ಹಾಡಿನ ಮೂಲಕ ಆಡುವ ಸಂಪೂರ್ಣ ಆಟ ಮತ್ತು ಅದರ ನಿಯಮಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳಿದ್ದಾರೆ. ಅದೇ ರೀತಿಯಾಗಿ ಲೋಳಮುರಿಗೆ ಆಟ, ಬುಡು-ಬುಡು ಚಾಣಕ್ಕಿ ಆಟ, ಗುಮ್ಮಾಚಾರಿ ಗುಮ್ಮ ಆಟ, ಹತ್ತಿಕಟಗಿ-ಬತ್ತಿಕಟಗಿ ಆಟ, ದಡಮ್‌ದುಡುಕಿ ಆಟದ ವಿವರಣೆಗಳಿವೆ. ಮರೆತುಹೋದ ದಿನಗಳನ್ನು, ಬಾಲ್ಯದ ಮುಗ್ಧತೆಯನ್ನು, ಚೆಲುವನ್ನು ಬದುಕಿಗೆ ತುಂಬುವ ಆ ಗಳಿಗೆಗಳನ್ನು ನೆನಪಿಸಿಕೊಡುವಲ್ಲಿ ಯಶಸ್ವಿಯಾಗುವ ವಿವರಣೆಗಳಿವೆ. ಗುಂಡು, ಚೆಂಡು, ಬೊಗರೆ, ಚಿಣಿದಾಂಡುಗಳು ಗಂಡು ಹುಡುಗರ ಆಟಗಳು, ಸರಿಗೆರಿ, ಗುಂಡಿನಾಟ, ಕುದುರೆ ಆಟ...ಗಳ ಸಂಪೂರ್ಣ ವಿವರಣಗಳನ್ನು ನೀಡಲಾಗಿದೆ.

ಕುಂಬಳಕಾಯಿಯಾಟದಂತ ಗುಂಪು ಆಟಗಳ ಉಲ್ಲೇಖಗಳು ಇಲ್ಲಿವೆ. ಪುಗಡಿ ಆಟ, ಸೇದೂ ಬಾಂವಿ, ಈ ರೀತಿಯ ಆಟಗಳು ಮತ್ತು ಆಗ ಹಾಡುವ ಹಾಡುಗಳನ್ನು ನೀಡಿದ್ದಾರೆ.

ಇನ್ನು ಹಬ್ಬಗಳ ಬಗ್ಗೆ ಹೇಳುತ್ತ ಇಲ್ಲಿಯೂ ಕೂಡ ಗಂಡಸರ ಹಬ್ಬಗಳ – ಹೆಂಗಸರ ಹಬ್ಬಗಳು ಎಂದು ವಿಭಾಗಿಸುತ್ತ ಯಾವುದಕ್ಕೆ ನಯನಾಜೂಕು ಬೇಕು, ಯಾವುದಕ್ಕೆ ಗತ್ತು ಶಕ್ತಬೇಕು ಹೇಳಿದ್ದಾರೆ. ದೀಪಾವಳಿಯಲ್ಲಿ ಆರತಿ ಮಾಡುವಾಗ ಹಾಡುಗಳು ತುಂಬಾ ಖುಷಿ ಕೊಡುತ್ತವೆ. ವಿವಿಧ ಪ್ರಾಸಗಳ ಗೀತೆಗಳು, ವಿಭಿನ್ನ ಪ್ರಾಣಿವರ್ಗದ ಆಕಾರ ಮತ್ತು ಸ್ವಭಾವವನ್ನು ಪರಿಚಯಿಸಿಕೊಡುತ್ತವೆ.

ಗಣಪತಿಯ ಹೊಟ್ಟೆ ಒಡೆದಾಗ ನಕ್ಕ ಚಂದ್ರನನ್ನು ಚೌತಿಯ ದಿನ ನೋಡಿದರೆ ದೋಷ ತಗಲುವುದು. ಅದನ್ನು ನಿವಾರಿಸಿಕೊಳ್ಳಲು ಬರುವದೇ ಹೋಳಿಹುಣ್ಣಿಮೆಯ ಸಂಪ್ರದಾಯವಿರಬಹುದು. ಅಶ್ಲೀಲ ಮಾತಾಡಿ ಜನರಿಂದ ಬೈಯ್ಸಿಕೊಂಡು ತಮ್ಮ ದೋಷ ಪರಿಹಾರ ಮಾಡಿಕೊಳ್ಳುತ್ತಿರಬಹುದೆಂದು ಊಹಿಸುತ್ತಾರೆ. ಹೋಳಿಹಬ್ಬದ ಹಾಡುಗಳನ್ನು ಸವಿವರವಾಗಿ ನೀಡಿದ್ದಾರೆ. ಅದೇ ರೀತಿ ಗುಳ್ಳವ್ವನ ಹಬ್ಬದ ವಿವಿರಗಳು – ಹಾಡುಗಳು ಇಲ್ಲಿವೆ ಪಂಚಮಿ ಹಬ್ಬದಲ್ಲಿ ಜೋಕಾಲಿ, ತಿನಿಸುಗಳ ವಿವರಣೆ ಸಿಗುತ್ತದೆ. ಮುಂದಿನ ವಿಭಾಗದಲ್ಲಿ ಮಕ್ಕಳನ್ನು ಆಡಿಸುವುದೆಂಬ ಭಾಗವನ್ನು ಮಾಡಿಕೊಂಡಿದ್ದಾರೆ.

ಆssssನಿ ಬಂತ ಆssssನಿ । ಯಾವೂರ ಆssssನಿ ।
ವಿಜಾಪೂರ ಆssssನಿ । ಇಲ್ಲಿಗ್ಯಾಕ ಬತ್ತ ।
ಹಾsssದಿ ತೆಪ್ಪಿ ಬಂತ್ತ ।

ಈ ಹಾಡನ್ನು ಉದಾರಿಸಿದ್ದಾರೆ.

ಇಡೀ ಪುಸ್ತಕದಲ್ಲಿ ಬರುವ ವಿವರಣೆಗಳು ಲೇಖಕರ ಜನಪದ ಬದುಕನ್ನು ಸನಿಹದಿಂದ ಕಂಡುಂಡ ಬಗೆಯನ್ನು ಸಾರುತ್ತದೆ. ಆಳವಾದ ಅವಲೋಕನವಿದೆ. ಸುಲಭವಾದ ಬರವಣಿಗೆ ಇದೆ. ಜೋಡಿಯಾಗಿ ಸಾಗುವ ಪದ್ಯ–ಗದ್ಯ ಶೈಲಿ ಓದನ್ನು ರುಚಿಗೊಳಿಸುತ್ತವೆ. ಆಧುನಿಕತೆಯ ಭರದಲ್ಲಿ ಈ ಪುಸ್ತಕದ ಓದು ಮಧುರಗಳಿಗೆಗಳ ನೆನಪು ತರುವಂತಿದೆ. ಸಂಪ್ರದಾಯಗಳನ್ನು ಹೊಸದಾಗಿ ತಿಳಿಯುವ ಭಿನ್ನ ಪ್ರದೇಶದ ಜನರಿಗೆ ಇದೊಂದು ಕೈಪಿಡಿ ಎನಿಸುವುದರಲ್ಲಿ ಸಂಶಯವಿಲ್ಲ.

'ಸಮನ್ವಯಿ' :

'ಸಮನ್ವಯಿ' ಸಾಹಿತಿಗಳಿಗೆ, ಸಂಶೋಧಕರಿಗೆ ಇದೊಂದು ಒಳ್ಳೆಯ ಆಕರ ಗ್ರಂಥ. ೨೧೨ ಪುಟಗಳುಳ್ಳ ಡಾ. ಅಭಿನವ ಸಿದ್ಧರಾಮ ದೇವರು – ಹಿರೇಮಠ ಹಿಪ್ಪರಗಿ ಅವರ ಗುರುಪಟ್ಟಾಧಿಕಾರ ಮಹೋತ್ಸವದ ಅಭಿನಂದನ ಗ್ರಂಥ. ಅಭಿನವ ಸಿದ್ಧರಾಮದೇವರು ಅವರ ಮುಖಪುಟ ವಿನ್ಯಾಸದೊಂದಿಗೆ ಹಿಂಬದಿಯಲ್ಲಿ ಪಂಚಪೀಠಗಳ ಜಗದ್ಗುರುಗಳ ಶುಭಾಶಯದ ನುಡಿಗಳು ಈ ಗ್ರಂಥಕ್ಕೆ ಮೆರುಗು ತಂದಿವೆ. ಪುಸ್ತಕ ಪ್ರೇಮಿಯೆಂದೇ ಹೆಸರಾದ ಪೂಜ್ಯ ಶ್ರೀ. ಮ.ನಿ.ಪ್ರ. ಸಿದ್ಧರಾಮ ಮಹಾಸ್ವಾಮಿಗಳು, ರುದ್ರಾಕ್ಷಿಮಠ, ಬೆಳಗಾವಿ ಈ ಗ್ರಂಥ ರಚನೆಗೆ ಸಲಹಾ ಸಮಿತಿಯ ಅಧ್ಯಕ್ಷರಾಗಿರುವರು. ಗೌರವ ಸಂಪಾದಕರಾಗಿ ಡಾ. ಸಂಗಮೇಶ ಬಿರಾದಾರ ೨೦೦೩ರಲ್ಲಿ ಪ್ರಕಟಪಡಿಸಿದ್ದಾರೆ.

ಶ್ರೀಮಠದ ಪರಂಪರೆ ಮತ್ತು ಶ್ರೀಗಳವರ ಸಮಾಜ ಸೇವೆಗೆ ಹೆಗ್ಗುರುತಾಗಿ ಈ ಕೃತಿ ನಿದರ್ಶನವಾಗಿದೆ. ಮಾನವನ ಬದುಕಿಗೆ ಇದು ಕೈದೀವಿಗೆಯಾಗಿ ಪರಿಣಮಿಸಿದೆ.

ಡಾ. ಅಭಿನವ ಸಿದ್ಧರಾಮ ದೇವರುಗಳ ಸಾಧನೆ-ಸಿದ್ಧಿಯ ಮಜಲುಗಳನ್ನು ಗ್ರಂಥದ ಪ್ರಾರಂಭದ ಭಾವಚಿತ್ರಗಳಲ್ಲಿ ಅನಾವರಣಗೊಳಿಸಿದ್ದುದು ತುಂಬಾ ಸೊಗಸಾಗಿದೆ.

ಈ ಪವಿತ್ರ ಅಭಿನಂದನ ಗ್ರಂಥವನ್ನು ಒಟ್ಟು ಮೂರು ವಿಭಾಗಗಳನ್ನಾಗಿ ವಿಂಗಡಿಸಿಲಾಗಿದೆ. ಅವು ಇಂತಿವೆ.

೧) ಒಂದನೆಯ ವಿಭಾಗ - ಶ್ರೀಮಠದ ಪರಂಪರೆ

೨) ಎರಡನೆಯ ವಿಭಾಗ - ವೀರಶೈವ ಧರ್ಮ : ಆಧುನಿಕ ಚಿಂತನೆ

೩) ಮೂರನೆಯ ವಿಭಾಗ - ವೀರಶೈವ : ಇತರ ಜಾಗತಿಕ ಧರ್ಮಗಳು.

ಈ ಮೂರು ವಿಭಾಗಗಳ ಕುರಿತು ಸಂಕ್ಷಿಪ್ತವಾಗಿ ವಿವರಿಸಲು ಪ್ರಯತ್ನಿಸಲಾಗಿದೆ.

ಮೊದಲನೆಯ ವಿಭಾಗ ಶ್ರೀಮಠದ ಪರಂಪರೆಯಲ್ಲಿರುವ ಪ್ರಪ್ರಥಮ ಲೇಖನ 'ಹೊಳೆ ಹಿಪ್ಪರಗಿಯ ಹಿರೇಮಠ' ಎಂಬುದು. ಇದನ್ನು ಬರೆದವರು ಡಾ. ಸಂಗಮೇಶ ಬಿರಾದಾರವರು. ಅಭಿನಂದನ ಗ್ರಂಥದ ರೂವಾರಿಯಾದ, ಕಾರಣಿಕರ್ಥರಾದ ಪರಮಪೂಜ್ಯ ಡಾ. ಅಭಿನವ ಸಿದ್ಧರಾಮದೇವರು ಹೊಳೆ ಹಿಪ್ಪರಗಿಯ ಪೀಠಾಧಿಪತಿಗಳಾಗಿ ಬರುವುದಕ್ಕಿಂತ ಪೂರ್ವದಲ್ಲಿ ಶ್ರೀಮಠದ ಪರಂಪರೆಯ ಇತಿಹಾಸವನ್ನು ಪ್ರಸ್ತುತ ಪಡಿಸಿದ್ದಾರೆ. ಹಿಪ್ಪರಗಿ ಊರುಗಳು ಬಹಳ ಇರುವುದರಿಂದ ಜಮಖಂಡಿ ತಾಲೂಕಿನಲ್ಲಿರುವ ಹಿಪ್ಪರಗಿಗೆ ಹೊಳೆಯ ಹಿಪ್ಪರಗಿ, ಹಿರಿಯ ಪರಿಗೆ > ಹಿಪ್ಪರಗಿ, ಹಿರಿಯ ದಿಬ್ಬೆ, ಹಿರಿಯಪುರ - ಈ ಮುಂತಾದ ಹೆಸರುಗಳನ್ನು ಸಂಶೋಧಿಸಿ ಹೇಳಿದವುಗಳು. ಈ ಊರಲ್ಲಿರುವ ಕಲ್ಮೇಶ್ವರ ಗುಡಿಯ ಪ್ರಾಚೀನತೆಯ ಇತಿಹಾಸವನ್ನೂ ಆಧಾರ ಸಹಿತವಾಗಿ ಹೇಳಿರುವುದೊಂದು ಐತಿಹಾಸಿಕ ಸತ್ಯ. ಹಿಪ್ಪರಗಿಯಲ್ಲಿ ೧೯ ದೇವಸ್ಥಾನಗಳಿದ್ದು; ಅವುಗಳಲ್ಲಿ ೫ ಮಠಗಳಿವೆಯೆಂದು ಹೇಳಿರುವರು. ಲಿಂಗಾಯತ ಮಠಗಳಲ್ಲಿ ಎರಡು ಪ್ರಕಾರಗಳಿದ್ದು ಒಂದು ಗುರುಮಠ ಇನ್ನೊಂದು ವಿರಕ್ತಮಠ ಎಂದೂ ವಿಭಜಿಸಿದ್ದಾರೆ. ಹಿಪ್ಪರಗಿಯ ಹಿರೇಮಠವು ಶ್ರೀಶೈಲದ ಸೂರ್ಯ ಸಿಂಹಾಸನಕ್ಕೆ ಒಳಪಟ್ಟ ಗುರುವರ್ಗದ ಮಠವಾಗಿದೆ. ಇದರ ಅಧಿಪತಿ ಗುರುಸ್ವಾಮಿ ಪ್ರಾಪಂಚಿಕನಾಗಿರದೆ ಸ್ವಾಮಿಯಾಗಿರುತ್ತಾನೆ. ಇದು ಪುತ್ರ ವರ್ಗದ ಮಠ. ಜಮಖಂಡಿ ತಾಲೂಕಿನ ತುಂಗಳ ಮತ್ತು ಅಥಣಿ ತಾಲೂಕಿನ ಅರಟಾಳ ಈ ಊರುಗಳಲ್ಲಿರುವ ಹಿರೇಮಠಗಳು ಇದೇ ಶಾಖೆಯವು. ಈ ಮಠಗಳು ಪ್ರಾಪಂಚಿಕವಾಗಿದ್ದು, ಹಿಪ್ಪರಗಿಯ ಗುರುಸ್ವಾಮಿಗಳನ್ನು ಈ ಮಠಗಳಿಂದಲೇ ತೆಗೆದುಕೊಳ್ಳಲಾಗುತ್ತದೆಯೆಂದು ಶ್ರೀಮಠದ ಪರಂಪರೆಯನ್ನು ಎಳೆಎಳೆಯಾಗಿ ಸುಮಾರು ೧೪ ಪುಟಗಳಲ್ಲಿ ಸಂಶೋಧಕ ಡಾ. ಸಂಗಮೇಶ ಬಿರಾದಾರ ಅವರು ವಿವರಿಸಿದ್ದಾರೆ.

ಎರಡನೆಯ ಭಾಗದಲ್ಲಿ ಒಂಭತ್ತು ಜನ ವಿದ್ವಾಂಸರು ಒಂಭತ್ತು ಲೇಖನಗಳಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಂಡಿರುವರು. ಅದರ ಶೀರ್ಷಿಕೆ 'ವೀರಶೈವ ಧರ್ಮದ

ತಿಳುವಳಿಕೆಯ ಚಿಂತನೆ' ಎಂಬುದಾಗಿದೆ. ಇಂದಿನ ಯುಗದಲ್ಲಿ ವೀರಶೈವ ಧರ್ಮದ ತಿಳುವಳಿಕೆಯ ಒಳನೋಟಗಳನ್ನು ಗುರುತಿಸಲಾಗಿದೆ. ಡಾ. ಎಂ. ಶಿವಕುಮಾರಸ್ವಾಮಿ ಇವರ 'ಶೈವಾಗಮಗಳು ವೀರಶೈವದ ಮೂಲ ಆಕರಗಳು. ಸುಮಾರು ಹನ್ನೊಂದು ಪುಟಗಳಲ್ಲಿ ಈ ಲೇಖನ ತೆರೆದುಕೊಳ್ಳುತ್ತದೆ. ಶೈವಾಗಮಗಳ ಉತ್ತರ ಭಾಗಗಳಲ್ಲಿ ವೀರಶೈವ ಮತದ ಆಚಾರ–ವಿಚಾರಗಳು ಮೊದಲಿಗೆ ಪ್ರತಿಪಾದಿಸಲ್ಪಟ್ಟಿವೆ. ವೀರಶೈವರ ಆಚಾರ್ಯ ಪರಂಪರೆ, ವೀರಶೈವ ದೀಕ್ಷೆ, ಅಷ್ಟಾವರಣ, ಪಂಚಚಾರ ಯುಕ್ತ ಷಟ್‌ಸ್ಥಲಾತ್ಮಕ ಸಾಧನಮಾರ್ಗ, ದಾರ್ಶನಿಕ ತತ್ತ್ವಗಳು ಮುಂತಾದ ಒಳ ಅಧ್ಯಾಯಗಳಲ್ಲಿ ವಿಂಗಡಿಸಿ ವಿಶ್ಲೇಷಣೆಯ ವಿವರ ಒದಗಿಸಿದ್ದಾರೆ. ಲೇಖನದಲ್ಲಿ ಆಗಮೋಕ್ತಗಳ ಉಲ್ಲೇಖವಾದ ಶ್ಲೋಕಗಳು ಸಂದರ್ಭೋಚಿತವಾಗಿ ಬಂದು ವಿಷಯಕ್ಕೆ ಸಮಂಜಸವಾಗಿವೆ. ಶೈವಾಗಮಗಳ ಅಧ್ಯಯನವಿಲ್ಲದೇ ವೀರಶೈವದ ಯಾವುದೇ ಅಧ್ಯಯನವು ಪೂರ್ಣಗೊಳ್ಳಲಾರದು ಎಂದು ಲೇಖಕರು ಹೇಳುತ್ತ ಪ್ರಸ್ತುತದಲ್ಲಿ ಅದರ ಅಧ್ಯಯನ ಅಗತ್ಯವಿದೆಯೆಂದು ಸ್ಪಷ್ಟಪಡಿಸಿದ್ದಾರೆ.

ಡಾ. ಅಭಿನವ ಸಿದ್ಧರಾಮ ದೇವರು ಅವರಿಗೆ ಸಂಸ್ಕೃತದ ವಿದ್ಯಾಗುರುಗಳಾದ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಜಂಗಮ ವಾಡಿಮಠ, ಕಾಶಿ ಇವರು 'ಸಿದ್ಧಾಂತ ಶಿಖಾಮಣಿಯ ಸಾರ್ವಕಾಲಿಕ ಸಾರ್ವಭೌಮ ಸಿದ್ಧಾಂತಗಳು' ಎಂಬ ಲೇಖನದಲ್ಲಿ ಪೂಜ್ಯರು ಹೇಳಿದ್ದು ಹೀಗೆ – 'ಇಂದು ವೀರಶೈವ ಧರ್ಮ ಗ್ರಂಥವೆಂದು ಪ್ರಸಿದ್ಧವಾಗಿರುವ ಶ್ರೀ ಸಿದ್ಧಾಂತ ಶಿಖಾಮಣಿಯು ಧಾರ್ಮಿಕ ಹಾಗೂ ದಾರ್ಶನಿಕ ಸಿದ್ಧಾಂತಗಳು ಅಂದು ಎಷ್ಟು ಪ್ರಯೋಜನಕಾರಿಗಳಾಗಿದ್ದವೋ ಇಂದೂ ಕೂಡ ಅಷ್ಟೇ ಪ್ರಯೋಜನಕಾರಿಗಳಾಗಿವೆ. ಇದೂ ಅಲ್ಲದೆ ಮುಂದೆಯೂ ಸಹ ಪ್ರಯೋಜನಕಾರಿಯಾಗುವವು. ಆದ್ದರಿಂದ ಈ ಸಿದ್ಧಾಂತವನ್ನು ಸಾರ್ವಭೌಮ ಸಿದ್ಧಾಂತವೆಂತಲೂ, ಸಾರ್ವಕಾಲಿಕ ಸಿದ್ಧಾಂತವೆಂತಲೂ ಕರೆಯಲಾಗಿದೆ ಎಂಬುದಾಗಿ ಉಲ್ಲೇಖಿಸಿದ್ದಾರೆ. ಗುರುವಿನ ಈ ಬೋಧನೆಯಿಂದ ಕಲಿತ ಶಿಷ್ಯ ಸಿದ್ಧರಾಮ ದೇವರು ಅವರು ಇದೇ ವಿಷಯದ ಕುರಿತು ಸಂಶೋಧನೆ ಕೈಕೊಂಡದ್ದು ಸಾರ್ಥಕವಾಗಿದೆ ಎಂದೂ ನನ್ನ ಭಾವನೆ.

ಡಾ. ಸಂಗಮೇಶ ಬಿರಾದಾರ ಅವರ ಮಾರ್ಗದರ್ಶನದಲ್ಲಿಯೇ ಪಿ.ಎಚ್.ಡಿ. ಮಾಡಿರುವ ಡಾ. ಬಿ. ಎಂ. ಪಾಟೀಲರ ಲೇಖನ 'ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿಯವರ ಜೀವನ ಸಾಧನೆ'ಗಳ ಬಗೆಗೆ ಸುಮಾರು ಹನ್ನೆರಡು ಪುಟಗಳಲ್ಲಿ ವಿವರಿಸಲ್ಪಟ್ಟಿದೆ. ವಚನ ಸಾಹಿತ್ಯದ ಮರು ಓದಿಗೆ ಕಾರಣಕರ್ತರಾದ ಫ. ಗು. ಹಳಕಟ್ಟಿಯವರನ್ನು ನಾಡು, ನುಡಿ, ದೇಶ ಎಂದೂ ಮರೆಯಲಾರದು. ಬನಹಟ್ಟಿಯ ಚಿಕ್ಕೋಡಿ ತಮ್ಮಣ್ಣಪ್ಪನವರ ಹಿತವಾದ ಮಾತುಗಳನ್ನು ಮನಸಾರೆ ಸ್ವೀಕರಿಸಿ, ವಚನದ

ತಾಡೋಲೆಯ ಪತ್ರಗಳನ್ನು ಹುಡುಕಿ, ಹೆಕ್ಕಿ ತೆಗೆದು, ಮುದ್ರಿಸಿ ಈ ನಾಡಿಗೆ ನೀಡಿದ್ದು ಸಣ್ಣ ಮಾತೇನಲ್ಲ! ಒಂದು ವೇಳೆ ವಚನ ಸಾಹಿತ್ಯವನ್ನು ಅವರು ಸಂಪಾದಿಸಿ ಕೊಡದಿದ್ದರೆ ನಾವಿನ್ನೂ ಅಂಧಕಾರದಲ್ಲಿಯೇ ಮುಳುಗುತ್ತಿದ್ದೆವು. ಅಂಥ ಮಹಾಮಹಿಮನ ಜೀವನ ಸಾಧನೆಯ ಒಟ್ಟು ನೋಟವನ್ನು ಈ ಲೇಖನದಲ್ಲಿ ತುಂಬಾ ಸುಂದರವಾಗಿ ನಿರ್ವಹಿಸಿದ್ದಾರೆ.

ಡಾ. ಸ. ಜ. ನಾಗಲೋಟಿಮಠ ಅವರು ಪ್ರಸಿದ್ಧ ತಜ್ಞವೈದ್ಯರಾಗಿದ್ದರು. ಅವರು 'ವೀರಶೈವ ಧರ್ಮಾಚರಣೆಗಳಲ್ಲಿ ವೈಜ್ಞಾನಿಕ ದೃಷ್ಟಿಕೋನ' ಎಂಬ ಲೇಖನದಲ್ಲಿ ಹಿಂದಿನ ಮಹಾತ್ಮರು ವೈಜ್ಞಾನಿಕ ತಿಳುವಳಿಕೆಗಳನ್ನು ತಮ್ಮ ವಿಚಾರಗಳೊಂದಿಗೆ ಹೊಸೆದು ಆಚರಣೆಗೆ ತಂದಿರಬೇಕು. ಆದರೆ ನಾವಿಂದು ಧರ್ಮದ ಆಚರಣೆಯಲ್ಲಿ ಅವೈಜ್ಞಾನಿಕ ಮೂಢನಂಬಿಕೆ, ಹಳೆಯ ಸಂಪ್ರದಾಯಗಳವು ಎಂದು ಹಳಿದು, ನಮ್ಮದೇ ಆದ ಧರ್ಮಾಚರಣೆಯಲ್ಲಿ ನಡೆದಿದ್ದೇವೆ ಎಂದು ಪ್ರತಿಪಾದಿಸಿದ್ದಾರೆ. ಧರ್ಮದಿಂದ ನಡೆದರೆ ಎಲ್ಲರಿಗೂ ಒಳ್ಳೆಯದಾಗುತ್ತದೆಯೆಂಬ ನಂಬುಗೆ ಅಂದು-ಇಂದು ಎಲ್ಲರದೂ ಆಗಿದೆಯೆಂದು ವಿವಿಧ ಉದಾಹರಣೆಗಳೊಂದಿಗೆ ಬಿತ್ತರಿಸುವ ಲೇಖನವಿದಾಗಿದೆ.

ಮೂರನೆಯ ವಿಭಾಗ 'ವೀರಶೈವ; ಇತರ ಜಾಗತಿಕ ಧರ್ಮಗಳು' ಎಂಬುದರಲ್ಲಿ ಒಟ್ಟು ೫ ಲೇಖನಗಳಿವೆ. ಕೊನೆಯವರೆಡು ಲೇಖನಗಳಾದ 'ವೀರಶೈವ ಝೆನ್' ಮತ್ತು ವೀರಶೈವ-ಶಿಖ್' ಎಂಬ ಲೇಖನಗಳಲ್ಲಿ ೨ ನೆಯ ವಿಭಾಗದಲ್ಲಿದ್ದು ಮೂರನೆಯ ಭಾಗದಲ್ಲಿಯೂ ಪುನರಾವರ್ತನಗೊಂಡಿದೆ. ಅದೇ ಲೇಖಕರ ಅವೇ ವಿಚಾರಗಳಿವೆ. ಬೇರೆ ಲೇಖನಗಳಿಗೆಡೆ ಕೊಡಬೇಕಾಗಿತ್ತು. ಕಾರಣ ಗೊತ್ತಾಗಲಿಲ್ಲವಷ್ಟೇ. ಈ ವಿಭಾಗದ ಇನ್ನುಳಿದ ಮೂರು ಲೇಖನಗಳು ಡಾ. ಎನ್. ಜಿ. ಮಹಾದೇವಪ್ಪನವರು ಬರೆದ ಲೇಖನ ಲಿಂಗಾಯತ-ಬೌದ್ಧ, ಡಾ. ಎಸ್. ಪಿ. ಪಾಟೀಲರು ಬರೆದಿರುವ ಲೇಖನ 'ವೀರಶೈವ; ಜೈನ' ಹಾಗೂ ಡಾ. ಸಿಸ್ಟರ್ ವಾಯ್‌ಲೆಟ್ ಅವರು ಬರೆದಿರುವಂತಹ ಲೇಖನ 'ವೀರಶೈವ; ಕ್ರೈಸ್ತ' ಧರ್ಮಗಳ ಪ್ರಾಚೀನತೆ, ಅವುಗಳಲ್ಲಿರುವ ಧರ್ಮ ತತ್ತ್ವಗಳು ವಿವರಣೆಯೊಂದಿಗೆ ವೀರಶೈವ ಧರ್ಮಕ್ಕೆ ತೌಲನಿಕವಾಗಿ ಲೇಖಕರು ವ್ಯಾಖ್ಯಾನಿಸಿ ವಿವರಿಸಿದ್ದಾರೆ.

❖❖❖❖❖

[illegible]

[illegible]

[illegible]

[illegible]

ಅಡಿಟಿಪ್ಪಣಿಗಳು :

೧) ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್.ಎಸ್. ಶೇಷಗಿರಿರಾವ್ : ಪು.ಸಂ. : ೩೨೭

೨) ಡಾ. ಚಂದ್ರಶೇಖರ ವಸ್ತ್ರದ : 'ಕಾವ್ಯೋದ್ಯಾನದ ಭ್ರಮರ : ಕುಂತಳ ಅಭಿನಂದನ ಗ್ರಂಥ : ಲೇಖನ : ಪು.ಸಂ. : ೧೧೭

೩) ಸದ್ಗುರು ಸಮರ್ಥ : ಸ.ಸ. ಗಿರಿಮಲ್ಲೇಶ್ವರ ಜೀವನ ಚರಿತ್ರೆ : ಡಾ. ಸಂಗಮೇಶ ಬಿರಾದಾರ ಪು.ಸಂ. : ೧೧೭

೪) ಅದೇ ಪುಸ್ತಕ : ಪು.ಸಂ. : ೧೪೦

೫) ಚಾಪ ಹಾಕತೀವ ಡಪ್ಪಿನ ಮ್ಯಾಲ : ಡಾ. ಸಂಗಮೇಶ ಬಿರಾದಾರ : ಪು.ಸಂ. : ೫

೬) ಅದೇ ಪುಸ್ತಕ : ಪು.ಸಂ. : ೪೬

ಅಧ್ಯಾಯ : ೪

ಸಂಶೋಧನೆಗಳು

ಅಧ್ಯಾಯ – ೪
ಸಂಶೋಧನೆಗಳು

೪.೧ ಸಂಶೋಧನಾ ಪ್ರಬಂಧ :
ವೈಯಾಕರಣ ಎರಡನೆಯ ನಾಗವರ್ಮ :

'ವೈಯಾಕರಣ ಎರಡನೆಯ ನಾಗವರ್ಮ' ಡಾ. ಸಂಗಮೇಶ ಬಿರಾದಾರ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ. ಒಂದು ದಶಕದ ನಂತರ ಅಂದರೆ ೧೯೮೫ರಲ್ಲಿ ಕ.ವಿ.ವಿ ಪ್ರಸಾರಾಂಗ ಇದನ್ನು ಕೃತಿ ರೂಪದಲ್ಲಿ ಪ್ರಕಟಿಸಿತು. ವೈಯಾಕರಣ ಕೇಂದ್ರಿತ ಈ ಅಧ್ಯಯನಕ್ಕೆ ಮಾರ್ಗದರ್ಶನ ಮಾಡಿದವರು ಖ್ಯಾತ ವಿದ್ವಾಂಸರಾದ ಡಾ. ಆರ್. ಸಿ. ಹಿರೇಮಠರು.

ಇಪ್ಪತ್ತನೆಯ ಶತಮಾನದ ೬೦, ೭೦ರ ದಶಕಗಳಲ್ಲಿ ಕವಿ–ಕಾವ್ಯ ಕೇಂದ್ರಿತ ಸಂಶೋಧನೆಗಳು ಹೇರಳವಾಗಿ ಬಂದವು. ಆರ್. ನರಸಿಂಹಾಚಾರ್ 'ಕವಿಚರಿತೆ' ಕಟ್ಟಿದ ಮೇಲೆ, ಅಲ್ಲಿನ ಸಮಸ್ಯೆ ಮತ್ತು ಸಂದೇಹಗಳನ್ನು ಎತ್ತಿಕೊಂಡ ಈ ಮಾದರಿ ಸಂಶೋಧನೆಗಳ ಕನ್ನಡ ಸಾಹಿತ್ಯ ಚರಿತ್ರೆಗೆ ಖಚಿತತೆ ತಂದು ಕೊಡುವಲ್ಲಿ ಸಾರ್ಥಕವೆನಿಸಿದವು. ಬಹುಕಾಲ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕಾಡಿದ ಸಮಸ್ಯೆಯೆಂದರೆ ನಾಗವರ್ಮರ ಸಂಖ್ಯೆ. ನಾಗವರ್ಮ ಎಂಬ ಹೆಸರಿನ ಹಲವು ಕವಿಗಳು ಕನ್ನಡದಲ್ಲಿ ಕೃತಿಗಳನ್ನು ರಚಿಸಿರುವರು. ಛಂದೋಂಬುಧಿ, ಕಾದಂಬರಿ, ಕಾವ್ಯಾವಲೋಕನ, ಅಭಿದಾನ ವಸ್ತುಕೋಶ, ಕರ್ನಾಟಕ ಭಾಷಾ ಭೂಷಣ, ವರ್ಧಮಾನ ಪುರಾಣ, ವತ್ಸರಾಜಚರಿತೆ, ಚಂದ್ರಚೂಡಾಮಣಿಶತಕ ಮುಂತಾದವು ನಾಗವರ್ಮರ ಹೆಸರಿನಲ್ಲಿ ಸಿಗುವ ಪ್ರಾಚೀನ ಕೃತಿಗಳು. 'ಕನ್ನಡದಲ್ಲಿ ನಾಗವರ್ಮರೆಂಬುವರು ಎಷ್ಟು ಜನ? ಎಂಬ ಸಮಸ್ಯೆಯನ್ನು ಮೊದಲಿಗೆ ಎತ್ತಿಕೊಂಡು ಸಮಾಧಾನಕರವೂ ಸ್ವೀಕಾರಾರ್ಹವೂ ಆದ ನಿರ್ಣಯಕ್ಕೆ ಬಂದವರು ಡಾ. ಸಂಗಮೇಶ ಬಿರಾದಾರ' ಎಂದಿದ್ದಾರೆ ಡಾ. ಆರ್. ಸಿ. ಹಿರೇಮಠ. ವಿಚಿತ್ರವೆಂದರೆ ಅದೊಂದು ಸಮಸ್ಯೆಯೇ ಅಲ್ಲವೆಂಬಷ್ಟು ಸರಳವಾಗಿ ಆ ಸಮಸ್ಯೆಯನ್ನು ಬಿಡಿಸಿದುದು ಅವರ ಹೆಗ್ಗಳಿಕೆ ಆಂತರಿಕ ಹಾಗೂ ಬಾಹ್ಯ ಆಧಾರಗಳನ್ನು ಒಂದೆಡೆ ಕಲೆ ಹಾಕಿ ಮೂವರು ನಾಗವರ್ಮರನ್ನು ಗುರುತಿಸುವ ಬಿರಾದಾರ, ಅವರವರ ಕೃತಿಗಳನ್ನು ಸ್ಪಷ್ಟವಾಗಿ ಪಟ್ಟಿ ಮಾಡಿದ್ದು ಅವರ ಅಧ್ಯಯನದ ಆಳ–ವಿಸ್ತಾರಗಳನ್ನು ತೆರೆದಿಡುತ್ತದೆ. ಆದರೆ ಈ ಸರಳತೆಯೇ ಮಹಾಪ್ರಬಂಧದ ಮಿತಿಯನ್ನು ನಿರ್ಧರಿಸುತ್ತದೆ.

ಡಾ. ಸಂಗಮೇಶ ಬಿರಾದಾರ ಅವರ ಮಹಾಪ್ರಬಂಧ ಮೂರು ಭಾಗಗಳಲ್ಲಿ ಮೈದಳೆದಿದ್ದು, ಮೊದಲ ಭಾಗ ನಾಗವರ್ಮರ ಸಂಖ್ಯಾ ಸಮಸ್ಯೆಯನ್ನು ಬಿಡಿಸಿದರೆ ಎರಡನೆಯ ಭಾಗ ಎರಡನೆಯ ನಾಗವರ್ಮನ ವ್ಯಾಕರಣದ ಹಿನ್ನೆಲೆಯನ್ನು ಶೋಧಿಸುತ್ತದೆ. ಮೂರನೆಯ ಭಾಗ ಕನ್ನಡ ವ್ಯಾಕರಣ ಸಮೀಕ್ಷೆಗೆ ಮೀಸಲು. ತುಂಬ ಶ್ರಮ ಮತ್ತು ಶ್ರದ್ಧೆಯಿಂದ ಈ ಮಹಾಪ್ರಬಂಧವನ್ನು ಕಟ್ಟಲಾಗಿದೆ. ಒಂದು ರೀತಿಯಲ್ಲಿ ಇಲ್ಲಿಯ ಅಧ್ಯಾಯಗಳ ಸಂಖ್ಯೆ ಕೇವಲ ಮೂರು. ಪರಿವಿಡಿಯೇ ಅಧ್ಯಯನದ ಉಪಕ್ರಮವನ್ನು ಬಿಡಿಸಿಡುತ್ತದೆ. ಲೇಖಕರೇ ಹೇಳುವಂತೆ ಮೂರನೆಯ ಭಾಗ, ಸಮಾಲೋಚನೆ ಈ ಪ್ರಬಂಧದ ಜೀವ ಜೀವಾಳ.

ವ್ಯಾಕರಣ, ಛಂದಸ್ಸು, ಅಲಂಕಾರಗಳ ಅಧ್ಯಯನ ಸುಲಭವಲ್ಲ. ವ್ಯಾಕರಣ, ಭಾಷಾವಿಜ್ಞಾನ, ವಿಜ್ಞಾನದಲ್ಲಿ 'ಪ್ರಯೋಗ'ಗಳೇ ಸಂಶೋಧನೆಯ ಕೇಂದ್ರ. ಅತ್ಯಂತ ಶಿಸ್ತು ಮತ್ತು ಸಮಾಧಾನದಿಂದ ಎರಡನೆಯ ನಾಗವರ್ಮನ ವ್ಯಾಕರಣವನ್ನು ಅಧ್ಯಯನಿಸಿದ ಡಾ. ಸಂಗಮೇಶ ಬಿರಾದಾರ ಕನ್ನಡ ವ್ಯಾಕರಣ ಅಧ್ಯಯನಕ್ಕೊಂದು ಆಕರ ಗ್ರಂಥವಾಗಿ ಮಹಾಪ್ರಬಂಧವನ್ನು ರೂಪಿಸಿದುದು ಪ್ರಶಂಸನೀಯ. ನಾಗವರ್ಮನ ಪ್ರಯೋಗಗಳ ಹಿನ್ನೆಲೆ-ಮುನ್ನೆಲೆಗಳನ್ನು ನಿಖರವಾಗಿ ಗುರುತಿಸಿರುವರು.

'ಕರ್ನಾಟಕ ಭಾಷಾಭೂಷಣ'ವನ್ನು ಸಂಪಾದಿಸಿದ ಬಿ.ಎಲ್.ರೈಸ್ ಮುನ್ನುಡಿಯಲ್ಲಿ ಛಂದೋಂಬುಧಿಯಿಂದ ಮೊದಲುಗೊಂಡು ಚಂದ್ರಚೂಡಾಮಣಿ ಶತಕದವರೆಗಿನ ಎಲ್ಲ ಕೃತಿಗಳನ್ನು ರಚಿಸಿದವನು ಒಬ್ಬನೇ ನಾಗವರ್ಮನೆಂದು ಹೇಳಿದ್ದರು. ಆದರೆ ಆರ್. ನರಸಿಂಹಾಚಾರ್ ರೈಸ್‌ರ ಅಭಿಪ್ರಾಯವನ್ನು ಒಪ್ಪದೆ ಛಂದೋಂಬುಧಿ, ಕರ್ನಾಟಕ ಕಾದಂಬರಿಗಳನ್ನು ಬರೆದವನು ಒಬ್ಬನು, ಕಾವ್ಯಾ ಲೋಕನಾದಿಗಳನ್ನು ಬರೆದವನು ಮತ್ತೊಬ್ಬನು ಎಂದು ಸಾಧಾರವಾಗಿ ನಿರ್ಣಯಿಸಿದರು. ಡಾ. ಎ. ವೆಂಕಟಸುಬ್ಬಯ್ಯನವರು ನರಸಿಂಹಾಚಾರ್‌ರ ಅಭಿಪ್ರಾಯವನ್ನು ಒಪ್ಪದೆ ರೈಸ್‌ರ ಅಭಿಮತವನ್ನು ಬೆಂಬಲಿಸಿದುದು ನಾಗವರ್ಮರ ಸಮಸ್ಯೆಗೆ ಚಾಲನೆ ನೀಡಿತು. ೧೯೭೪ರಲ್ಲಿ ನಾಗವರ್ಮನ 'ವರ್ಧಮಾನಪುರಾಣ' ಸಿಕ್ಕಿತು. ಡಾ. ಸಂಗಮೇಶ ಬಿರಾದಾರ ನಾಗವರ್ಮರ ಸಮಸ್ಯೆಗೆ ಇತಿಶ್ರೀ ಹಾಡಲೆಂದೇ ತಮ್ಮ ಪ್ರಬಂಧದ ಮೊದಲ ಭಾಗವನ್ನು ಆ ವಿಷಯಕ್ಕೆ ಮುಡುಪಿಟ್ಟಿರುವುದು. ಅವರು ನಾಗವರ್ಮರ ಹೆಸರಿನಲ್ಲಿರುವ ಎಲ್ಲ ಕೃತಿಗಳನ್ನು ಅಭ್ಯಾಸ ಮಾಡಿ ಕವಿ, ಕಾಲ, ದೇಶ, ರಾಜರಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಿ, ತೌಲನಿಕವಾಗಿ ತೂಗಿ ನೋಡಿರುವರು. ಛಂದೋಂಬುಧಿಯ ನಾಗವರ್ಮನ ತಂದೆ, ತಾಯಿ, ಆಶ್ರಯದಾತರನ್ನು ಅನುಲಕ್ಷಿಸಿ, ಅವನು ಕಾವ್ಯಾವಲೋಕನಾದಿಗಳನ್ನು ರಚಿಸಿದ ನಾಗವರ್ಮನಿಗಿಂತ ಭಿನ್ನನೆಂಬುದು ಡಾ. ಸಂಗಮೇಶ ಬಿರಾದಾರರ ಸಂಶೋಧನೆಯ ಮೊದಲ ಫಲಿತಾಂಶ. ಮೊದಲನೆಯ ನಾಗವರ್ಮನ ಚರಿತ್ರೆ ಪ್ರಬಂಧದ ಮೊದಲ ೧೫ ಪುಟಗಳಲ್ಲಿ ನಿರೂಪಿತಗೊಂಡಿದೆ.

ಒಂದನೆಯ ನಾಗವರ್ಮನ ಕಾಲ ಕ್ರಿ.ಶ. ೯೮೪-೧೦೧೪. ಈತ ವೆಣ್ಣಮಯ್ಯ ಪೋಜಿಕಬ್ಬೆಯ ಮಗ. ಈತನ ಗುರು ಅಜಿತಸೇನ ಪಂಡಿತ ದೇವರು. ಛಂದೋಂಬುಧಿ ಮತ್ತು ಕರ್ನಾಟಕ ಕಾದಂಬರಿಗಳು ಇವನ ಕೃತಿಗಳೆಂದು ಹೇಳಿರುವ ಸಂಶೋಧಕರು ಅವನ ಧರ್ಮದ ಕುರಿತು ಗೊಂದಲದ ಹೇಳಿಕೆ ನೀಡಿರುವುದು ಸ್ಪಷ್ಟ 'ಛಂದೋಂಬುಧಿಯಲ್ಲಿ ಕವಿಯು ವೈದಿಕ ಧರ್ಮಾವಲಂಬಿಯಾಗಿ ಅದರಲ್ಲಿಯೂ ಶಿವೋಪಾಸಕನಾಗಿ ಕಂಡುಬಂದರೆ ಕಾದಂಬರಿಯಲ್ಲಿ ಇವನನ್ನು ಶೈವನೆಂದಲ್ಲದೆ ಬೇರೇನನ್ನೂ ಹೇಳಲು ಬರುವಂತಿಲ್ಲ' ಎನ್ನುತ್ತಾರೆ. ಪುಟ ೮ ರಲ್ಲಿ 'ರನ್ನ ಮತ್ತು ಚಾವುಂಡರಾಯರಿಗೆ ಗುರುವಾಗಿದ್ದ ಅಜಿತಸೇನರೇ ನಾಗವರ್ಮರ ಗುರುವೆಂಬುದು ನಿರ್ವಿವಾದ' ಎಂದು ಹೇಳಿದಾಗ ಆತ ಜೈನನಾಗಿರಬೇಕೆನಿಸುತ್ತದೆ. ಆದರೆ ಅವನ ಕೃತಿಗಳಲ್ಲಿ ಜಿನಸ್ತುತಿ ಬದಲು ಶಿವಸ್ತುತಿಯಿದೆ. ಡಾ. ಸಂಗಮೇಶ ಬಿರಾದಾರ ಮಂಡಿಸುವ ಬಹುತೇಕ ಅಭಿಪ್ರಾಯಗಳು ಕವಿ ಚರಿತ್ರೆಕಾರರವು. ಅವರು ಕವಿಚರಿತೆಯ ಜಾಡಿನಲ್ಲಿಯೇ ನಾಗವರ್ಮರ ಸಮಸ್ಯೆ ಬಿಡಿಸುತ್ತಾರೆ. ೧೯೨೪ ರಲ್ಲಿಯೇ ನರಸಿಂಹಾಚಾರ್‌ರು ಮೂವರು ನಾಗವರ್ಮರನ್ನು ಗುರುತಿಸಿದ್ದಾರೆ. ಅವರವರ ಕೃತಿಗಳನ್ನು ಬೇರೆ-ಬೇರೆಯಾಗಿ ನಮೂದಿಸಿದ್ದಾರೆ. ಅವರ ಅಭಿಪ್ರಾಯಕ್ಕೆ ಈ ಸಂಶೋಧಕರು ಮತ್ತಷ್ಟು ಪೂರಕ ದಾಖಲೆಗಳನ್ನು ಒದಗಿಸಿ, ವಿವರವಾಗಿ ಚರ್ಚಿಸಿದ್ದಾರೆ.

ವರ್ಧಮಾನ ಪುರಾಣ ಸಿಕ್ಕ ಮೇಲೆ ಎರಡನೆಯ ನಾಗವರ್ಮನ ಕಾಲ ಸ್ಪಷ್ಟವಾಯಿತು. ಅಲ್ಲಿ ಅವನು ತನ್ನ ಸ್ವವಿಷಯವನ್ನು ಹೇಳಿ ಕಾಲವನ್ನು ನಮೂದಿಸಿದ್ದಾನೆ. ಇದರಿಂದ ಸಂಶೋಧಕರ ಶ್ರಮ ಉಳಿದಿದೆ. ಕಾವ್ಯಾವಲೋಕನ ಅಲಂಕಾರಶಾಸ್ತ್ರ ಮತ್ತು ಕರ್ನಾಟಕ ಭಾಷಾ ಭೂಷಣ ವ್ಯಾಕರಣ ಗ್ರಂಥ, ಅಭಿಧಾನ ವಸ್ತು ಕೋಶ ಒಂದು ನಿಘಂಟು. ವರ್ಧಮಾನ ಪುರಾಣ ಚಂಪೂ ಕಾವ್ಯ. ಛಂದೋವಿಚಿತಿ ಹಾಗೂ ವತ್ಸರಾಜ ಚರಿತ ಅವನ ಅನುಪಲಬ್ಧ ಕೃತಿಗಳು. ದೋರ ಸಮುದ್ರದ ಹೊಯ್ಸಳ ಒಂದನೆಯ ನರಸಿಂಹನ ಆಸ್ಥಾನದಲ್ಲಿದ್ದ ಎರಡನೆಯ ನಾಗವರ್ಮ ಅಭಿನವ ಶರ್ವವರ್ಮನೆಂದೇ ಪ್ರಸಿದ್ಧಿ ಪಡೆದವನು. ಶರ್ವವರ್ಮ ಸಂಸ್ಕೃತ ಕಾತಂತ್ರದ ಕರ್ತೃ. ಸಂಸ್ಕೃತ ವ್ಯಾಕರಣ ಪರಂಪರೆಯ ಹತ್ತು ಮಾರ್ಗಗಳಲ್ಲಿ ಕಾತಂತ್ರದ್ದು ರಾಜಮಾರ್ಗ. 'ಪಾಣಿನಿಯು ಪ್ರಚಾರದಲ್ಲಿ ತಂದ ಕೃತಕ ಪಾರಿಭಾಷಿಕ ಸಂಜ್ಞೆಗಳನ್ನು ತೆಗೆದು ಹಾಕಿ ಪ್ರಾತಿಶಾಖ್ಯದ ಸುಲಭವಾದ ರೀತಿಯನ್ನು ಕಾತಂತ್ರದಲ್ಲಿ ಬಳಸಲಾಗಿದೆ'. ಇಲ್ಲಿಯ ವಿಭಾಗ ಕ್ರಮ ಹೊಸತು. ಇದು ಹೊಸ ಪದ್ಧತಿಯ ಅತಿ ಸುಲಭವಾದ ವ್ಯಾಕರಣ. ಶರ್ವವರ್ಮ ಕಠಿಣ ನಿಯಮಗಳನ್ನು ಕೈಬಿಟ್ಟು, ವ್ಯಾಕರಣವನ್ನು ಸರಳಗೊಳಿಸಿದುದು ಅವನ ವೈಶಿಷ್ಟ್ಯ. ಈ ಕಾತಂತ್ರಕ್ಕೆ ವೃತ್ತಿ ರಚಿಸಿದವರಲ್ಲಿ ದುರ್ಗಸಿಂಹನೇ ಮೊದಲಿಗ. 'ಎರಡನೆಯ ನಾಗವರ್ಮನು ಕಾತಂತ್ರದ ಮೇಲಿನ ದುರ್ಗಸಿಂಹ ವೃತ್ತಿಯನ್ನೇ ಅನುಸರಿಸಿ ತನ್ನ ಎರಡು ವ್ಯಾಕರಣ ಗ್ರಂಥ (ಶಬ್ದಸ್ಮೃತಿ ಮತ್ತು ಕರ್ನಾಟಕ ಭಾಷಾಭೂಷಣ)ಗಳನ್ನು ಬರೆದಿದ್ದಾನೆ. ಒಂದು ಕನ್ನಡದಲ್ಲಿದ್ದರೆ ಇನ್ನೊಂದು ಸಂಸ್ಕೃತದಲ್ಲಿದೆ. ಸಂಸ್ಕೃತದಲ್ಲಿದ್ದ ಕರ್ನಾಟಕ ಭಾಷಾಭೂಷಣವು ದುರ್ಗಸಿಂಹನ ಟೀಕೆಯನ್ನು ಹೆಚ್ಚಾಗಿ ಹೋಲುತ್ತದೆ'.

ಕಾವ್ಯಾವಲೋಕನ ಒಂದು ಭಾಗ ಶಬ್ದಸ್ಮೃತಿ. ಕನ್ನಡದ ಮೊತ್ತ ಮೊದಲ ವ್ಯಾಕರಣ. ಇದರಲ್ಲಿ ಸಂಜ್ಞಾನ, ಸಂಧಿ, ನಾಮ, ಸಮಾಸ, ತದ್ದಿತ ಮತ್ತು ಆಖ್ಯಾತಗಳೆಂಬ ಆರು ಪ್ರಕರಣಗಳಿವೆ. ಕಾತಂತ್ರದ ವಿಸರ್ಗ ಸಂಧಿ, ಕೃತ್ ಪ್ರಕರಣವನ್ನು ಹೊರತುಪಡಿಸಿದರೆ ಎಲ್ಲವೂ ಶಬ್ದಸ್ಮೃತಿಯಲ್ಲಿವೆ. ಡಾ. ಸಂಗಮೇಶ ಬಿರಾದಾರ ತಮ್ಮ ಮಹಾಪ್ರಬಂಧದ ಎರಡನೆಯ ಭಾಗದಲ್ಲಿ ನಾಗವರ್ಮನ ಎರಡೂ ವ್ಯಾಕರಣ ಕೃತಿಗಳನ್ನು ಕಾತಂತ್ರದೊಂದಿಗೆ ತೂಗುವುದು ಗಮನಿಸಬೇಕಾದ ವಿಷಯ.

ಎರಡನೆಯ ನಾಗವರ್ಮನ ಮೇಲೆ ಕಾತಂತ್ರದ ದಟ್ಟ ಪ್ರಭಾವವಿದೆ. ಇದು ವಿಷಯ ವಿಭಾಗ ಕ್ರಮಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಎರಡೂ ಕೃತಿಗಳಲ್ಲಿಯೂ ಕಣ್ಣಿಗೆ ರಾಚುವಷ್ಟು ಮೈ ಚಾಚಿಕೊಂಡಿದೆ. ಡಾ. ಸಂಗಮೇಶ ಬಿರಾದಾರ ಈ ಸ್ವೀಕರಣವನ್ನು ನಾಲ್ಕು ನೆಲೆಗಳಲ್ಲಿ ಗ್ರಹಿಸಿ, ಅದರ ಸ್ವರೂಪ, ಪರಿಣಾಮ ಮತ್ತು ಫಲಿತಗಳನ್ನು ಸೂಕ್ಷ್ಮವಾಗಿ ದಾಖಲಿಸಿದುದು ಶ್ಲಾಘನೀಯ. ಬಹ್ವಂಶ ಸ್ವೀಕರಣ, ಅಲ್ಪಾಂಶ ಸ್ವೀಕರಣ, ಅನುಕರಣ ಮತ್ತು ಅನ್ವೇಷಣ ಡಾ. ಸಂಗಮೇಶ ಬಿರಾದಾರ ಅಧ್ಯಯನದ ಗ್ರಹಿತ ನೆಲೆಗಳು.

'ವರ್ಣಮಾಲೆ, ಕಾರಕ, ಸಮಾಸಗಳಲ್ಲಿಯ ಹೆಚ್ಚಿನ ಭಾಗವು ಕಾತಂತ್ರದಿಂದಲೇ ಭೂಷಣ – ಸ್ಮೃತಿಗಳಲ್ಲಿ ಇಳಿದು ಬಂದಿದೆ'. ಇದನ್ನು ಅವರು ಬಹ್ವಂಶ ಸ್ವೀಕರಣವೆಂದು ಕರೆದಿರುವರು. ಪ್ರಕೃತಿ ಭಾವ ಮತ್ತು ವಿಭಕ್ತಿಗಳಲ್ಲಿ ಕೆಲವು ಅಂಶ ಮಾತ್ರ ಸ್ವೀಕರಿಸಿರುವನು. ಅದನ್ನು ಅಲ್ಪಾಂಶ ಸ್ವೀಕರಣ ಎಂದಿರುವರು. ಕನ್ನಡ ಸಂಸ್ಕೃತ ಜನ್ಯ ಭಾಷೆಯಲ್ಲ. ಸಂರಚನೆಯಲ್ಲಿ ಸಂಸ್ಕೃತಕ್ಕಿಂತ ಭಿನ್ನ. ಕನ್ನಡ ಸಂಧಿ, ಶಬ್ದರೀತಿ, ಸರ್ವನಾಮ, ತದ್ಧಿತ, ಆಖ್ಯಾತ, ಕೃದಂತಗಳು ಸಂಸ್ಕೃತಕ್ಕೆ ಹೊರತಾದವು. ಅವುಗಳ ನಿರೂಪಣೆಯಲ್ಲಿ ನಾಗವರ್ಮನು ಕಾತಂತ್ರವನ್ನು ಅನುಸರಿಸಿರುವನೇ ಹೊರತು ಅಲ್ಲಿಯ ವಿಷಯಗಳನ್ನು ಸ್ವೀಕರಿಸಿಲ್ಲ. ಸ್ವೀಕರಣ, ಅನುಕರಣಗಳು ಹೆಚ್ಚಾಗಿದ್ದರೂ ನಾಗವರ್ಮನ ಸ್ವಂತಿಕೆ ಅಲ್ಲಲ್ಲಿ ಮಿಂಚಿದೆ. ಅದನ್ನು ಅನ್ವೇಷಣವೆಂದು ಹೆಸರಿಸಿ, ಡಾ. ಸಂಗಮೇಶ ಬಿರಾದಾರ ಅವರು ನಾಗವರ್ಮನ ವ್ಯಾಕರಣದ ಪ್ರಭಾವ–ಪ್ರೇರಣೆ–ಅನುಕರಣೆ–ಅನುಸರಣೆ ಅನ್ವೇಷಣೆಗಳನ್ನು ಅಂಗುಲ ಅಂಗುಲ ಅಳೆದಿದ್ದಾರೆ.

ಕವಿರಾಜಮಾರ್ಗ ಕನ್ನಡದ ಲಾಕ್ಷಣಿಕ ಗ್ರಂಥವಾಗಿದ್ದರೂ ಅದರಲ್ಲಿಯೂ ವ್ಯಾಕರಣಕ್ಕೆ ಸಂಬಂಧಿಸಿದ ಹಲವು ವಿಷಯಗಳಿವೆ. ಅವುಗಳನ್ನು ವೈಯಾಕರಣ ನಾಗವರ್ಮ ಗಮನಿಸಿದರುವುದನ್ನು ಡಾ. ಸಂಗಮೇಶ ಬಿರಾದಾರ ಶೋಧಿಸಿರುವರು. ಎರಡನೆಯ ಭಾಗದ 'ಹಿನ್ನೆಲೆ'ಯಲ್ಲಿ ಎರಡು ನೆಲೆಗಳಿವೆ. ಒಂದು ಕಾತಂತ್ರದ ನೆಲೆ ಮತ್ತೊಂದು ಕವಿರಾಜಮಾರ್ಗದ ನೆಲೆ.

ಮಹಾಪ್ರಬಂಧದ ಆಶಯವನ್ನು ಸಫಲಗೊಳಿಸುವ 'ಸಮಾಲೋಚನೆ' ವಿಸ್ತೃತವಾದ ಭಾಗ ಇನ್ನೂರು ಪುಟಗಳಲ್ಲಿ ವ್ಯಾಪಸಿದೆ. ಸಂಜ್ಞೆಯಿಂದ ಮೊದಲುಗೊಂಡು ಅವ್ಯಯ-ನಿಪಾತ ನಿರೂಪಣದ ವಿಧಾನಗಳನ್ನು ಕನ್ನಡ ವ್ಯಾಕರಣಗಳ ಬೆಳಕಿನಲ್ಲಿ ಸಮೀಕ್ಷಿಸಲಾಗಿದೆ. ಜೊತೆಗೆ ಮಲಯಾಳಂ ವ್ಯಾಕರಣ 'ಲೀಲಾತಿಲಕ'ದ ಮೇಲೆ ನಾಗವರ್ಮನ ಪ್ರಭಾವವನ್ನು ಅಳೆಯಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

ಡಾ. ಸಂಗಮೇಶ ಬಿರಾದಾರ ಸಮಾಲೋಚನಾ ವಿಧಾನವನ್ನು ಅಕ್ಷರಗಳ ಸಂಖ್ಯಾ ನಿರ್ಣಯದೊಂದಿಗೆ ಆರಂಭಿಸುವರು. ಸಂಸ್ಕೃತದಲ್ಲಿ ವರ್ಣಮಾಲೆಯಲ್ಲಿ ಅಕಾರದಿಂದ ಹಕಾರದವರೆಗೆ ೫೧ ಅಕ್ಷರಗಳಿವೆ ಎನ್ನುತ್ತಾನೆ ಎರಡನೆಯ ನಾಗವರ್ಮ. ಅವನು ಕೇಶಿರಾಜನಂತೆ ಳ್ ಕಾರವನ್ನು ವರ್ಣಮಾಲೆಗೆ ಸೇರಿಸಿಲ್ಲ. ಸಂಸ್ಕೃತದಲ್ಲಿ ಏ, ಐ, ಓ, ಔ ಎಂಬ ನಾಲ್ಕು ಸಂಧ್ಯಕ್ಷರಗಳು. ಕನ್ನಡದಲ್ಲಿ ಏ, ಓ ಸಂಧ್ಯಕ್ಷರಗಳಲ್ಲ. ಅವು ದೀರ್ಘ ಸ್ವರಗಳು ಮಾತ್ರ. ಕನ್ನಡದಲ್ಲಿ ಸಂಧ್ಯಕ್ಷರಗಳೇ ಇಲ್ಲ ಎನ್ನುತ್ತಾರೆ ಡಾ. ಸಂಗಮೇಶ ಬಿರಾದಾರ ಅವರು. ಏಕೆಂದರೆ 'ಒಂದು ಸ್ವರದ ಮುಂದೆ ಇನ್ನೊಂದು ಸ್ವರವು ಬಂದರೆ ಹಿಂದಿನ ಸ್ವರವು ಲೋಪವಾಗುತ್ತದೆ. ಇಲ್ಲವೆ ಯ, ವ ಕಾರಗಳು ಆ ಎರಡು ಸ್ವರಗಳ ನಡುವೆ ಬರುತ್ತವೆ'. 'ಐ ಮತ್ತು ಔ ಗಳು ಕನ್ನಡದಲ್ಲಿ 'ಇಲ್ಲ' ವೆನ್ನುವ ಕಲ್ಪನೆ ನಾಗವರ್ಮನಿಗಿದೆ'. ಡಾ. ಸಂಗಮೇಶ ಬಿರಾದಾರ ಆ ವಾದವನ್ನು ಸಾಧಿಸುವ ವಿಧಾನ ಕುತೂಹಲ ಕೆರಳಿಸುತ್ತದೆ. ಉದಾಹರಣೆಗಳನ್ನು ಪರಿಶೀಲಿಸುವ ಕ್ರಮ ನಮ್ಮನ್ನು ಚಕಿತಗೊಳಿಸುತ್ತದೆ.

ಕಯ್ವಾರಂ > ಕೈವಾರಂ
ಕವುಂಗು > ಕೌಂಗು
ಅವುಂಕು > ಔಂಕು
ಕಯ್ವಾರಂ = ಕ್ + ಅ + ಯ್ + ವಾರಂ
ಕವುಂಗು = ಕ್ + ಅ + ವ್ + ಉ + ಂಗು
ಅವುಂಕು = ಅ +ವ್ + ಉಂಕು

ಕನ್ನಡದಲ್ಲಿ ಅ+ಏ=ಐ, ಅ+ಓ=ಔ ಆಗುವುದಿಲ್ಲ. ಅ+ಯ್=ಐ, ಅ+ವ್=ಔ ಆಗಿರುವುದು ಕಂಡು ಬರುತ್ತದೆ. ಸಂಸ್ಕೃತದ ಪ್ರಭಾವದಿಂದ ಕನ್ನಡಕ್ಕೆ ಬಂದಿರಬಹುದೆಂದು ಊಹಿಸುವುದು ಸರಿಯೆನಿಸುತ್ತದೆ. ನಮ್ಮ ವೈಯಾಕರಣರು ಸಂಸ್ಕೃತದ ವ್ಯಾಕರಣಗಳನ್ನು ಮುಂದಿಟ್ಟುಕೊಳ್ಳದಿದ್ದರೆ ಖಂಡಿತವಾಗಿಯೂ ಇಂಥ ಸಂದೇಹಗಳು ನಮ್ಮ ವ್ಯಾಕರಣಗಳಲ್ಲಿ ನುಸುಳುತ್ತಿರಲಿಲ್ಲ. ಮಹಾಪ್ರಾಣಾಕ್ಷರಗಳ ವಿಚಾರವೂ ಇದಕ್ಕೆ ಹೊರತಾಗಿಲ್ಲ. ನಾಗವರ್ಮನಿಗೆ ಕನ್ನಡ ಮಹಾಪ್ರಾಣಾಕ್ಷರಗಳ ಬಗ್ಗೆ ಸಂದೇಹವಿತ್ತು. ಆದರೆ ಅವನಲ್ಲಿ ಸ್ಪಷ್ಟತೆಯಿಲ್ಲ.

ಅದನ್ನು ಸ್ಪಷ್ಟೀಕರಿಸಲು ಹೋಗಿ ಕೇಶಿರಾಜ ದೋಷಾರೋಪಣೆಗೆ ಒಳಗಾದ. ಆದರೆ ಎ, ಒ ಸ್ವರಗಳನ್ನು ಕನ್ನಡದ ವರ್ಣಮಾಲೆಗೆ ಸೇರಿಸುವ ನಾಗವರ್ಮ ಮತ್ತು ಕೇಶಿರಾಜರ ಚಿಕಿತ್ಸಕ ದೃಷ್ಟಿಯನ್ನು ಮೆಚ್ಚಲೇಬೇಕು.

ಕನ್ನಡ ಶುದ್ಧಗೆಯ ನಿರೂಪಣೆ ಎರಡನೆಯ ನಾಗವರ್ಮನ ಕೊಡುಗೆ. ಕೇಶಿರಾಜ ಅವನನ್ನೇ ಅನುಸರಿಸಿರುವನಾದರೂ ಗೊಂದಲಕ್ಕೊಳಗಾಗಿರುವನು. ನಾಗವರ್ಮನಲ್ಲಿರುವ ಸ್ಪಷ್ಟತೆ ಕೇಶಿರಾಜನಲ್ಲಿಲ್ಲ. ನಾಗವರ್ಮ ಕಾತಂತ್ರವನ್ನು ಮುಂದಿಟ್ಟುಕೊಂಡು ಕನ್ನಡದ ವರ್ಣವಾಲೆಯನ್ನು ಸಿದ್ಧಪಡಿಸಿದರೂ ಕನ್ನಡದ ಅಧಿಕಾಕ್ಷರ (ದೇಶಿ)ಗಳನ್ನು ಮರೆಯುವುದಿಲ್ಲ. ಈ ಕನ್ನಡ ಅಕ್ಷರಗಳ ಶೋಧ ನಾಗವರ್ಮನ ಸ್ವಂತಿಕೆ ಎಂಬುದು ಡಾ. ಸಂಗಮೇಶ ಬಿರಾದಾರರವರ ಅಭಿಪ್ರಾಯ. ಸಂಧಿ ವಿಧಾನ ವಿವರಣೆಯಲ್ಲಿಯೂ ಅವನ ಸೂಕ್ಷ್ಮ ಪ್ರಜ್ಞೆಯನ್ನು ಸಂಶೋಧಕರು ಶೋಧಿಸಿದ್ದಾರೆ. 'ನಾಗವರ್ಮನು ಸಂಧಿಯ ನಿಯಮಗಳನ್ನು ಪಾಣಿನಿ-ಶರ್ವವರ್ಮರಿಂದ ಪಡೆದಿದ್ದರೂ ಸಂಸ್ಕೃತ ಭಿನ್ನವಾದ ಕನ್ನಡದ ಸಂಧಿಗಳನ್ನು ವಿವರವಾಗಿ ಪ್ರತಿಪಾದಿಸಿ ನಿತ್ಯ-ವಿಕಲ್ಪ ಸಂಧಿಗಳನ್ನು ವಿವರವಾಗಿ ಪ್ರತಿಪಾದಿಸಿ ನಿತ್ಯ-ವಿಕಲ್ಪ ಸಂಧಿಗಳನ್ನು ಎತ್ತಿ ತೋರಿಸಿ ಮುಂದಿನ ವೈಯಾಕರಣರಿಗೆ ಮಾರ್ಗದರ್ಶಿಯಾಗಿದ್ದಾನೆ'.

ಕನ್ನಡ ವೈಯಾಕರಣರು ಸಂಧಿ ನಿಯಮಗಳನ್ನು ಕಟ್ಟುವಲ್ಲಿ ಪಾಣಿನಿಗೆ ಹೆಚ್ಚು ಋಣಿಯಾಗಿದ್ದರೆ, 'ನಾಮ' ವಿಚಾರದಲ್ಲಿ ಶರ್ಮವರ್ಮನಿಗೆ ಹೆಚ್ಚು ಕೃತಜ್ಞರು. ಆದರೆ ಕನ್ನಡ ವಿಭಕ್ತಿಗಳ ಸೂತ್ರೀಕರಣ ನಾಗವರ್ಮನ ಸ್ವೋಪಜ್ಞತೆ. ಕೆಲವೆಡೆಗಳಲ್ಲಿ ಮಾತ್ರ ಎಡವಿದ್ದಾನೆ. ಕನ್ನಡದಲ್ಲಿಲ್ಲದ ದ್ವಿವಚನಗಳನ್ನು ಹೇಳುವುದು ಅಸಮಂಜಸ. ಕನ್ನಡದಲ್ಲಿ ದ್ವಿವಚನಕ್ಕೆ ಪ್ರತ್ಯೇಕ ಪ್ರತ್ಯಯಗಳಿರುವುದಿಲ್ಲ. ಏಕೆಂದರೆ ಕನ್ನಡದಲ್ಲಿರುವುದು ಎರಡೇ ವಚನ. ಒಂದು ಏಕವಚನ, ಮತ್ತೊಂದು ಬಹುವಚನ, ಆದರೆ ಕೇಶಿರಾಜ ಮತ್ತು ಭಟ್ಟಾಕಳಂಕ ನಾಗವರ್ಮನ ವಿಚಾರವನ್ನು ಯೋಚಿಸದೇ ಒಪ್ಪಿಕೊಂಡಿದ್ದಾರೆ. ವಚನ ವಿಚಾರದಲ್ಲಿ ಕವಿರಾಜಮಾರ್ಗಕಾರನದು ಸರಿಯಾದ ನಿಲುವು. 'ವಚನಮೇಕ ಬಹುಕ್ರಮದಿಂದರಱ್ತೆರಂ' ಎಂದು ಅವನು ಸ್ಪಷ್ಟೀಕರಿಸಿದ್ದರೂ ನಾಗವರ್ಮಾದಿ ವೈಯಾಕರಣರು ಗಮನಿಸದಿರುವುದನ್ನು ಸಂಶೋಧಕರು ಗಮನಿಸಿದ್ದಾರೆ.

ಭಾಷಾಭೂಷಣ ಮತ್ತು ಶಬ್ದಸ್ಮೃತಿಗಳಲ್ಲಿ ಲಿಂಗವಿಚಾರದ ಪ್ರಸ್ತಾಪವಿಲ್ಲ. ನಾಗವರ್ಮನಿಗೆ ಲಿಂಗದ ಪರಿಕಲ್ಪನೆಯಿದೆ. 'ಕೂಸು' ಮಾನವ ವರ್ಗದಲ್ಲಿ ಬರುವ ಕನ್ನಡ ಶಬ್ದವಾದರೂ ನಿರ್ಬುದ್ಧಿಕವಾದುದರಿಂದ ಅದು ನಪುಂಸಕಲಿಂಗವೆಂದು ಹೇಳಿದ್ದಾನೆ. ಹೀಗಿದ್ದರೂ ಆತ ಲಿಂಗ ವಿವಕ್ಷೆಯನ್ನು ಎತ್ತಿಕೊಳ್ಳದಿರುವುದಕ್ಕೆ ಸಂಶೋಧಕರು ಕಾರಣಗಳನ್ನು ಹುಡುಕಬಹುದಿತ್ತು. ನಾಗವರ್ಮ ತನ್ನ ಗ್ರಂಥಗಳಲ್ಲಿ ಪುಲ್ಲಿಂಗ, ಸ್ತ್ರೀಲಿಂಗ,

ನಪುಂಸಕಲಿಂಗವೆಂಬ ಶಬ್ದಗಳನ್ನು ಪ್ರಯೋಗಿಸಿದ್ದಾನೆ. ಅವುಗಳಿಗೆ ವ್ಯಾಖ್ಯೆ ರೂಪಿಸುವ ಒಲವು ತೋರದಿರುವುದು ಸೋಜಿಗ. ಇದು ಚಿಂತನೀಯವೂ ಹೌದು. ಕೇಶಿರಾಜ ಗುರುತಿಸುವ ಒಂಭತ್ತು ತೆರದ ಲಿಂಗಗಳು ಚರ್ಚೆಗೆ ಗ್ರಾಸವೊದಗಿಸಿದ್ದು ಎಲ್ಲರಿಗೂ ತಿಳಿದ ವಿಷಯ. ಈ ಕಾರಣದಿಂದ ನಾಗವರ್ಮನ ಮೌನಕ್ಕೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ. ಡಾ. ಸಂಗಮೇಶ ಬಿರಾದಾರ ಇದಕ್ಕೆ ಪ್ರಯತ್ನಿಸಿದ್ದರೆ ಪ್ರಬಂಧದ ಮೌಲ್ಯ ವರ್ಧಿಸಬಹುದಿತ್ತು.

ಸಾಹಿತ್ಯಾಭ್ಯಾಸಿಗಳಿಗೆ ವ್ಯಾಕರಣ ಬಿಸಿತುಪ್ಪ, ನುಂಗಲೂಬಾರದು ಉಗಳಲೂಬಾರದು. ಸ್ನಾತಕ ಹಂತದಲ್ಲಿ ಅದೆಷ್ಟೊ ವಿದ್ಯಾರ್ಥಿಗಳು ವ್ಯಾಕರಣಕ್ಕೆ ಮುನಿಸುಕೊಂಡು ಐಚ್ಛಿಕ ಕನ್ನಡಕ್ಕೆ ಬರುವುದಿಲ್ಲ. ವ್ಯಾಕರಣ ಭಾಷೆಯ ಸಂಖ್ಯಾ ಶಾಸ್ತ್ರವಿದ್ದಂತೆ. ಇದು ಬುದ್ಧಿಗಮ್ಯವಾದುದು. ಇದರಿಂದಲೇ ಇಂದು ವ್ಯಾಕರಣ ಬೋಧಿಸುವವರ ಸಂಖ್ಯೆ ಇಳಿಕೆಗೊಳ್ಳುತ್ತಿದೆ. ಹಲವರ ಮುನಿಸು, ತಿರಸ್ಕಾರಕ್ಕೊಳಗಾದ ವ್ಯಾಕರಣಗಳನ್ನು ಪಿ.ಎಚ್.ಡಿ. ಅಧ್ಯಯನಕ್ಕೆ ಸ್ವೀಕರಸಿದುದೇ ಡಾ. ಸಂಗಮೇಶ ಬಿರಾದಾರರ ವ್ಯಕ್ತಿತ್ವದ ಕಮಾಲು. ಅವರು ಕನ್ನಡ ವ್ಯಾಕರಣದ ತಳ ಕಂಡಿದ್ದಾರೆ. ಕಳಚಿಕೊಳ್ಳುತ್ತಿರುವ ಕನ್ನಡ ವ್ಯಾಕರಣ ಪರಂಪರೆಯ ಒಂದು ಗಟ್ಟಿಕೊಂಡಿ ಡಾ. ಸಂಗಮೇಶ ಬಿರಾದಾರ. ವ್ಯಾಕರಣ ಪರಿಶೀಲನೆ ವ್ಯಾಕರಣ ರಚನೆಯಷ್ಟೇ ಶ್ರಮದಾಯಕ. ಅವರ ಒಂದೊಂದು ಮಾತು ತೀರ್ಪಿನಂತಿರುವುದು. ಉದಾಹರಣೆಗಾಗಿ ವಿಭಕ್ತಿ ಪಲ್ಲಟದ ಸಮೀಕ್ಷೆಯನ್ನು ಎತ್ತಿಕೊಳ್ಳಬಹುದು. 'ವಿಭಕ್ತಿಗಳು ಪಲ್ಲಟಗೊಳ್ಳುತ್ತವೆ. ಅಂದರೆ, ಒಂದು ವಿಭಕ್ತಿ ಬರಬೇಕಾದ ಸ್ಥಳದಲ್ಲಿ ಇನ್ನೊಂದು ವಿಭಕ್ತಿಯು ಬರುತ್ತದೆ. ಹೀಗೆ ಉಂಟಾಗುವ ಬದಲಾವಣೆಯಿಂದ ಅರ್ಥದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲವಾದ್ದರಿಂದ ವೈಯಾಕರಣರು ಈ ವಿಭಕ್ತಿ ಪಲ್ಲಟವನ್ನು ಒಪ್ಪಿಕೊಂಡರು. ವಿಭಕ್ತಿ ಪಲ್ಲಟದಿಂದ ಅರ್ಥದಲ್ಲಿ ಯಾವ ವೈಪರೀತ್ಯವಿಲ್ಲದಿರುವುದರಿಂದ ಕಾರಕದಲ್ಲಿಯೂ ಇಲ್ಲವೆಂದೇ ಹೇಳಬೇಕು. ಒಂದು ವಿಭಕ್ತಿಯು ಒಂದೇ ಕಾರಕವನ್ನು ಪ್ರತಿನಿಧಿಸಿದರೆ ಒಂದು ಕಾರಕವು ಅನೇಕ ವಿಭಕ್ತಿಗಳನ್ನು ಪ್ರತಿನಿಧಿಸುತ್ತದೆ'.

ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಶಬ್ದರೀತಿ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ-ವಿಪಾತ ನಿರೂಪಣ ವಿಧಾನಗಳಲ್ಲಿ ನಾಗವರ್ಮನ ಹೊಸ ಪ್ರತಿಪಾದನೆ, ಶರ್ವವರ್ಮನ ಅನುಸರಣೆ, ಕವಿರಾಜಮಾರ್ಗಕಾರನ ಪ್ರೇರಣೆ – ಎಲ್ಲದರ ಸೂಕ್ಷ್ಮಾತಿಸೂಕ್ಷ್ಮ ಪರಿಶೀಲನೆ 'ಸಮಾಲೋಚನೆ'ಯಲ್ಲಿದೆ. ನಾಗವರ್ಮನ ಸೋಲು-ಗೆಲುವುಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ. ಸಂಸ್ಕೃತ ಸಮಾಸಗಳಿಗಿಂತ ಭಿನ್ನವಾದ 'ಕ್ರಿಯಾಸಮಾಸ'ದ ವೈಶಿಷ್ಟ್ಯ, ಅವ್ಯಯೀಭಾವದ ಕನ್ನಡ ಸ್ವರೂಪ ನಾಗವರ್ಮನ ವ್ಯಾಕರಣದ ಸೂಕ್ಷ್ಮದರ್ಶಕದ ಮಹತ್ತ್ವದ ದರ್ಶನ. ಕನ್ನಡದ ವೈಶಿಷ್ಟ್ಯಗಳೆಲ್ಲವನ್ನೂ ಆತ ಕಂಡಿದ್ದ. ಆದ್ದರಿಂದ ಕನ್ನಡ ವ್ಯಾಕರಣ ಪರಂಪರೆಯ ನಿರ್ಮಾಪಕವೆನಿಸಿಕೊಳ್ಳುವುದು ಅವನಿಗೆ ಸಾಧ್ಯವಾಯಿತು.

'ನಾಗವರ್ಮನ ಪ್ರಭಾವ ಮುಂದಿನ ವೈಯಾಕರಣರ ಮೇಲೆ ಎಷ್ಟರ ಮಟ್ಟಿಗೆ ಬಿದ್ದಿದೆಯೆಂದರೆ ಅವನು ನಡೆದಲ್ಲಿಯೇ ನಡೆದಿದ್ದಾರೆ, ಕುಳಿತಲ್ಲಿಯೇ ಕುಳಿತಿದ್ದಾರೆ, ಒಮ್ಮೊಮ್ಮೆ ವ್ಯಾಕರಣದಲ್ಲಿ ಅನುಕರಿಸುವುದು ಏನಿದೆ? ಅವೇ ಪ್ರತ್ಯಯಗಳು, ಅವೇ ಆಗಮಗಳು, ಅವನ್ನೇ ಎಲ್ಲರೂ ಹೇಳುವುದು ಎನಿಸುವುದುಂಟು. ಆದರೆ ಅವನ್ನೇ ಹೇಳುವ (ಗ್ರಹಿಸುವ) ರೀತಿಯಲ್ಲಿ ವ್ಯತ್ಯಾಸವಾದರೆ ಅದು ಅನುಕರಣೆಯೆನಿಸಲಾರದು. ಮುಂದಿನ ವೈಯಾಕರಣರಲ್ಲಿ ಎಷ್ಟೋ ಕಡೆಗೆ ಹಾಗಾಗದಿರುವುದು ಕಂಡು ಬರುತ್ತದೆ'. (ಪುಟ ೨೧೪). ಇದು ವೈಯಾಕರಣ ನಾಗವರ್ಮನ ದರ್ಶನ.

'ಸಮಾಲೋಚನೆ'ಯ ಪೂರ್ವಾರ್ಧದಲ್ಲಿ ನಾಗವರ್ಮ ಕನ್ನಡ ವ್ಯಾಕರಣ ಸಮೀಕ್ಷೆಯಿದ್ದರೆ ಉತ್ತರಾರ್ಧದಲ್ಲಿ 'ಲೀಲಾತಿಲಕ'ದಲ್ಲಿಯ ನಾಗವರ್ಮನ ಬಿಂಬಗಳನ್ನು ಹೆಕ್ಕುವ ಪ್ರಯತ್ನವಿದೆ. 'ಲೀಲಾತಿಲಕಂ' ಕೇರಳ ಭಾಷೆಯ ಲಾಕ್ಷಣಿಕ ಕೃತಿ. ಕರ್ತೃವಿನ ಹೆಸರು ತಿಳಿಯದು. ಕಾಲ ೧೪ನೆಯ ಶತಮಾನ. ಲೀಲಾತಿಲಕಕಾರ ಅಲಂಕಾರ-ವ್ಯಾಕರಣಶಾಸ್ತ್ರ ಅದ್ವಿತೀಯ ಪಂಡಿತ. ಸಂಸ್ಕೃತ, ಪ್ರಾಕೃತ, ತಮಿಳು, ಕನ್ನಡ, ತೆಲುಗು, ಕೇರಳ, ಕೊಡಗು ಭಾಷೆಯಗಳ ಮೇಲೆ ಅವನಿಗೆ ಪ್ರಭುತ್ವವಿತ್ತು. ಅವನ 'ಲೀಲಾತಿಲಕಂ' 'ವಿಷಯದ ದೃಷ್ಟಿಯಿಂದ ನನ್ನೂಲ್, ತೋಳ್‌ಕಾಪ್ಪಿಯವನ್ನು ಆಧರಿಸಿದ್ದರೆ ಸೂತ್ರವೃತ್ತಿಗಳನ್ನು ನಿರ್ಮಿಸಿದ್ದು ಭಾಷಾಭೂಷಣವನ್ನು (ಆಧರಿಸಿ) ಕಣ್ಣೆದುರಿಗಿಟ್ಟುಕೊಂಡು. ಗ್ರಂಥದ ಒಟ್ಟಂದದ ವಿಭಾಗ ಕ್ರಮ, ಉದಾಹರಣೆಗಳು ಕಾವ್ಯಾವಲೋಕನದ ಪಡಿಯಚ್ಚು'. ಅವನು ಅಧಿಕಾಕ್ಷರ ನಿರೂಪಣೆಗೆ ಒಂದು ಉಪವಿಭಾಗ ಸೃಷ್ಟಿಸಿದ್ದಾನೆ. ನಾಗವರ್ಮ ಕನ್ನಡದ ಕೇಶಿರಾಜ, ಭಟ್ಟಾಕಳಂಕರಿಗೆ ಮಾತ್ರವಲ್ಲ ಅನ್ಯ ಭಾಷಿಕನಾದ ಕೇರಳದ ಲೀಲಾತಿಲಕಕಾರನಿಗೂ ಪ್ರಭಾವದ ಸೆಲೆಯಾದುದು ಆತನ ಹಿರಿಮೆಯ ದ್ಯೋತಕ. ಹೀಗೆ ಈ ಮಹಾಪ್ರಬಂಧ ವೈಯಾಕರಣ ನಾಗವರ್ಮನ ಪ್ರಭಾವದ ಕನ್ನಡೇತರ ನೆಲೆಗಳನ್ನು ಹುಡುಕವಲ್ಲಿಯೂ ವಿಸ್ತರಿಸಿಕೊಂಡಿರುವುದು ಉಲ್ಲೇಖನೀಯ.

'ವೈಯಾಕರಣ ಎರಡನೆಯ ನಾಗವರ್ಮ' ಕನ್ನಡದ ಪ್ರೌಢ ಪ್ರಬಂಧಗಳಲ್ಲೊಂದು ಎಂಬುದರಲ್ಲಿ ಎರಡು ಮಾತಿಲ್ಲ. ಇದು ಕನ್ನಡ ಸಾಂಪ್ರದಾಯಿಕ ವ್ಯಾಕರಣ ಪರಂಪರೆಯ ಚರಿತ್ರೆಯನ್ನೇ ತೆರೆದಿಡುತ್ತದೆ. ಕಾತಂತ್ರದ ನೆಲೆಗಟ್ಟಿನ ಮೇಲೆ ನಾಗವರ್ಮ ಕನ್ನಡ ವ್ಯಾಕರಣ ಸೌಧ ನಿರ್ಮಿಸಲು ಯೋಜಿಸಿದರೂ ದೇಶಿ ರಚನಾ ವಿಧಾನ ಅಳವಡಿಸಿಕೊಳ್ಳುವುದು ಅವನಿಗೆ ಹೇಗೆ ಅನಿವಾರ್ಯವಾಯಿತೆಂದು ಡಾ. ಸಂಗಮೇಶ ಬಿರಾದಾರ ಕುತೂಹಲದಿಂದ ದರ್ಶಿಸಿದ್ದಾರೆ. ಇದಕ್ಕಾಗಿ ಅವರು ಕನ್ನಡದೊಂದಿಗೆ ಸಂಸ್ಕೃತ, ಮಲಿಯಾಳಂ ಭಾಷೆಗಳನ್ನು ಅವಲೋಕಿಸಿದ್ದಾರೆ. ಅಧ್ಯಯನ ವಿಧಾನ, ಪ್ರವೇಶ, ಪರಿವಿಡಿಗಳು ಅಧ್ಯಯನದ ಸೋಪಾನಗಳು. ಈ ಮಹಾಪ್ರಬಂಧದ ಯಶಸ್ಸಿಗೆ ಅಧ್ಯಯನ ವಿಧಾನವೇ ಏಣಿ. ವಿಷಯ ನಿರೂಪಣಾ ವಿಧಾನ, ಅವಸರವಿಲ್ಲದ ಸಮಾಧಾನದ ಸ್ಪಷ್ಟ ಪ್ರತಿಪಾದನೆ,

ಪೂರ್ವಗ್ರಹಪೀಡಿತವಲ್ಲದ ದೃಷ್ಟಿ, ಸರಳ ವಿವರಣೆ – ಇದರ ಧನಾತ್ಮಕ ಅಂಶಗಳು. ವೈಯಾಕರಣ ನಾಗವರ್ಮನ ಸಾಂಸ್ಕೃತಿಕ ವ್ಯಕ್ತಿತ್ವದ ಬೆಲೆಗಟ್ಟುವಲ್ಲಿ ಹಾಗೂ ಕನ್ನಡ ವ್ಯಾಕರಣ ಪರಂಪರೆಯಲ್ಲಿ ಅವನ ವ್ಯಾಕರಣ ಗ್ರಂಥಗಳ ಸ್ಥಾನ ನಿರ್ದೇಶಿಸುವಲ್ಲಿ ಇದು ಸಫಲಗೊಂಡಿದೆ. ಮಹಾಪ್ರಬಂಧದ ಮೂರನೇ ಭಾಗ ಮೊದಲೆರಡು ಭಾಗಗಳಿಗಿಂತ ಹೆಚ್ಚು ಮೌಲಿಕವೆನಿಸುತ್ತದೆ. ಮೊದಲ ಭಾಗ ಮಾತ್ರ ಚರ್ವಿತ ಚರ್ವಣದಂತಿದೆ. ಪ್ರಬಂಧದುದ್ದಕ್ಕೂ ವಿಶ್ಲೇಷಣೆಗಿಂತ ವಿವರಣೆ ಅಧಿಕವಾಗಿದೆ. ಮುದ್ರಣ ದೋಷಗಳು ಬೇಸರವನ್ನುಂಟು ಮಾಡುತ್ತವೆ. ಡಾ. ಆರ್. ಸಿ. ಹಿರೇಮಠರು ಮುನ್ನುಡಿಯಲ್ಲಿ ಹೇಳಿದಂತೆ 'ವ್ಯಾಕರಣ ಗ್ರಂಥಗಳಲ್ಲಿ ಅಚ್ಚಿನ ದೋಷಗಳುಳಿದರೆ ಮೂಲ ನಿರ್ಣಯಕ್ಕೆ ಅಭಾಸವುಂಟಾಗುತ್ತದೆ'. ಮರುಮುದ್ರಣದಲ್ಲಿ ಇಂಥ ದೋಷಗಳಿರಲಾರದೆಂಬುದು ಆಶಯ. ಜೊತೆಗೆ ಇಂಥ ಗ್ರಂಥಗಳು ಪರಿಷ್ಕೃತ ಆವೃತ್ತಿಗಳನ್ನು ಕಾಣಬೇಕು. ಕನ್ನಡ ವಿದ್ಯಾರ್ಥಿಗಳಲ್ಲಿ ವ್ಯಾಕರಣ ಅಧ್ಯಯನ ಆಸಕ್ತಿ ಕ್ಷೀಣಿಸುತ್ತಿರುವ ಇಂದಿನ ಸಂದರ್ಭದಲ್ಲಿ ಇಂಥ ಮಹಾಪ್ರಬಂಧಗಳು ಮತ್ತೆ ಮತ್ತೆ ಪ್ರಕಟಗೊಳ್ಳಬೇಕು.

೪.೨ ಸಂಶೋಧನಾ ಕೃತಿಗಳು :

ಒರೆಗಲ್ಲು :

ಒರೆಗಲ್ಲು ಡಾ. ಸಂಗಮೇಶ ಬಿರಾದಾರ ಅವರು ಬರೆದ ಒಂಭತ್ತು ಸಂಶೋಧನಾತ್ಮಕ ಲೇಖನಗಳನ್ನೊಳಗೊಂಡ ಅರ್ಥಪೂರ್ಣ ಶಿರೋನಾಮೆಯ 'ಪುಟ್ಟ' ಕೃತಿ. ಇದು ಆಕಾರದಲ್ಲಿ ಚಿಕ್ಕದ್ದಾಗಿದ್ದರೂ ಸಂಶೋಧನೆ ಕ್ಷೇತ್ರಕ್ಕೆ ನೀಡಿದ ಅತ್ಯಂತ ಮಹತ್ವದ 'ದೊಡ್ಡ' ಕೃತಿಯಾಗಿದೆ. ಲೇಖಕರು ಈ ಪೂರ್ವದ ಕೆಲವು ಸಂಗತಿಗಳನ್ನು ಸುಮ್ಮನೆ ಒಪ್ಪಿಕೊಳ್ಳದೆ ಅವುಗಳನ್ನು ಸಂಶೋಧನೆಯ ಒರೆಗಲ್ಲಿಗೆ ಉಜ್ಜಿ ತಮ್ಮದೇ ಆದ ಖಚಿತ ಅಭಿಪ್ರಾಯಗಳನ್ನು ನೀಡುವುದರಿಂದ ಈ ಪುಸ್ತಕಕ್ಕೆ 'ಒರೆಗಲ್ಲು' ಎಂದು ಹೆಸರಿಸಿದ್ದು ಸಾರ್ಥಕವಾಗಿದೆ. ಇಲ್ಲಿಯ ಲೇಖನಗಳಿಗೆ 'ಒರೆ'ಗಳೆಂದು ಕರೆಯಲಾಗಿದೆ. 'ಒರೆ' ಎಂದರೆ ಉಜ್ಜಿದ ಪರಾಮರ್ಶಿಸಿದ ಎಂಬ ಅರ್ಥಗಳಿವೆ. ಒಂದು (ಭಾಷೆಗೆ ಸಂಬಂಧಿಸಿದ) ಲೇಖನವನ್ನು ಹೊರತುಪಡಿಸಿ ಉಳಿದವುಗಳೆಲ್ಲ ಸಂಶೋಧನೆಯ ಒರೆಗಲ್ಲಿಗೆ ಉಜ್ಜಿದ ಲೇಖನಗಳೇ ಆಗಿವೆಯಲ್ಲದೆ ಅವು ಸಂಶೋಧನ ಸತ್ಯದಿಂದ ಪ್ರಕಾಶಿಸುತ್ತವೆ.

ಕವಿರಾಜ ಮಾರ್ಗದಲ್ಲಿ ಕೃತಿಕಾರ ಬಳಸಿದ 'ಪಟಿಗನ್ನಡ' ಕುರಿತು ವಿದ್ವಾಂಸರಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಡಾ. ಸಂಗಮೇಶ ಬಿರಾದಾರ ಅವರೂ ಚರ್ಚಿಸಿ ಪಟಿಗನ್ನಡವೆಂಬುದು ಭಾಷೆಯ ಒಂದು ಅವಸ್ಥೆ ಹೊರತು, ಅದು ಭಾಷಾ ಶೈಲಿಯಲ್ಲವೆಂದು ತಿಳಿಸುತ್ತಾರೆ. ಶೈಲಿಯೆಂಬುದು ಒಂದು ಕೃತಿಯ ಸ್ವರೂಪವನ್ನು ಅವಲಂಬಿಸಿದರೆ 'ಅವಸ್ಥೆ'ಯೆಂಬುದು ಆ ಕಾಲದ ಭಾಷೆಯ ಪ್ರಯೋಗವನ್ನು ಅವಲಂಬಿಸುತ್ತದೆ. ಕವಿರಾಜ ಮಾರ್ಗಕಾರನ ಕಾಲದಲ್ಲಿ ಜನಬಳಕೆಯ ಸ್ವರೂಪವು ಆ ಪಟಿಗನ್ನಡದಲ್ಲಿದೆ. ಒಂದು ಕಾಲದಲ್ಲಿ ಹರೆಯದ ನೀರೆಯ ಒಡನಾಟದಂತೆ ಆಕರ್ಷಣೀಯವಾದ ಪದಗಳು ತಮ್ಮ

ರೂಪವನ್ನು ಕಳೆದುಕೊಂಡು ಜವ್ವನವಳಿದ ಸ್ತ್ರೀಯಂತಾಗಿವೆ. ಅಂತೆಯೆ ಅವು ತ್ಯಾಜ್ಯ. ಅವುಗಳನ್ನು ಪ್ರಯೋಗಿಸಲಾಗಿಲ್ಲ. ಇಲ್ಲಿ ಮಾರ್ಗಕಾರನ ಹಿರಿಮೆಯನ್ನು ಲೇಖಕರು ಗುರ್ತಿಸಿ ಭಾಷೆಯ ಸಾಧ್ಯತೆಗಳನ್ನು ನಿರೂಪಿಸುತ್ತಾರೆ. ಭಾಷೆ ಯಾವ ಕಟ್ಟಳೆಗಳಿಗೂ ಒಳಗಾಗುವುದಿಲ್ಲ. ಅದು ನಿರಂತರ ಚಲನಶೀಲವೆಂಬುದನ್ನು ಕವಿರಾಜಮಾರ್ಗಕಾರ ಹೇಳಿದ 'ಪಟಿಗನ್ನಡವನ್ನು ಪೊಲಗೆಡಿಸಿ' ಎಂದು ಹೇಳುವಲ್ಲಿ ಅದರ ಸಿದ್ಧಿಯನ್ನು ತೋರ್ಪಡಿಸಿದ್ದಾರೆ. ಹೊಸಗನ್ನಡ, ನಡುಗನ್ನಡ, ಹಳಗನ್ನಡಗಳೆಂದು ಇರುವ ಮೂರು ಅವಸ್ಥೆಗಳಲ್ಲಿ ಮಾರ್ಗಕಾರನು ಸೂಚಿಸಿರುವ ಪಟಿಗನ್ನಡವನ್ನು ಪೂರ್ವದ ಹಳಗನ್ನಡ ಎಂದು ನಾಮನಿರ್ದೇಶನದಿಂದ ಈಗಾಗಲೆ ಪಂಡಿತರು ಕರೆದಿದ್ದನ್ನು ನಾಲ್ಕನೆಯದನ್ನಾಗಿ ಸೇರಿಸಲು ಯಾವ ಅಭ್ಯಂತರವೂ ಇಲ್ಲ ಎಂದು ಪಟಿಗನ್ನಡದ ಕುರಿತು ತಮ್ಮ ನಿಲುವನ್ನು ಅವರು ಸ್ಪಷ್ಟಪಡಿಸುತ್ತಾರೆ.

'ಸಮಸಂಸ್ಕೃತ' ಲೇಖನದಲ್ಲಿ ಕವಿರಾಜ ಮಾರ್ಗಕಾರನೂ ಕೂಡ ಸಮಸಂಸ್ಕೃತ ಬಗ್ಗೆ ಸ್ಪಷ್ಟ ನಿಲುವನ್ನು ಹೊಂದಿಲ್ಲವೆಂದು ಹೇಳುತ್ತ ಅವನ ಆಶಯವನ್ನು ತುಂಬ ತರ್ಕಬದ್ಧವಾಗಿ ನಿರೂಪಿಸುತ್ತಾರೆ. ಕನ್ನಡ ಭಾಷೆಗೆ ತನ್ನದೇ ಆದ ಭಾಷಾ ಸೊಗಡಿದ್ದು ಅದು ಅನ್ಯಭಾಷೆಯ (ಸಂಸ್ಕೃತದ) ಪದಗಳನ್ನು ಕನ್ನಡಕ್ಕೆ ತೆಗೆದುಕೊಳ್ಳಬೇಕಾದಲ್ಲಿ ತನ್ನ ಭಾಷೆಯ ಜಾಯಮಾನಕ್ಕನುಸರಿಸಿ ಅವುಗಳನ್ನು ಸಮಸ್ತಪದಗಳನ್ನಾಗಿ ಮಾಡಿಕೊಂಡು ಸ್ವೀಕರಿಸುತ್ತದೆ. ಕನ್ನಡ ಭಾಷೆಯಲ್ಲಿ ಸಂಸ್ಕೃತ ಪದಗಳ ಬಳಕೆ ಹೇರಳವಾಗಿದೆ. ಕನ್ನಡ ಪದಗಳು ಸಂಸ್ಕೃತ ಪದಗಳೊಂದಿಗೆ ಕೂಡಿ ಸಮಾಸವಾಗುವದು ದೋಷವೆಂದು ಇದರಿಂದ ಕನ್ನಡ ಭಾಷಾ ಸೌಂದರ್ಯಕ್ಕೆ ಧಕ್ಕೆಯುಂಟಾಗುವದೆಂದು ಆಗಮಕೋವಿದರು ತಿಳಿಸುತ್ತಾರೆ.

'ಸಮಸಂಸ್ಕೃತವಾಗಿ ಪರಿವರ್ತನಗೊಂಡಿರುವ ಈ ಸಂಸ್ಕೃತ ಪದಗಳೊಂದಿಗೆ (ಅಚ್ಚ ಸಂಸ್ಕೃತಾವ್ಯಯಗಳೊಂದಿಗೆ) ಕನ್ನಡವನ್ನು ಬೆರಸಲ್ಕಮಾಗದು' ಎಂದು ಎಂ. ವ್ಹಿ. ಸೀತಾರಾಮಯ್ಯನವರು ತಳೆದ ಅಭಿಪ್ರಾಯವನ್ನು ನಯವಾಗಿ ಅದು ಸಮಂಜಸವಲ್ಲವೆಂದು ಡಾ. ಬಿರಾದಾರ ಹೇಳುತ್ತ – 'ಸಕ್ಕದ ಎನ್ನುವ ಪದಕ್ಕೆ ಅವ್ಯಯಗಳು ಮಾತ್ರವೆಂದು ಅರ್ಥೈಸದೆ ಕನ್ನಡವನ್ನು ಸಂಸ್ಕೃತದೊಂದಿಗೆ ಸಮಾಸ ಮಾಡಬಾರದು ಎಂದು ಸಾಮಾನ್ಯವಾಗಿ ಹೇಳಬೇಕು. ಇಲ್ಲದೆ ಹೋದರೆ ಕೇವಲ ಅವ್ಯಯಗಳೆನ್ನುವುದರ ಉಳಿದ ಶಬ್ದಗಳಲ್ಲಿ ಈ ಕಾರ್ಯ ನಡೆಯುತ್ತದೆ ಎಂದು ತರ್ಕಿಸಲು ಅವಕಾಶವಾಗುತ್ತದೆ' ಎಂದು ಹೇಳುತ್ತಾರೆ. ಸಮಸಂಸ್ಕೃತದ ಬಗ್ಗೆ ಸ್ಪಷ್ಟವಾದ ಹಾಗೂ ಖಚಿತವಾದ ಅಭಿಪ್ರಾಯವನ್ನು ಮಂಡಿಸುತ್ತಾರೆ.

೧) ಸಮಸಂಸ್ಕೃತ ಶಬ್ದಗಳನ್ನು ಕನ್ನಡ ಶಬ್ದಗಳೊಂದಿಗೆ ಹೊಂದಿಕೆಯಾಗುವಂತೆ ಪ್ರಾಯೋಗಿಸಬಹುದಲ್ಲದೆ ಸಮಸ್ತಪದಗಳನ್ನಾಗಿ ಅಲ್ಲ.

೨)	ಅವ್ಯಯಗಳನ್ನು, ಸಂಸ್ಕೃತ ಶಬ್ದಗಳನ್ನು, ಸಂಸ್ಕೃತ ಕ್ರಮವರಿತು ಸಮಾಸಗಳನ್ನಾಗಿಸಾದ ಕನ್ನಡದಲ್ಲಿ ಬಳಕೆಗೆ ಅರ್ಹತೆಯನ್ನು ಪಡೆಯುತ್ತವೆ.

೩)	ಸಂಸ್ಕೃತ – ಕನ್ನಡ ಶಬ್ದಗಳಲ್ಲಿ ಸಮಾಸ ನಿಷಿದ್ಧ.

ಈ ಸಂಗತಿಗಳು ಕವಿರಾಜ ಮಾರ್ಗಕಾರನ ಆಶಯಗಳೆಂಬುದನ್ನು ಇವರು ಸೊಗಸಾಗಿ ನಿರೂಪಿಸುತ್ತಾರೆ.

'ಉದಯಾದಿತ್ಯಲಂಕಾರ' ಕರ್ತೃ ಮತ್ತು ಅವನ ಕಾಲ ಕುರಿತು ಗ್ರಂಥದ ಆಂತರಿಕ ಅಂಶಗಳ ಆಧಾರದಿಂದ ತುಂಬ ಸ್ಪಷ್ಟವಾದ ಮತ್ತು ಖಚಿತವಾದ ಅಭಿಪ್ರಾಯವನ್ನು ಇಲ್ಲಿ ಲೇಖಕರು ವ್ಯಕ್ತಪಡಿಸಿದ್ದಾರೆ. ಕನ್ನಡ ಹಿರಿಯ ವಿದ್ವಾಂಸರಾದ ಎಂ. ವ್ಹಿ. ಸೀತಾರಾಮಯ್ಯನವರು ಉದಾಯಾದಿತ್ಯನು ಗ್ರಂಥದ ಕರ್ತೃವಲ್ಲ, ಒಂದನೆಯ ನಾಗವರ್ಮನು ಉದಯಾದಿತ್ಯಾಲಂಕಾರದ ಕರ್ತೃವೆಂದು ಪ್ರತಿಪಾದಿಸಿದ್ದಾರೆ. ಎಂ. ವ್ಹಿ. ಸೀತಾರಾಮಯ್ಯನವರು ಕೃತಿಯ ಒಳಹೊಕ್ಕು ಆಂತರಿಕ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸದೆ ಕವಿ ಬಳಸುವ ಪ್ರಥಮ ಪುರುಷ, ಉತ್ತಮ ಪುರುಷಗಳಲ್ಲಿ ಸ್ವವಿಷಯ ಪ್ರಸ್ತಾಪವಾಗುವುದಂಟುದಲ್ಲದೆ ಸಂಬೋಧನೆ ಹಾಗೂ ವಿಧ್ಯರ್ಥಗಳನ್ನುಳ್ಳ ಮಧ್ಯಮ ಪುರುಷ ಪ್ರಯೋಗವು ಸ್ವವಿಷಯ ನಿರೂಪಣೆಯಲ್ಲಿ ಸಂಭಾವ್ಯವೆನಿಸದು ಎಂದು ಹೇಳುತ್ತಾರೆ.

ಡಾ. ಸಂಗಮೇಶ ಬಿರಾದಾರ ಅವರು ಎಂ. ವ್ಹಿ. ಸೀತಾರಾಮಯ್ಯನವರ ಅಭಿಪ್ರಾಯ ಸತ್ಯಕ್ಕೆ ದೂರವಾದುದು ಎಂದು ಹೇಳುತ್ತಾರೆ. 'ಇಡೀ ಗ್ರಂಥವನ್ನು ನೋಡಿದರೆ ಎಲ್ಲೆಡೆಗೂ ಎಂ. ವ್ಹಿ. ಸೀತಾರಾಮಯ್ಯನವರು ಹೇಳುವ ಸಂಬೋಧನೆಗಳೇ ಇಲ್ಲದಿರುವುದು ಕಂಡು ಬರುತ್ತದೆ. ಒಂದು ವೇಳೆ ಉದಯಾದಿತ್ಯನ ಆಸ್ಥಾನದಲ್ಲಿದ್ದ ಪಂಡಿತನೊಬ್ಬನ ಈ ಗ್ರಂಥವನ್ನು ಬರೆದಿದ್ದುದ್ದಾಗಿದ್ದರೆ ಎಲ್ಲೆಡೆಗೂ ಈ ರೀತಿಯನ್ನು ಅನುಸಿರುಸುತ್ತಿದ್ದನು. ಎಲ್ಲ ಅಲಂಕಾರಿಗಳಿಗೂ ತನ್ನ ರಾಜನನ್ನು ಕುರಿತೇ ಉದಾಹರಣೆಗಳನ್ನು ಕೊಡುತ್ತಿದ್ದನು. ಹಾಗೆ ಇಲ್ಲಿ ಕಂಡುಬರುವುದಿಲ್ಲ. ಅಲ್ಲದೆ ತನ್ನನ್ನು ತಾನು ಸಂಬೋಧಿಸಿಕೊಂಡಾಗಾಗಲಿ ವಿಧ್ಯರ್ಥಿಸಿಕೊಂಡಾಗಾಗಲಿ ಯಾವ ದೋಷವೂ ಇಲ್ಲ. ಬದಲು ಪ್ರಥಮ ಉತ್ತಮ ಪುರುಷಗಳಿಗಿಂತ ಮಧ್ಯಮ ಪುರಷಕ್ಕೆ ಬಲವೂ ಬರುತ್ತದೆ'. ಉದಯಾದಿತ್ಯನು ೪೬ನೆಯ ಪದ್ಯದಲ್ಲಿ ಕಾವ್ಯ ಕನ್ನೆಗೆ ಪ್ರಿಯನನ್ನು ಪಡೆದ ವಿಷಯವನ್ನು ಹೇಳುತ್ತಾನೆ. ಆ ಪ್ರಿಯನು ರಾಜವಂಶೀಯನೆ ಆಗಿದ್ದಾನೆ. ಅಂದ ಮೇಲೆ ಇನ್ನೊಬ್ಬನು ಈ ಗ್ರಂಥದ ಕರ್ತೃವಾಗುವುದು ಸಾಧ್ಯವಿಲ್ಲದ ಮಾತೇ ಸರಿ ಎಂದು ಹಲವು ಆಂತರಿಕ ಕಾರಣಗಳಿಂದ ಉದಯಾದಿತ್ಯಾಲಂಕಾರ ಕೃತಿಯನ್ನು ಉದಯಾದಿತ್ಯನೇ ಬರೆದಿದ್ದಾನೆಂದು ತೀರ್ಮಾನಿಸುತ್ತಾರೆ. ಇವನು ಸಓಮದೇವರಾಜನ ಮಗನು. ಸೂರ್ಯಕುಲದಲ್ಲಿ ಹುಟ್ಟಿದ ಕ್ಷತ್ರಿಯ ವೀರನು. ಈ ಕೃತಿ ರಚನೆಯ ಕಾಲ ಕ್ರಿ.ಶ. ೧೨೦೦. ಒಂದನೆಯ ನಾಗವರ್ಮನ

ಕಾಲ ಕ್ರಿ.ಶ. ೯೯೦ ಆಗಿರುವುದರಿಂದ ಉದಯಾದಿತ್ಯನಿಗೂ ಒಂದನೆಯ ನಾಗವರ್ಮನಿಗೂ ಕಾಲದ ಅಂತರ ಬಹಳವಿರುವುದರಿಂದ ಉದಯಾದಿತ್ಯಾಲಂಕಾರದ ಕರ್ತೃ ಒಂದನೆಯ ನಾಗವರ್ಮ ಅಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತಾರೆ[೧].

ಡಾ. ಸಂಗಮೇಶ ಬಿರಾದಾರ ಅವರು 'ವೈಯಾಕರಣ ಎರಡನೆಯ ನಾಗವರ್ಮ' ಎಂಬ ವಿಷಯ ಕುರಿತು ಪಿ.ಎಚ್.ಡಿ. ಮಾಡಿದ್ದಾರೆ. ಈ ಪೂರ್ವದಲ್ಲಿ ಕೇಶಿರಾಜನ ಶಬ್ದಮಣಿ ದರ್ಪಣವೇ ಪ್ರಮಾಣ ಗ್ರಂಥವೆಂಬ ಗ್ರಹಿಕೆಯಿತ್ತು. ನಾಗವರ್ಮನ ವ್ಯಾಕರಣ ಗ್ರಂಥಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಕೇಶಿರಾಜ ನಾಗವರ್ಮನಿಂದಲೆ ಬಹಳಷ್ಟು ಸಂಗತಿಗಳನ್ನು ಎತ್ತಿಕೊಂಡಿದ್ದಾನೆಂಬುದನ್ನು ಡಾ. ಸಂಗಮೇಶ ಬಿರಾದಾರ ಅವರು ತುಂಬ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ.

ನಾಗವರ್ಮನ ಕಾಲದ ಬಗ್ಗೆ ಈ ಹಿಂದೆ ವಿದ್ವಾಂಸರು ತಳೆದ ಅಭಿಪ್ರಾಯ ಸಮಂಜಸಲ್ಲವೆಂದು ವರ್ಧಮಾನ ಪುರಾಣದ ಪದ್ಯವೊಂದನ್ನು ಬಿ. ಎಸ್. ಸಣ್ಣಯ್ಯನವರನ್ನು ಮೊದಲು ಮಾಡಿ ಎಲ್ಲ ವಿದ್ವಾಂಸರು ಬೇರೆ ಅರ್ಥ ಕಲ್ಪಿಸಿರುವುದನ್ನು ಉಲ್ಲೇಖಿಸಿ ತಮ್ಮದೇ ಆದ ಖಚಿತ ಮತ್ತು ಸ್ಪಷ್ಟ ನಿಲುವನ್ನು (ನಾಗವರ್ಮನ ಕಾಲದ ಕುರಿತು) ತಳೆದಿದ್ದಾರೆ.

ಡಾ. ಎಂ. ಎಂ. ಕಲಬುರ್ಗಿಯವರು 'ನಾಗವರ್ಮನು ಜನ್ನನ ಗುರುವಲ್ಲ' ಎಂಬ ಲೇಖನದಲ್ಲಿ ನಾಗವರ್ಮನ ಕಾಲದ ಕುರಿತಾದ ಪದ್ಯಚರಣಗಳಲ್ಲಿ ಇಲ್ಲದ ಸಾದೃಶ್ಯ ಅಕ್ಷರಗಳನ್ನು ಕಲ್ಪಿಸಿಕೊಂಡು ಹೊಸಪಾಠಾಂತರಗಳಿಂದ ಶಕವರ್ಷ ೯೦೪ ಎಂದು ನಿರ್ಣಯಿಸುತ್ತಾರೆ.

ವಸುವರ್ಗಾಂತಮಿದ [] ತೀತಳಕ ಭೂ ಭೃದ್ವತ್ಸರಂ ಚಿತ್ರಭಾ –
ನು ಸಮಾಖ್ಯಾಬ್ದಕಮಶ್ವಯುಗ್ಬಹುಳ ಷಷ್ಠೀವಾಸರಂ ತಾ ಪುನ –
ರ್ವಸು ಪಕ್ಷಂ ಸುರಮಂತ್ರಿವಾರಮಭಿಜಿಲ್ಲಗ್ನೋದಯಂ ಕೂಡೆ ವ –
ರ್ತಿಸೆ ಪೇಳ್ದಂ ಕವಿತಾಗುಣೋದಯನಿದಂ ಚೆಲ್ವಾಗೆ ತಾತ್ಪರ್ಯದಿಂ ।

ಈ ಮೂಲ ಪಾಠದಲ್ಲಿ ಬಿಟ್ಟುಹೋದ ಅಕ್ಷರಗಳಲ್ಲಿ '೦ಕ' ಸೇರಿತ ತ–ಕ, ಳ–ಶ ಮಾಡಿಕೊಂಡು ವಸುವರ್ಗಾಂಕ ಎಂದರೆ ಅಂಕಾನಾಂ ವಾಮತೋಗತಿಃ ಎಂಬ ಸೂತ್ರಕ್ಕೆ ಅನುಸರಿಸಿ ಅಂಕ=೯, ವರ್ಗ=೬೪, ವಸು=೯ ಅಂದರೆ ೯೬೮ ಎಂದೂ ವಸು=೮ ಇದರ ವರ್ಗ=೬೪ ಮತ್ತು ಅಂಕ=೯ ಶಕ ೯೬೪ ಎಂದು ಎರಡು ರೀತಿಯಿಂದ ಜೋಡಿಸಿ ಕ್ರಿ.ಶ. ೧೦೪೨, ೧೦೪೬ಕ್ಕೆ ಹೊಂದಿಕೆಯಾಗುವಂತೆ ಮಾಡಿದ್ದಾರೆ. ಆದರೆ

ಈ ಪ್ರಯತ್ನ ವ್ಯರ್ಥವಾದುದು. ಯಾಕೆಂದರೆ ವಸುವರ್ಗಾಂಕಕ್ಕೆ (೯೬೪) ಅರ್ಥ ಹೇಳಿ ಮುಂದಿನ 'ಇದಂತತೀತ ಶಕಭೂಭೃದ್ವತ್ಸರಂ' ಎಂಬುದನ್ನು ಅರ್ಥೈಸುವುದೇ ಇಲ್ಲ. ಪ್ರಸ್ತುತ ಪದ್ಯದಲ್ಲಿ ಬರುವ 'ಸುರಮಂತ್ರಿವಾರ' ಎಂಬುದನ್ನು ಗುರುವಾರವೆಂದು ಅರ್ಥಮಾಡಿಕೊಳ್ಳುತ್ತಾರೆ. ವೈದಿಕ ಸಾಹಿತ್ಯದಲ್ಲಿ ಸೋಮನೆ ಸರಮಂತ್ರಿಯಾಗಲು ಸಾಧ್ಯವೆಂಬುದಕ್ಕೆ ಸಾಕಷ್ಟು ಆಧಾರ ದೊರೆಯುತ್ತವೆ. ಆದ್ದರಿಂದ ಸುರಮಂತ್ರಿಯೆಂಬುದನ್ನು 'ಸೋಮ' ಎಂದು ಅರ್ಥಮಾಡುವುದೇ ವಿಹಿತವೆಂದು ಹೇಳುತ್ತ ಯಾವ ಬದಲಾವಣೆಯನ್ನು ಮಾಡದೆ ಬಿಟ್ಟು ಹೋದ ಸ್ಥಾನದಲ್ಲಿ ಒಂದು ಅಕ್ಷರವನ್ನು [ಕ್ಷಿ] ಸೇರಿಸಿ, 'ದ' ಕಾರವನ್ನು 'ದಾ' ಎಂದಿಟ್ಟುಕೊಂಡು ನಾಗವರ್ಮನ ಕಾಲವನ್ನು ಇವರು (ಡಾ. ಸಂಗಮೇಶ ಬಿರಾದಾರ) ನಿರ್ಣಯಿಸುತ್ತಾರೆ.

ವಸುವರ್ಗಾಂತಮಿದ [] ತೀತಳದ ಭೂ ಭೃದ್ವತ್ಸರಂ ಚಿತ್ರಭಾ – ಅಂದರೆ ಪಾತಾಳಕ್ಕೆ ರಾಜನಾದವನು ನಾಗ=೧೦, ವಸುವರ್ಗ=೮೪, ಅಂದರೆ ೧೦೮೪. ಇದು ಕ್ರಿ.ಶ. ೧೧೬೨ಕ್ಕೆ ಸರಿಹೊಂದುತ್ತದೆ. ನಾಗವರ್ಮನ ಕಾಲ ೧೧೬೨ ಎಂಬುದನ್ನು ಮೂಲಪಠ್ಯದಿಂದಲೇ ಸಿದ್ಧಪಡಿಸಿ ತಮ್ಮ ಸಂಶೋಧನಾ ಪ್ರತಿಭೆಯನ್ನು ಡಾ. ಸಂಗಮೇಶ ಬಿರಾದಾರ ಅವರು ಮೆರೆದಿದ್ದಾರೆ.

'ಕರ್ನಾಟಕ ಭಾಷಾಭೂಷಣದ ಕರ್ತೃ' ಈ ಲೇಖನದಲ್ಲಿ ಪಿ. ರಾಮಕೃಷ್ಣಭಟ್ಟರು ತಳೆದ ಕಾವ್ಯಾವಲೋಕನ, ಅಭಿಧಾನ ವಸ್ತುಕೋಶ, ವರ್ಧಮಾನ ಪುರಾಣ ಬರೆದ ನಾಗವರ್ಮನೊಬ್ಬ ಬೇರೆಯೇ ಇದ್ದಾನೆಂಬ ಅಭಿಪ್ರಾಯವನ್ನು ಲೇಖಕರು ಅಲ್ಲಗಳೆದು ಕರ್ನಾಟಕ ಭಾಷಾಭೂಷಣ ಬರೆದವನು ಎರಡನೆಯ ನಾಗವರ್ಮನೇ ಹೊರತು ಬೇರೆಯಲ್ಲವೆಂಬ ಸಂಗತಿಯನ್ನು ಸ್ಪಷ್ಟಪಡಿಸುತ್ತಾರೆ. ವರ್ಣ, ಸಂಧಿ, ಲಿಂಗ, ಕಾರಕ, ಪ>ಹ ಮುಂತಾದ ವ್ಯಾಕರಣದ ಸಂಗತಿಗಳ ಹಾಗೂ ಬಾಹ್ಯಕಾರಣಗಳ ಹಿನ್ನೆಲೆಯಲ್ಲಿ ಚರ್ಚಿಸಿ ಶಬ್ದಸ್ಮೃತಿಯು ಕಾವ್ಯಾವಲೋಕನದ ಒಂದು ಭಾಗವೆಂದೂ ಇದರ ಕರ್ತೃ ಎರಡನೆಯ ನಾಗವರ್ಮನೆಂದೂ ಸಬಲ ಕಾರಣಗಳಿಂದ ಲೇಖಕರು ಸಿದ್ಧಮಾಡಿ ತೋರಿಸುತ್ತಾರೆ. ಪಿ. ಕೃಷ್ಣಭಟ್ಟರು ಸ್ಮೃತಿ ಮತ್ತು ಭೂಷಣಗಳನ್ನು ಬರೆದ ನಾಗವರ್ಮನು ಒಬ್ಬನಾಗಿರದೆ ಇಬ್ಬರೆಂಬ ಮಾತು ಸತ್ಯಕ್ಕೆ ದೂರವಾದುದೆಂದೆನಿಸುತ್ತದೆ ಎಂದು ಹೇಳುವ ಬಿರಾದಾರರು ಕ್ರಿ.ಶ. ೧೧೬೨ರಲ್ಲಿ ಜಗದೇಕ ಮಲ್ಲ ಹೊಯ್ಸಳ ಒಂದನೆಯ ನರಸಿಂಹನಲ್ಲಿ ಕಟಕೋಪಾಧ್ಯಾನಾಗಿದ್ದು ಹೊಯ್ಸಳ ದೊರೆ ವೀರಬಲ್ಲಾಳನಿಂದ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದ ಮಹಾಕವಿ ಜನ್ನನಿಗೆ ಗುರುವಾಗಿದ್ದನೆಂಬುದನ್ನು ಸಾಕ್ಷ್ಯಾಧಾರಗಳ ಮೂಲಕ ಸಿದ್ಧಮಾಡಿ ತೋರಿಸುತ್ತಾರೆ.

ಡಾ. ಎಂ. ಎಂ. ಕಲಬುರ್ಗಿಯವರು 'ನಾಗವರ್ಮ ಜನ್ನನ ಗುರುವಲ್ಲ' ಎಂಬ

ಲೇಖನಕ್ಕೆ ಡಾ. ಸಂಗಮೇಶ ಬಿರಾದಾರ ಅವರ ಪ್ರಸ್ತುತ ಲೇಖನವು ಸಮರ್ಥ ಉತ್ತರವೂ ಆಗಿದೆ ಎಂದು ಹೇಳಬೇಕಾಗುತ್ತದೆ.

ಕನ್ನಡ ವಿಶ್ವಕೋಶದಂಥಹ ಅಧಿಕೃತ ಪ್ರಮಾಣಭೂತ ಗ್ರಂಥಗಳು ಸತ್ಯವನ್ನು ಕಡೆಗನಿಸಿದ ಸಂದರ್ಭವನ್ನು ಡಾ. ಸಂಗಮೇಶ ಬಿರಾದಾರ ಅವರು 'ಕನ್ನಡ ವಿಶ್ವಕೋಶದ ವಿಶ್ವಾಸಾರ್ಹತೆ' ಎಂಬ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ನಾಗವರ್ಮನ ಕಾಲ, ಕರ್ನಾಟಕ ಭಾಷಾಭೂಷಣದ ಕರ್ತೃ, ನಾಗವರ್ಮನ ಜನ್ನನ ಗುರುವಲ್ಲ ಎಂಬ ಲೇಖನಕ್ಕೆ ಬಂದ ಪ್ರತಿಕ್ರಿಯೆ ಮುಂತಾದ ಲೇಖನಗಳಲ್ಲಿ ಡಾ. ಸಂಗಮೇಶ ಬಿರಾದಾರ ಅವರು ಖಚಿತ ಮತ್ತು ಸ್ಪಷ್ಟ ಅಭಿಪ್ರಾಯ ಮಂಡಿಸಿದ್ದಾರೆ. ಇಂಥ ಸಂಶೋಧನಾತ್ಮಕ ಮಹತ್ವದ ಲೇಖನಗಳನ್ನು ಕಡೆಗಣಿಸಿ ವಿಶ್ವವಿದ್ಯಾಲಯಗಳಲ್ಲಿರುವ ವಿದ್ವಾಂಸರ ಅಭಿಪ್ರಾಯಗಳನ್ನು ಮಾತ್ರ ಗಮನಿಸುತ್ತಿರುವ ವಿಶ್ವಕೋಶಕಾರರನ್ನು ಪ್ರಶ್ನಿಸುವ ಮೂಲಕ ತುಂಬ ಎದೆಗಾರಿಕೆಯನ್ನು ಲೇಖಕರು ಹೊಂದಿದ್ದಾರೆ. ಯಾಕೆಂದರೆ 'ಸತ್ಯ' ಸೂರ್ಯ ಪ್ರಕಾಶದಂತೆ ಹೊಳೆಯುತ್ತದೆ.

ಇಲ್ಲಿ ಸಂಕಲನಗೊಂಡ ಎಲ್ಲ ಲೇಖನಗಳು 'ಸಂಶೋಧನ ಒರೆಗಲ್ಲಿಗೆ' ಉಜ್ಜಿ ಝಳಪಿಸುವಂತಹವು. ಸ್ಪಷ್ಟ ನಿರೂಪಣೆ, ಖಚಿತ ಅಭಿಪ್ರಾಯ, ಸಮರ್ಪಕ ಆಧಾರಗಳಿಂದಾಗಿ ಕೃತಿಯು ಬಹು ಮೌಲ್ಯವನ್ನು ಹೊಂದಿದೆ. ಹೆಸರಾಂತ ವಿದ್ವಾಂಸರ ಹೆಸರಲ್ಲಿ ಈ ಕೃತಿ ಪ್ರಕಟಗೊಂಡಿದ್ದರೆ ಇಷ್ಟೊತ್ತಿಗೆ ಅನೇಕ ಮುದ್ರಣಗಳನ್ನು ಕಂಡುಕೊಳ್ಳುತ್ತಿತ್ತು. ಡಾ. ಸಂಗಮೇಶ ಬಿರಾದಾರ ಅವರು ಎಲೆಮರೆಯ ಹೂವಿನಂತಿನಂತಿದ್ದವರು. ಯಾವ ಪ್ರಚಾರದ ಗೀಳಿಗೆ ಅಂಟಿಕೊಳ್ಳುವವರಲ್ಲದ ಕಾರಣ ಅವರ ಬಹಳಷ್ಟು ಬರಹಗಳು ಅವರಲ್ಲಿಯೇ ಉಳಿದುಕೊಂಡಿವೆ. ಆದರೆ 'ಸತ್ಯ' ಕಾಲವನ್ನು ಮೀರಿಯೂ ಪ್ರತಿಮಾನವಾಗುವುದರಿಂದ ಅವರ ಬರವಣಿಗೆಗೆ ಒಂದು ನೆಲೆಯಿದೆ, ಬೆಲೆಯಿದೆ.

ಜಗದ್ಗುರು ಶ್ರೀ ಕಾಡಿಸಿದ್ಧೇಶ್ವರ ಮಹಾಸಂಸ್ಥಾನ ಮಠ, ಸಿದ್ಧಗಿರಿ :

ಸನಾತನ ಸಂಸ್ಕೃತಿಯ ಸಂತತಿಯಾದ ಮಠ ಮಂದಿರಗಳು ಭಕ್ತರ ಶ್ರದ್ಧಾ ಕೇಂದ್ರ ಶಕ್ತಿಕೇಂದ್ರಗಳೆಂದು ಪ್ರಸಿದ್ಧ ಅವುಗಳ ಇತಿಹಾಸ ಪುರಾತನವಾದುದು. ಅದನ್ನು ಜನರಿಗೆ ತಲುಪಿಸಲು ಡಾ. ಸಂಗಮೇಶ ಬಿರಾದಾರವರು ೧೨೦೦ ವರ್ಷಗಳಿಗಿಂತಲೂ ಸುದೀರ್ಘವಾದ ಇತಿಹಾಸವಿರುವ ಸಿದ್ಧಗಿರಿ ಗುರುಕುಲ ಫೌಂಡೇಶನ ಸಿದ್ಧಗಿರಿ ಪ್ರಕಾಶನದಲ್ಲಿ ೧೪-೦೧-೨೦೧೫ ರಲ್ಲಿ ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಮಹಾ ಸಂಸ್ಥಾನಮಠ, ಸಿದ್ಧಗಿರಿ ಎಂಬ ಪುಸ್ತಕವನ್ನು ಲೋಕಾರ್ಪಣೆ ಮಾಡಲಾಯಿತು.

ಕನ್ನಡ ಸಾಹಿತ್ಯದ ಲೋಕದ ಅನೇಕ ಕವಿಗಳಂತೆ, ಕಾಡಸಿದ್ಧರ ಕಾಲದ ವಿಷಯ ಸಂದಿಗ್ಧವಾಗಿದೆ. ಸ್ವವಿಷಯವಾಗಿ ಅವರು ಗುರುಪರಂಪರೆಯನ್ನು ಬಿಟ್ಟು ಮತ್ತೇನನ್ನು

ಹೇಳಿಕೊಂಡಿರುವುದಿಲ್ಲ. ಇವರನ್ನು ಕುರಿತು ಮುಂದಿನ ವಚನಕಾರರಾಗಲಿ ಕವಿಗಳಾಗಲಿ ಯಾರೂ ಪ್ರಸ್ತಾಪಿಸಿಲ್ಲ. ಆದರೆ ಇವರು ಇಂಥದೆ ಕಾಲದಲ್ಲಿ ಇದ್ದರೆಂದು ಹೇಳುವುದು ಕಷ್ಟಕ್ಕೆ ಕೆಲಸವಾದರೂ ಬಾಹ್ಯ ಆಂತರಿಕ ಕಾಲವನ್ನು ಹುಡುಕಿ ಡಾ. ಸಂಗಮೇಶ ಬಿರಾದಾರವರು ಕಾಲನಿರ್ಣಯ ಮಾಡಿದ್ದಾರೆ.

ಪ್ರಾರಂಭಿಕ ಅಧ್ಯಾಯದಲ್ಲಿ ಭರತಖಂಡದಲ್ಲಿ ಹಲವು ದೇಶಗಳು (ಛಪ್ಪನ್ನೈವತ್ತಾರು) ಹಲವು ಸಂಸ್ಕೃತಿಗಳು ಹಲವು ಭಾಷೆಗಳು ಹಲವು ದೇವರುಗಳು ಇಂತಹ ಅನೇಕತೆಯಲ್ಲಿಯ ಭಾರತೀಯ ತತ್ವವನ್ನುವುದು ಒಂದು. ಈ ಸೂತ್ರವೇ ಭರತಖಂಡವನ್ನು ಅಖಂಡವಾಗಿರಿಸಿದೆ.

೧೨೦೦ ವರ್ಷಗಳಿಗಿಂತಲೂ ಸುದೀರ್ಘವಾದ ಇತಿಹಾಸವಿರುವ ೫೦ ಪೂಜ್ಯರು ಪೀಠಾಧಿಪತಿಗಳು ಆಗಿ ಹೋಗಿರುವ ಸಿದ್ಧಗಿರಿ ಮಠದ ಕೆಳಗೆ ೪ ಚರಂತಿಮಠಗಳು, ೩೦೦ಕ್ಕೂ ಹೆಚ್ಚು ದೇವಾಲಯಗಳು ಇವೆ. ಚಕ್ರವರ್ತಿಗಳು, ಮಹಾರಾಜರು, ರಾಜರು, ಮಾಂಡಲಿಕರು, ಪರಗಣಿದಾರರು, ದೇಸಾಯರು ಈ ಮಠದ ಭಕ್ತರು ಆಶ್ರಯದಾತರು. ಇದಕ್ಕೆ ಸಾವಿರಾರು ಎಕರೆ ಭೂಮಿ, ಲಕ್ಷಗಟ್ಟಲೆ ಜನ ಭಕ್ತರು. ಇಷ್ಟಿದ್ದರೂ ಈ ಮಠದ ಇತಿಹಾಸ ಅಸ್ಪಷ್ಟ ಅಲಿಖಿತವಾಗಿಯೇ ಉಳಿದಿತ್ತು. ಡಾ. ಸಂಗಮೇಶ ಬಿರಾದಾರವರು 'ಕಾಡಸಿದ್ಧೇಶ್ವರರ ಸಮಗ್ರ ವಚನಗಳು' ಗ್ರಂಥವನ್ನು ರೂಪಿಸುವಾಗ ಶ್ರೀ ಕಾಡಸಿದ್ಧೇಶ್ವರರ ವಿಚಾರ ಸುಳಿಯಿತು. ಮಠದ ಚರಿತ್ರೆ ಬರೆಯಬೇಕೆಂಬ ವಿಚಾರ ಹೊಳೆಯಿತು. ಪೂಜ್ಯ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ಧೇಶ್ವರರ ಮುಂದೆ ಈ ವಿಚಾರವನ್ನ ಅರುಹಿದರು. ಆಗ ಅವರು ಇದು ಎಂದೋ ಆಗಬೇಕಾಗಿದ್ದ ಕಾರ್ಯ ಈಗಲಾದರೂ ಈ ಕಡೆಗೆ ಗಮನ ಹರಿಸುವುದು ಶುಭ ಸೂಚನೆ ಎಂದಾಗ ಪ್ರಾರಂಭವಾದ ಕಾರ್ಯಕ್ಕೆ ಮೊದಲು ಹೆಜ್ಜೆ ಇಟ್ಟಿದ್ದು ಪೀಠಾಧಿಪತಿಗಳು ಸಂಚರಿಸಿದ್ದ ಕರ್ನಾಟಕ, ಮಹಾರಾಷ್ಟ್ರ ಮತ್ತು ಗೋವೆ ಪ್ರದೇಶಗಳಲ್ಲಿರುವ ಕಾಡಸಿದ್ಧೇಶ್ವರ ಗುಡಿ, ಮಠಗಳನ್ನು ಪತ್ತೆ ಹಚ್ಚಿ ಅದರ ಮೂಲ ಇತಿಹಾಸವನ್ನು ಪರಿಶೋಧಿಸಿ ಕೇಳಿ ಸಂಗ್ರಹಿಸಿದ್ದು.

ಎರಡನೆಯ ಅಧ್ಯಾಯದಲ್ಲಿ ಮಾಯಾ ಕೋಲಾಹಲ ಸನ್ನಿವೇಶವನ್ನು ವಿವರಿಸಿದ್ದಾರೆ. ಮಾಯಾದೇವಿಯ ರಂಕಾಳಾ ಕರೆ ಕಟ್ಟಿಸಿದಳೆಂದು ಪ್ರತೀತಿ. ಕೋಲಾಪುರದಲ್ಲಿ ಮಾಯಾದೇವಿಯ ಪ್ರಭಾವ ಹೆಚ್ಚಾಗಿದ್ದಿತು. ತಾನೆ ಹೆಚ್ಚಿನವಳೆನ್ನುವ ಅಹಂಕಾರ ಅವಳಲ್ಲಿ ಮನೆ ಮಾಡಿಕೊಂಡಿತ್ತು. ಅನೇಕ ಸಿದ್ಧ ಸಾಧುಗಳನ್ನು ಸೋಲಿಸಿ ಮೌಢ್ಯತೆಯಿಂದ ಮೆರೆಯುವಂತೆ ಮಾಡಿತ್ತು. ಅವಳ ಈ ಅಹಂಕಾರವನ್ನು ಮುರಿಯಬೇಕಾಗಿತ್ತು. ಅದಕ್ಕಾಗಿಯೇ ಎಲ್ಲವನ್ನು ಬಲ್ಲ ಕಾಡಸಿದ್ಧರು ಅಲ್ಲಿಗೆ ಆಗಮಿಸಿದರು. ಅವಳ ಗರ್ವವನ್ನು ಹರಣ ಮಾಡಿದರು. ಆ ಘಟನೆ ವಿವರಣೆಯನ್ನು ಹೀಗೆ ಕೊಡುತ್ತಾರೆ.

ಮಾಯೆಯು ಬಂದ ಸಾಧು ಸಂತರಿಗೆ ಅವರ ಪರೀಕ್ಷಾರ್ಥವಾಗಿ ಕುಡಿಯಲು ವಿಷ ಕೊಡುತ್ತಿದ್ದಳು. ಒಂದು ವೇಳೆ ಅವರು ಆ ವಿಷ ಕುಡಿಯಲು ಹಿಂಜರಿದರೆ ನಿರಾಕರಿಸಿದರೆ ಬೇಡಿ ಹಾಕಿ ರಂಕಾಳಕೆರೆ ಅಗೆಯುವುದಕ್ಕೆ ಹಚ್ಚುತ್ತಿದ್ದಳು. ಕಾರಾಗೃಹದಲ್ಲಿರಿಸುತ್ತಿದ್ದಳು. ಜೀವನಪರ್ಯಂತ ಕಾರಾಗೃಹದಲ್ಲಿಟ್ಟು ಕಾರ್ಮಿಕರಂತೆ ದುಡಿಸಿಕೊಳ್ಳುತ್ತಿದ್ದಳು. ಹೀಗೆ ಅನೇಕ ಸಾಧು–ಸಂತರು ಇಲ್ಲಿಗೆ ಬಂದು ಈ ಮಾಯೆಯ ಕೈಯಲ್ಲಿ ಸಿಕ್ಕು ಬಂದಿಯಾಗಿದ್ದರು.

ಇದನ್ನು ಕೇಳಿದ ಕಾಡಸಿದ್ಧರು ಇಲ್ಲಿಗೆ ಆಗಮಿಸಿದರು. ಅವಳು ಅಗಿಸಿದ ಕೆರೆಯನ್ನು ನೋಡಿದರು ಜನೋಪಯೋಗಿಯಾದ ಈ ಕಾರ್ಯ ಮಾಡಿದ್ದಕ್ಕೆ ಮಾಯಾದೇವಿಯನ್ನು ಶ್ಲಾಘಿಸಿದರು. ಇದರಿಂದ ಅವಳ ದರ್ಪ ಹೆಚ್ಚಾಯಿತು. ತನ್ನ ವಾಡಿಕೆಯಂತೆ ಪರೀಕ್ಷೆಗೆ ಮುಂದಾದಳು. ಕುಡಿಯಲು ವಿಷದ ಬಟ್ಟಲನ್ನು ಮುಂದೆ ಚಾಚಿದಳು. ನೀವು ನಿಜವಾಗಿಯೂ ಯೋಗಿಗಳಿದ್ದರೆ ಕುಡಿಯಿರಿ. ಇಲ್ಲದಿದ್ದರೆ ಕಾರಾಗೃಹಕ್ಕೆ ನಡೆಯಿರಿ ಎಂದಳು. ಅದನ್ನು ನೋಡಿ ಸಿದ್ಧರು ನಕ್ಕರು. 'ನಿಮ್ಮ ಆತಿಥ್ಯ ಅಪೂರ್ವವಾದುದು. ಇದು ನಮಗೆ ಸಂತೋಷವನ್ನುಂಟು ಮಾಡಿದೆ' ಎನ್ನುತ್ತ ಬಟ್ಟಲಲ್ಲಿರುವ ವಿಷವನ್ನು ಹಾಲು ಕುಡಿದಂತೆ ಕುಡಿದು ಬಿಟ್ಟರು. ಹಾಲಾಹಲವನ್ನೇ ಕುಡಿದವರಿಗೆ ಬಟ್ಟಲು ವಿಷವೇನು ಮಾಡೀತು! 'ನೀನು ನೆಮ್ಮದಿಯಿಂದಿರು ನಿನ್ನ ಕಾರ್ಯ ನಿರಾಂತಕವಾಗಿ ಸಾಗಲಿ' ಎಂದು ಮುನ್ನಡೆದರು. ಸಿದ್ಧರ ಗರ್ಭ ಸೇರಿದ ವಿಷ ಅಮೃತವಾಗಿ ಪರಿಣಮಿಸಿದರೆ ಮಾಯೆಯ ಹೊಟ್ಟೆಯಲ್ಲಿ ಕೋಲಾಹಲವನ್ನೆಬ್ಬಿಸಿತು. ಒಂದೇ ಸವನೆ ಹೊಟ್ಟೆ ಉರಿಯತೊಡಗಿತು. ಕಣ್ಣು ಮಂಕಾದವು. ನೆಲ–ಮುಗಿಲು ಒಂದಾದವು. ತಾನು ಇದರಿಂದ ಉಳಿಯಲು ಸಾಧ್ಯವೇ ಇಲ್ಲವೆನ್ನುವಂತ ಆಕೆಗೆ ಭಾಸವಾಗತೊಡಗಿತು. ಏರಿದ ಮದ ಇಳಿಯಿತು. ಬುದ್ಧಿ ಸೀಮಿತಕ್ಕೆ ಬಂದಿತು. ಹೃದಯ ತಿಳಿಯಾಯಿತು. ಈ ಸಿದ್ಧ ಸಾಮಾನ್ಯನಲ್ಲ, ನಂಜುಂಡನ ಪ್ರತಿರೂಪವೇ ಇವನಾಗಿದ್ದಾನೆ. ತಾನು ಇವನೊಡನೆ ಸರಸವಾಡಿದ್ದು ಹುಲಿಯ ಮೀಸೆಯ ಹಿಡಿದು ಉಯ್ಯಾಲೆ ಯಾಡಿದಂತಾಯಿತೆಂದು ಪಶ್ಚಾತ್ತಾಪ ಪಟ್ಟು ಕಾಡಸಿದ್ಧರ ಪಾದಕ್ಕೆರಗಿದಳು. ತನ್ನನ್ನು ಕ್ಷಮಿಸಿ ಉದ್ಧರಿಸಬೇಕೆಂಬು ಕಳಕಳಿಯಿಂದ ಬೇಡಿಕೊಂಡಳು. ಕರುಣ ದೃಷ್ಟಿಯಿಂದ ನೋಡಿದರು. ಉರಿ ಕಡಿಮೆಯಾಯಿತು. ಶಾಂತಳಾದಳು. ಈ ನಿನ್ನ ತಾಮಸಿ ವೃತ್ತಿಯನ್ನೇ ಬಿಟ್ಟು ಸಾತ್ವಿಕಳಾಗು, ನಿನ್ನ ಮಾಯಾರೂಪ ವಿಶಿಷ್ಟವಾಗಿ ಮಹಾದೇವಿಯಾಗು ಅಂಬೆಯಾಗು, ಅಂಭಾಭವಾನಿಯಾಗು! ಎಂದು ಆಶೀರ್ವದಿಸಿದರು. ಸೇರೆಯಲ್ಲಿದ್ದ ಸಾಧು ಸತ್ಪುರುಷರನ್ನು ವಿಮುಕ್ತಗೊಳಿಸಿ ಅವರು ಸಮಾಜಕ್ಕಾಗಿ ತಮ್ಮನ್ನೇ ಸಮರ್ಪಿಸಿಕೊಂಡರು. ಅವರಿಂದ ಲೋಕದಲ್ಲಿ ಧಾರ್ಮಿಕ, ಸಾಮಾಜಿಕ ಉತ್ಥಾನವಾಗಲಿದೆ. ಆದ್ದರಿಂದ ಅವರೆಲ್ಲರನ್ನು ಇದೇ ಕ್ಷಣ ಬಂಧಮುಕ್ತಗೊಳಿಸು ಎಂದು ಆದೇಶಿಸಿದರು[೨].

ನೂರಾರು ಸಾಧುಗಳನ್ನು ಬಂಧ ಮುಕ್ತರನ್ನಾಗಿ ಮಾಡಿಕೊಂಡ ಸಿದ್ಧಗಿರಿಗೆ ನಡೆದರು. ಆ ಸಾಧು ಸತ್ಪುರುಷರೆಲ್ಲ ಕಾಡಸಿದ್ಧರ ಕರುಣೆಗೆ ಮಾರು ಹೋದರು. ಅವರ ಪಾದಗಳನ್ನು ಗಟ್ಟಿಯಾಗಿ ಹಿಡಿದು ಉದ್ಧರಿಸೆಂದು ಬೇಡಿಕೊಂಡರು.

ಕೆಲವು ಸಿದ್ಧರು ಅಲ್ಲಿಯೇ ಉಳಿದುಕೊಂಡರು ಇನ್ನುಳಿದವರು ಕಾಡಸಿದ್ಧರ ಹೆಸರು ಹೇಳಿಕೊಂಡು ಮಹಿಮೆ ಸಾರುತ್ತ ಸುತ್ತಲು ಚದುರಿದರು. ಅವರು ಹೋದಲ್ಲೆಲ್ಲ ಮಠಗಳನ್ನು ಕಟ್ಟಿದರು. ಗುಡಿಗಳನ್ನು ನಿರ್ಮಿಸಿದರು. ಹೀಗಾಗಿ ಕಾಡಸಿದ್ಧರ ಗುಡಿಗಳು ಮಠಗಳೂ ನಾಲ್ಕು ದಿಕ್ಕಿಗೆ ಕಂಗೊಳಿಸತೊಡಗಿದವು. ೩೬೦ಕ್ಕೂ ಹೆಚ್ಚು ಮಠ–ಮಂದಿರಗಳು ಕಾಣಸಿಗುತ್ತವೆ.

ಮೂರನೆಯ ಅಧ್ಯಾಯದಲ್ಲಿ ನಿರವಯ ಕಾಡಸಿದ್ಧೇಶ್ವರ ನಿರವಯ ಕಾಡಸಿದ್ಧರು – ಬಾದಾಮಿ ಚಾಲುಕ್ಯರ ಬ್ರಹ್ಮೇಶ್ವರ ಕಾಡಸಿದ್ಧರು, ಶಿವದೇವಗ ಕಾಡಸಿದ್ಧರು ಮತ್ತು ಅಲ್ಲಮ ಪ್ರಭುದೇವರು, ವಚನಕಾರ ಕಾಡಸಿದ್ಧರು ಮುಪ್ಪಿನ ಕಾಡದೇವರು, ಪವಾಡ ಕಾಡಸಿದ್ಧೇಶ್ವರರು (ಕೊಕಟನೂರ ದೇಸಾಯಿಯರು) ಪವಾಡ ಕಾಡಸಿದ್ಧೇಶ್ವರರು, (ನವಿಲ್ಗುಂದ ದೇಸಾಯರು) ಅದೃಶ್ಯ ಕಾಡಸಿದ್ಧರು, (ಕೊಣ್ಣೂರು ದೇಸಾಯರು) ಸಿದ್ಧಕಾಡದೇವರು, (ಗುಳೇದಗುಡ್ಡ) ಗುರುಸಿದ್ಧ ಕಾಡದೇವರು, (ಚನ್ನಂಬೆ) ಮುಪ್ಪಿನ ಕಾಡಸಿದ್ಧೇಶ್ವರರು (ನಿಂಬರಗಿ), ೪೮ನೆಯ ಪೀಠಾಧಿಪತಿಗಳಾದ ಶ್ರೀ ಮುಪ್ಪಿನ ಕಾಡಸಿದ್ಧೇಶ್ವರರು. ೪೯ನೆಯ ಪೀಠಾಧಿಪತಿಗಳಾದ ಶ್ರೀ ಅದೃಶ್ಯ ಕಾಡಸಿದ್ಧೇಶ್ವರರು ೫೦ನೆಯ ಪೀಠಾಧಿಪತಿಗಳಾದ ಶ್ರೀ ಮುಪ್ಪಿನ ಕಾಡಸಿದ್ಧೇಶ್ವರ ಸ್ವಾಮಿಗಳು ಸಿದ್ಧಿ, ಸಾಧನೆ ಮತ್ತು ಸಾಮಾಜಿಕ ಸುಧಾರಣೆಗಳ ಬಗ್ಗೆ ತೆಗೆದುಕೊಂಡ ಕ್ರಮ ಮತ್ತು ಅವರ ಸಾಮಾಜಿಕ ಸುಧಾರಣೆಯ ಕಳಕಳಿಯನ್ನು ತುಂಬ ಹೃದಯಂಗಮವಾಗುವ ಹಾಗೆ ವಿವರಿಸಿದ್ದಾರೆ.

ಡಾ. ಸಂಗಮೇಶ ಬಿರಾದಾರವರು ಮಾವನೂರ ಬಸ್ತವಾಡ ಗ್ರಾಮದಲ್ಲಿ ಸಿದ್ಧರು ಅಂದರೆ ಕಾಡಸಿದ್ಧರು ನುಡಿದ ಕೆಲವು ನುಡಿಗಳನ್ನು ಅಲ್ಲಿಯ ಸ್ಥಳಿಯ ಹಿರಿಯರಿಂದ ಕೇಳಿ ಪಡೆದಿದ್ದಾರೆ ಅವು – ದೇಹ ಬುದ್ಧಿ, ಮನಸ್ಸು ಇವುಗಳಿಗೆ ಸಾಮರ್ಥ್ಯ ಸಾಮರಸ್ಯ ತಂದು ಕೊಡುವುದು ಯೋಗ. ಇದು ಪ್ರಭಾವ ಯುತ. ಧರ್ಮ ಒಬ್ಬರಿಗೆ ಬೇಕಾಗಬಹುದು. ಇನ್ನೊಬ್ಬರಿಗೆ ಬೇಕಾಗದಿರಬಹುದು. ಆದರೆ ಯೋಗ ಎಲ್ಲ ಧರ್ಮಿಯರಿಗೂ ಬೇಕು. ಸಾಧನ, ಸಾಧ್ಯಗಳೆರಡೂ ಯೋಗಗಳು.

ಆಂತರಿಕವಾದ ಒಂದು ಬಯಕೆ ಇರುತ್ತದೆ. ಆ ಬಯಕೆಯಿಂದಲೆ ಕಣ್ಣು ನೋಡುತ್ತದೆ, ಕಿವಿ ಕೇಳುತ್ತದೆ, ಕೈ ಮುಟ್ಟುತ್ತದೆ, ಮೂಗು ಮೂಸುತ್ತದೆ. ಅಷ್ಟೇ ಏಕೆ ಒಂದು ಗಿಡದ ತುಂಡನ್ನು ಭೂಮಿಯಲ್ಲಿಟ್ಟರೆ ಅದು ಚಿಗಿಯುತ್ತದೆ ಬೆಳೆಯುತ್ತದೆ. ಹೀಗೆ ಬೆಳೆಯುವುದೇ ಜೀವನ. ಇದು ಯೋಗದ ಉದ್ದೇಶ.

ಚೆನ್ನಾಗಿ ಕುಳಿತುಕೊಳ್ಳುವುದು, ಸ್ವಚ್ಛಮಾಡುವುದು, ಒಕ್ಕಲಿಗ ಹೊಲ ಹದ ಮಾಡುವುದು, ಇವೆಲ್ಲ ಯೋಗಿಗಳೆ ಇಲ್ಲಿ ಕರ್ಮವಿರುವುದರಿಂದ ಇವು ಕರ್ಮಯೋಗ, ಒಳ್ಳೆಯ ಶಬ್ದ ಬಳಸುವುದು, ಉತ್ತಮವಾಗಿ ಮಾತನಾಡುವುದು, ವಚನಯೋಗ ವಾಗ್‌ಯೋಗ ಹೋಗುವ ತಯಾರಿಯಲ್ಲಿರುವುದು ಸನ್ಯಾಸಿಯೋಗ. ಹೀಗೆ ಇಡೀ ಜೀವನವೇ ಒಂದು ಯೋಗ ಭಾರತೀಯರು ಜಗತ್ತಿಗೆ ಕೊಟ್ಟ ಅತ್ಯಮೂಲ್ಯ ಕೊಡುಗೆ ಈ ಯೋಗ ಎಂದು ಉಪದೇಶಸಿದ್ದರು.

ಸಿದ್ಧಗಿರಿಯು ಮೂಲಸ್ಥಾನವಾಗಿದ್ದುದರಿಂದಲೂ ಅಲ್ಲಿರುವವರು ಕಾಡಸಿದ್ಧರಾಗಿರುವುದರಿಂದಲೂ ಸಿದ್ಧಗಿರಿಯ ಸುತ್ತಮುತ್ತಲಿರುವ ಪಶ್ಚಿಮ ಘಟ್ಟ ಪ್ರದೇಶವನ್ನು ಅಲ್ಲಿರುವ ವೈಶಿಷ್ಟ್ಯತೆಗಳನ್ನು ಮಹತ್ವದ ಸ್ಥಾನಗಳನ್ನು ಸ್ಥೂಲವಾಗಿ ಪರಿಚಯಿಸಿದ್ದಾರೆ. ಅರಣ್ಯ ಪ್ರದೇಶದಲ್ಲಿ ಸಿದ್ಧರು ತಮ್ಮ ಸಾಧನೆ ಮಾಡಿದ ಪ್ರಸಂಗಗಳನ್ನು ಎತ್ತಿ ತೋರಿಸಿದ್ದಾರೆ. ಎಂತಹ ಪರಿಸರ, ಎಂತಹ ಸ್ಥಾನ ಯೋಗ ಯೋಗ್ಯವೆಂಬುವುದನ್ನು ಅವರು ಸಾಧನೆ ಮಾಡಿದ ಸ್ಥಾನಗಳು ಸಾಧಕರಿಗೆ ತಿಳಿಸಿಕೊಡುವಂತಿವೆ.

ಬಹಳ ಮುತುವರ್ಜಿವಹಿಸಿ ಕ್ಷೇತ್ರ ಕಾರ್ಯವನ್ನು ಮಾಡಿ ಸಿದ್ಧಗಿರಿ ಪರಂಪರೆಯ ಬಗ್ಗೆ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ಒಳಗಣ್ಣು (ಸಂಶೋಧನಾ ಲೇಖನ) :

ಭಾವಾಭಿವ್ಯಕ್ತಿ ಜೀವಿಗಳೆಲ್ಲರಲ್ಲಿರುವ ಒಂದು ಸಹಜ ಪ್ರವೃತ್ತಿ ಮನುಷ್ಯನಲ್ಲಿ ಮಾತ್ರ ಈ ಅಭಿವ್ಯಕ್ತಿ ಕಲೆಯು ಅತ್ಯಂತ ವಿಕಸಿತವಾದುದಾಗಿದೆ. ಇವುಗಳಲ್ಲಿ ಭಾಷೆ ಅವಿರ್ಭವಿಸುವುದು ಧ್ವನಿ, ಶಬ್ದ ಮತ್ತು ಅರ್ಥಗಳಿಂದ ಅಂತೆಯೇ 'ಧರ್ಮಾರ್ಥಕಾಮ ಮೋಕ್ಷಾರ್ಥ ವಿದ್ಯಾಃ ಶಬ್ದ ನಿಬಂಧನಾ; ಅಂದರೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಕ್ಕಾಗಿರುವ ವಿದ್ಯೆಗಳು ನಿಬಂಧನೆಗೊಳಪಡುವುದು. ಈ ಶಬ್ದ ಅರ್ಥದಿಂದಲೇ ಈ ಶಬ್ದ ಅರ್ಥಗಳನ್ನು ನಿಯಮನಗೊಳಿಸುವ ಶಾಸ್ತ್ರವೇ ವ್ಯಾಕರಣ. ಕೇಶಿರಾಜ ಹೇಳುವಂತೆ –

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥವೆ ತತ್ತ್ವಾ ।
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿತ ಮುಕ್ತಿಯಕ್ಕುಮದೆ ಬುಧರ್ಗೆಫಲಂ ।

ಹೀಗೆ ವ್ಯಾಕರಣದ ಕುರಿತು ಕೇಶಿರಾಜ ಸ್ಪಷ್ಟಪಡಿಸಿದ್ದಾನೆ.

ವರ್ಣ (ಅಕ್ಷರ) ಶಬ್ದ–ಪದ ಮತ್ತು ವಾಕ್ಯ ಇವು ವ್ಯಾಕರಣದ ಅಂಗತ್ರಯ. ಪ್ರಸ್ತುತ 'ಒಳಗಣ್ಣು' ಕೃತಿಯಲ್ಲಿ ಡಾ. ಸಂಗಮೇಶ ಬಿರಾದಾರವರು 'ಅನುನಾಶಿಕ–

ಯಲವ–ಒಂದು ಪ್ರತಿಕ್ರಿಯೆ; ಜಸ್ತ್ವಸಂಧಿ, ಶ್ರೀ ಮನ್ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿ ವ್ಯಾಕರಣ. ಪಾರಿಭಾಷಿಕ ಶಬ್ದಗಳು ಹಾಗೂ ಕೇಶಿರಾಜನ ಮೇಲೆ ೨ನೆಯ ನಾಗವರ್ಮ ಪ್ರಭಾವ ಐದು ಸಂಶೋಧನಾ ಲೇಖನಗಳನ್ನು ಒಳಗೊಂಡ ಪುಟ್ಟ ಕೃತಿಯನ್ನು ೨೦೦೯ರಲ್ಲಿ 'ಗೆಳೆಯ ಬಳಗ ತುಂಗಳ' ಪ್ರಕಾಶನದಲ್ಲಿ ಪ್ರಕಟಿಸಿದ್ದಾರೆ.

ಪ್ರಾರಂಭದ ಅಧ್ಯಾಯದಲ್ಲಿ ಅನುನಾಸಿಕ ಯವಲ ಕುರಿತು ನಾಗವರ್ಮನು 'ಕರ್ನಾಟಕ ಭಾಷಾಭೂಷಣದಲ್ಲಿ' ವಿಭಾಷಯಾ ಯವಲಾಃ (೯) ಎಂದು ಸೂತ್ರಿಸಿ 'ಯವಲಾ ಇತ್ಯೇತೇ ವರ್ಣಾಃ ವಿಭಾಷಯಾ ವಿಕಲ್ಪೇನ ಅನುನಾಸಿಕ ಸಂಜ್ಞಾ ಭವಂತಿ' ಎಂದು ವೃತ್ತಿಯಲ್ಲಿ ವಿವರಿಸಿದ್ದನ್ನು ಮತ್ತು ಸಂಯುತ–ಸಯ್ಯುತ, ಯಂಲೋಕ–ಯಲ್ಲೋಕ, ಸೇಂವೆ – ಸೇವೆ, ಕಾಂವಂ – ಕಾವಂ ಮುಂತಾದ ಉದಾಹರಣೆಗಳನ್ನು ಕೊಟ್ಟ ನಿಯಮವನ್ನು ದೃಢೀಕರಿಸಿದ್ದಾರೆ. ಅದರಂತೆ –

ಅನುನಾಸಿಕಮಕ್ಕುಂ ಙಞ
ಣನಮಂಗಳೆ ಯವಲ ಮನನುಸಾಸಿಕಮುಂ ಮ
ತ್ತನುನಾಸಿಕಮುಮವಕ್ಕುಂ
ಜನೋಕ್ತಿಯಿಂದಱಿವುದವೆಱ ವಿಷಯಾಂತರಮಂ ।

ಎಂದು ಕಾವ್ಯವಲೋಕನದ ಶಬ್ದಸ್ಮೃತಿಯಲ್ಲಿ ನಿಯಮನಗೊಳಿಸಿದ್ದಾನೆ ಎಂದು ಹೇಳುತ್ತ ವಿಷಯವನ್ನು ಮತ್ತಷ್ಟು ಸರಳಗೊಳಿಸಿದ್ದಾರೆ.

ವಿಷ್ಣುಸುತರ 'ಕರ್ನಾಟಕ ಭಾರತಿ'ಯಲ್ಲಿ ಬರೆದ ಲೇಖನದಲ್ಲಿ 'ಅನುನಾಸಿಕ ಯವಲ' ಅಕ್ಷರಗಳ ಸುಳಿವು ಕೇಶಿರಾಜನಿಗೆ ತನ್ನ ಹಿಂದಿನ ವೈಯಾಕರಣಿಗಳಿಂದ ದೊರಕಿರಲಾರದು. ಸಂಸ್ಕೃತ ವೈಯಾಕರಣಿಗಳಿಂದಲೂ ದೊರಕಿದುದು ದುರ್ಲಭವೆಂದು ತೇಲು ರೂಪದ ಹೇಳಿಕೆ ನೀಡಿದ್ದರು. ಇದನ್ನು ಗುರುತಿಸಿ ಈ ಅನುನಾಸಿಕ ಅಕ್ಷರಗಳ ಸುಳಿವು ಎರಡನೆಯ ನಾಗವರ್ಮನ ಕರ್ನಾಟಕ ಭಾಷಾಭೂಷಣದಲ್ಲಿ ಇರುವುದನ್ನು ಸಾಕ್ಷಾಧಾರ ಪೂರ್ವಕವಾಗಿ ಡಾ. ಸಂಗಮೇಶ ಬಿರಾದಾರವರು ನಿರೂಪಿಸಿದ್ದಾರೆ[೩].

'ಜಸ್ತ್ವಸಂಧಿ' ಲೇಖನದಲ್ಲಿ 'ಜಗದಗಲ್' ಎಂಬುವುದು ಸ್ವರಲೋಪ ಸಂಧಿಯಾಗಿದೆ. ಜಸ್ತ್ವ ಸಂಧಿಯಾಗುತ್ತದೆ. ಪ್ರತಿಪಾದಿಸಿದ ಪಿ. ಕೆ. ಜಗದೀಶರ ಪ್ರತಿಪಾಧನೆಯನ್ನು ಅಲ್ಲಗೆಳೆದು ಅದಕ್ಕೆ ಜಸ್ತ್ವಸಂಧಿಯಾಗುವುದು ಎರಡೂ ಸಂಸ್ಕೃತ ಶಬ್ದಗಳಿದ್ದಾಗ ಮಾತ್ರ ಜಸ್ತ್ವಸಂಧಿಯೂ ಸಂಸ್ಕೃತ ಸಂಧಿ 'ಜಗದಗಲ' ಎಂಬ ಶಬ್ದವು ಜಗತ್ ಮತ್ತು ಅಗಲ್ ಎಂಬೆರಡು ಶಬ್ದಗಳಿಂದಾಗಿದ್ದು, ಇದರಲ್ಲಿ ಜಗತ್ ಸಂಸ್ಕೃತ ಶಬ್ದ 'ಅಗಲ್' ಕನ್ನಡ ಶಬ್ದ ಹೀಗೆ ಸಂಸ್ಕೃತ ಹಾಗೂ ಕನ್ನಡ ಶಬ್ದಗಳು ಕೂಡಿದರೆ ಸಂಸ್ಕೃತ ಸಂಧಿಯಾಗುವುದು. ಆದುದರಿಂದ 'ಜಗದಗಲ' ಶಬ್ದವು ಜಸ್ತ್ವ ಸಂಧಿಯಾಗುವುದೆಂದು ವಿವರಣೆ ನೀಡಿದುದು ತುಂಬ ಸಮರ್ಪಕವಾಗಿದೆ.

ನಿಜಗುಣ ಶಿವಯೋಗಿಗಳ ಕೈವಲ್ಯ ಪದ್ಧತಿಯಲ್ಲಿ ವ್ಯಾಕರಣ ಆಳವಾದ ಶಾಸ್ತ್ರಾಧ್ಯಯನಕ್ಕೆ ನಿದರ್ಶನವಾಗಿದೆ. ಕೈವಲ್ಯ ಪದ್ಧತಿಯಲ್ಲಿ ಕಾಣಿಸಿಕೊಂಡ – ಸ್ವರ, ವ್ಯಂಜನ (ವರ್ಗೀಯ, ಅವರ್ಗೀಯ) ಯೋಗವಾಹ, ಸಂಧಿ, ಸಂಸ್ಕೃತ ಸಂಧಿಗಳು, ನಾಮಪದ, ವಿಭಕ್ತಿ ಪ್ರತ್ಯಯ, ಸರ್ವನಾಮಗಳು, ಆತ್ಮರ್ಪಕ ಸರ್ವನಾಮಗಳು, ಪ್ರಶ್ನಾರ್ಥಕ ಸರ್ವನಾಮಗಳು, ವಚನಗಳು, ಕೃದಂತಗಳು, ಕೃದಂತನಾಮಗಳು, ಕೃದಂತ ವಿಶೇಷಣಗಳು, ತದ್ದಿತಾಂತಗಳು, ಸಮಾಸಗಳು, ಕ್ರಿಯಾಪದಗಳು, ಆಖ್ಯಾತ–ಪ್ರತ್ಯಯಗಳು, ಶಬ್ದಗಳು, ಶಿಥಿಲದ್ವಿತ್ವ ಶಬ್ದದೋಷಗಳು ಈ ಮುಂತಾದ ವ್ಯಾಕರಣ ವಿಶೇಷಗಳನ್ನು ಕೈವಲ್ಯ ಪದ್ಧತಿಯಿಂದಾಯ್ದು ಸೋದಾಹರಣವಾಗಿ ನಿರೂಪಿಸಿದ್ದು, ಅಧ್ಯಯನ ನಡೆಸಿದ್ದು ಶ್ರೇಷ್ಠ ಸಂಶೋಧನೆಗೆ ಸಾಕ್ಷಿಯಾಗಿದೆ.

'ಪಾರಿಭಾಷಿಕ ಶಬ್ದಗಳು' ಡಾ. ಸಂಗಮೇಶ ಬಿರಾದಾರವರ ಮತ್ತೊಂದು ಅಧ್ಯಯನ ಪೂರ್ಣವಾದ ಸಂಶೋಧನ ಲೇಖನ. ಈ ಲೇಖನದಲ್ಲಿ ಅವರು ಕನ್ನಡ ಭಾಷೆಯಲ್ಲಿ ಬಳಕೆಯಾದ ಬಹುತೇಕ ಪಾರಿಭಾಷಿಕ ಶಬ್ದಗಳು ಸಂಸ್ಕೃತ ಮೂಲದಿಂದಲೇ ಬಂದಿವೆ ಎನ್ನುತ್ತ ಇದಕ್ಕೆ ತಕ್ಕ ಉದಾಹರಣೆಗಳನ್ನು ನೀಡುವರು.

ಕೊನೆಯ ಅಧ್ಯಾಯ 'ಕೇಶಿರಾಜನ ಮೆಲೆ ೨ನೆಯ ನಾಗವರ್ಮನ ಪ್ರಭಾವ' ಎಂಬುವುದರಲ್ಲಿ ಕೇಶಿರಾಜನ 'ಶಬ್ದಮಣಿ ದರ್ಪಣ'ವೇ ಅಂತಿಮ ಎಂಬ ಭಾವನೆಯನ್ನು ಅಳಿಸಿ ಎರಡನೆಯ ನಾಗವರ್ಮ ಹೇಗೆ ಕೇಶಿರಾಜನ ಮೇಲೆ ಪ್ರಭಾವ ಬೀರಿದ್ದಾನೆ ಎಂದು ಹೇಳಿದ್ದು ಡಾ. ಸಂಗಮೇಶ ಬಿರಾದಾರವರ ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ವ್ಯಾಕರಣವನ್ನು ಒಳಹೊಕ್ಕು ಅಭ್ಯಸಿಸುವದರೊಂದಿಗೆ ನಿಜಕ್ಕೂ ನಮ್ಮ ಒಳಗಣ್ಣನ್ನು ತೆರೆಸಿದ್ದಾರೆ.

ಕನ್ನಡ ನವೋದಯ ಛಂದಸ್ಸು :

ಕನ್ನಡ ನವೋದಯ ಛಂದಸ್ಸು ಹೆಸರೇ ಸೂಚಿಸುವ ಹಾಗೆ ಇದು ಹೊಸಗನ್ನಡ ಛಂದಸ್ಸಿನ, ಅದರಲ್ಲಿಯೂ ನವೋದಯ ಛಂದಸ್ಸಿನ ಕುರಿತು ವಿಶೇಷ ಅಧ್ಯಯನವಾಗಿದೆ. ಇಲ್ಲಿ ಅವರ ಸಂಶೋಧನೆಯ ದೃಷ್ಟಿಯನ್ನು ನಾವು ಕಾಣಬಹುದು. ಈಗಾಗಲೇ ಈ ಕ್ಷೇತ್ರದಲ್ಲಿ ಪ್ರೊ. ತಿ.ನಂ.ಶ್ರೀ.ಯವರ 'ಸಮಾಲೋಕನ' ಡಾ. ಡಿ. ಎಸ್. ಕರ್ಕಿಯವರ 'ಕನ್ನಡ ಛಂದೋವಿಕಾಸ' ಡಾ. ಟಿ. ವ್ಹಿ. ವೆಂಕಟಾಚಲಶಾಸ್ತ್ರೀಯವರ 'ಕನ್ನಡ ಛಂದಃಸ್ವರೂಪ' ಎಂಬ ಕೃತಿಗಳನ್ನು ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿರುವ ಕನ್ನಡ ಛಂದಸ್ಸಿನ ಸಂಪುಟಗಳು ಮಹತ್ವದ ಅಧ್ಯಯನಗಳಾಗಿದ್ದು ಈ ನೆಲೆಯಲ್ಲಿ ಡಾ. ಅನಂತ ನಾರಾಯಣರವರ ಪಿ.ಎಚ್.ಡಿ. ಮಹಾಪ್ರಬಂಧ 'ಹೊಸಗನ್ನಡ ಛಂದಸ್ಸು' ಎಂಬ ಕೃತಿ

ಮೌಲಿಕವಾದದ್ದು. ಇವುಗಳಲ್ಲಿರುವ ವಿಚಾರ ಕುರಿತು ಮರು ಮೌಲ್ಯಮಾಪನದ ನೆಲೆಯಲ್ಲಿ ಡಾ. ಸಂಗಮೇಶ ಬಿರಾದಾರವರು ಗೆಳೆಯರ ಬಳಗ ತುಂಗಳ ಇವರ ಪ್ರಕಾಶನದಲ್ಲಿ ೨೦೦೭ರಲ್ಲಿ 'ಕನ್ನಡ ನವೋದಯ ಛಂದಸ್ಸು' (ಹೊಸಗನ್ನಡ ಕವಿತೆಯ ಛಂದಸ್ಸು) ಎಂಬ ಪುಸ್ತಕವನ್ನು ಹೊರತಂದಿದ್ದಾರೆ.

ಈ ಗ್ರಂಥಗಳನ್ನು ೩ ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗ ಪೀಠಿಕೆಯಾದರೆ ಎರಡನೆಯ ಭಾಗದಲ್ಲಿ ಮಾತ್ರಾಲಯಗಳನ್ನು ಹೆಸರಿಸುವುದಲ್ಲದೆ ಅದರಲ್ಲಿ ಹೊಸತನವನ್ನು ಬಳಸಲು ಪ್ರಯತ್ನಿಸಿದ್ದಾರೆ. ಉತ್ಸಾಹ, ಮಂದಾನಿಲ, ಲಲಿತ ಲಯಗಳೊಂದಿಗೆ ಉತ್ಸಾಹಲಯ, ಉತ್ಸಾಹ ಲಲಿತಲಯ, ಮಂದಾನಿಲ ಲಯ ಮಂದಾನಿಲ ಲಲಿತಲಯ, ಲಲಿತಲಯ ಲಲಿತೋತ್ಸಾಹ ಲಯ ಎಂದು ಹೊಸತನವನ್ನು ತಿಳಿಸಲು ಪ್ರಯೋಗ ಶೀಲರಾಗಿದ್ದಾರೆ. ಮೂರನೆಯ ಭಾಗ ಅಂಶ ಛಂದಸ್ಸಿನ ವಿವರಣೆಗಳನ್ನು ಒಳಗೊಂಡಿದೆ. ಇದರಲ್ಲಿ ಅಂಶಲಯಗಳನ್ನು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ.

೧) ಬ್ರಹ್ಮಲಯ
೨) ಬ್ರಹ್ಮವಿಷ್ಣುಲಯ
೩) ವಿಷ್ಣುಲಯ
೪) ವಿಷ್ಣು ರುದ್ರಲಯ

ಕನ್ನಡ ಕಾವ್ಯ ಪರಂಪರೆಯಲ್ಲಿ ಅಕ್ಷರ, ಮಾತ್ರಾ ಅಂಶಗಳೆಂಬ ಛಂದಸ್ಸು ಬಳಕೆಗೊಂಡಿದ್ದರೂ ನವೋದಯ ಭಾವಗೀತೆಗಳಲ್ಲಿ ಇಡಿಯಾಗಿ ಹೊಸಗನ್ನಡದಲ್ಲಿ ಮಾತ್ರಾ ಮತ್ತು ಅಂಶ ವೃತ್ತ (ಲಯ)ಗಳು ಅದರಲ್ಲಿಯೂ ಮಾತ್ರಾ ವೃತ್ತ (ಲಯ)ಗಳು ಅದರಲ್ಲೂ ಮಾತ್ರಾ ವೃತ್ತ (ಲಯ)ಗಳು ಅಧಿಕ ಪ್ರಮಾಣದಲ್ಲಿ ಬಳಕೆಗೊಂಡಿದೆ.

ಮೂರು ಮಾತ್ರೆಯ ಉತ್ಸಾಹ ಲಯವು ರಗಳೆ, ದ್ವಿಪದಿ, ತ್ರಿಪದಿ, ಚೌಪದಿ, ಪಂಚಪದಿ, ಷಟ್ಪದಿ, ಸಪ್ತಪದಿ, ಚತುಷಟ್ಪದಿ, ಅಷ್ಟಷಟ್ಪದಿ ರೂಪಗಳಲ್ಲಿಯೂ ಮೂರು ಮತ್ತು ನಾಲ್ಕು ಮಾತ್ರೆಯ ಮಿಶ್ರಣಗಳನ್ನೊಳಗೊಂಡ ಭಾಮಿನಿಲಯ, ದ್ವಿಪದಿ, ತ್ರಿಪದಿ, ಚೌಪದಿ, ಪಂಚಪದಿ ಷಟ್ಪದಿಗಳು ಬರುವ ಉತ್ಸಾಹ ಲಯವು ಅರ್ಧಸಮ ಚೌಪದಿ ಮತ್ತು ಸಮಚೌಪದಿಗಳಲ್ಲಿ ಬಳಕೆಗೊಂಡಿರುವುದನ್ನು ವಿವೇಚಿಸಿದ್ದಾರೆ.

ತ್ರಿಮಾತ್ರಾಗಣದ ಲಯವನ್ನು ಉತ್ಸಾಹಲಯವೆಂದು ಕರೆಯಲಾಗಿದೆ. ಅಕ್ಷರ ವೃತ್ತದಲ್ಲಿ ಉತ್ಸವವೆಂಬುದು ಒಂದು ವೃತ್ತ ಮಾತ್ರಾ ವೃತ್ತದಲ್ಲಿ ಉತ್ಸಾಹವೃತ್ತ ಉತ್ಸಾಹ ರಗಳೆಗಳೆಂದು ಪ್ರಸಿದ್ಧವಾಗಿವೆ. ಆದ್ದರಿಂದ ಈ ತ್ರಿಮಾತ್ರಾ ಗಣದ ಲಯಕ್ಕೆ ಉತ್ಸಾಹ ಲಯವೆನ್ನುವುದು ಸೂಕ್ತವಾದ ಹೆಸರು ಎಂದು ಹೇಳುತ್ತಾರೆ.

ಉತ್ಸಾಹ ದ್ವಿಪದಿ :

ಪ್ರತಿ ಪದ್ಯದಲ್ಲಿ ಎರಡು ಚರಣಗಳಿರುತ್ತವೆ. ಚರಣಗಳ ಉದ್ದಳತೆಯ ಮೇಲಿಂದ ಇದರಲ್ಲಿ ಅನೇಕ ಪ್ರಕಾರಗಳುಂಟಾಗುತ್ತವೆ.

೧ನೆಯ ಪ್ರಕಾರ :

ಪಾತರಗಿತ್ತಿ ಪಕ್ಕಾ
ನೋಡಿದೇನ ಅಕ್ಕಾ
ಹಸಿರು ಹಚ್ಚಿ ಚುಚ್ಚಿ
ಮೇಲಕರಿಷಿಣ ಹಚ್ಚಿ

– ಬೇಂದ್ರೆಯವರ : ಪಾತರಗಿತ್ತಿ

ಇದು ದ್ವಿಪದಿ ಎರಡೆರಡು ಸಾಲುಗಳಿಗೆ ಅಂತ್ಯಪ್ರಾಸವಿದೆ. ಸಾಮಾನ್ಯವಾಗಿ ಪ್ರತಿ ಸಾಲಿನಲ್ಲಿ ೨ ಮಾತ್ರೆಯ ೩ ಗಣಗಳಿರುತ್ತವೆ. ಒಮ್ಮೊಮ್ಮೆ ೩ ಮಾತ್ರೆಗೆ ಬದಲು ೪ ಮಾತ್ರೆಗಳೂ ಬರುವುದುಂಟು. ಇದು ಅತಿ ಚಿಕ್ಕ ಸಮದ್ವಿಪದಿ.

೨ನೆಯ ಪ್ರಕಾರ :

ನೇರನೇರನೇರನಿನ್ನನರಸಿಬಂದೆಹೇವಿಭೋ ।
ಬೇಗನಿನ್ನಬಳಿಗೆಬರುವತವಕದಿಂದಲಿ ।

– ವಿ. ಸೀ. : ನೆರಳು ಬೆಳಕು : ಶರಣು

ಈ ಎರಡು ಚರಣಗಳು ಪರಸ್ಪರ ಸಮಾನವಾಗಿರದೆ ವಿಷಮವಾಗಿದೆ. ಮೊದಲನೆಯ ಸಾಲಿನಲ್ಲಿ ೩ ಮಾತ್ರೆಯ ೬ ಗಣಗಳ ತರುವಾಯು ೫ ಮಾತ್ರೆಯ ಒಂದು ಗಣವಿದ್ದರೆ, ಎರಡನೆಯ ಸಾಲಿನಲ್ಲಿ ೩ ಮಾತ್ರೆಯ ೫ ಗಣಗಳ ತರುವಾಯ ೪ ಮಾತ್ರೆಯ ಒಂದು ಗಣವಿದೆ.

೩ನೆಯ ಪ್ರಕಾರ :

ತಿರುಗಿನೋಡಲೊಬ್ಬೆಯಾಚೆ ಒಬ್ಬಳಲ್ಲಿ ಹೆಣ್ಣು ಮಗಳು
ನೊರೆಯಬಿಳುಪು ಕುರಿಯಮರಿಯತಲೆಯ ತಡುವುತ್ತಿದ್ದಳು.

– ಶ್ರೀ : ಇಂಗ್ಲೀಷ ಗೀತೆಗಳು : ಕುರಿಮರಿ

ಇದು ಕೂಡ ವಿಷಮ ದ್ವಿಪದಿಯೇ. ಇಲ್ಲಿಯ ಮೊದಲನೆಯ ಚರಣದಲ್ಲಿ ೩ ಮಾತ್ರೆಯ ೮ ಗಣಗಳಿದ್ದರೆ ದ್ವಿತೀಯ ಚರಣದಲ್ಲಿ ೩ ಮಾತ್ರೆಯ ೬ ಗಣಗಳಿದ್ದು ಕೊನೆಗೊಂದು ೪ ಮಾತ್ರೆಯ ಗಣವಿರುತ್ತದೆ. ಈ ಪದ್ಯದಲ್ಲಿ ಆದಿ ಮತ್ತು ಅಂತ್ಯ ಎರಡು ಪ್ರಾಸಿಗಳಿವೆ.

ಮಾತ್ರಾಲಯದ ಅದರಲ್ಲಿಯೂ 'ಲಲಿತಲಯ'ದ ವಿವೇಚಿಯ ಸಂದರ್ಭದಲ್ಲಿ ಸರಳ ರಗಳೆ, ಮುಕ್ತ ರಗಳೆ ಮಹಾ ಛಂದಸ್ಸು ಇವುಗಳ ಕುರಿತು ಡಾ. ಸಂಗಮೇಶ ಬಿರಾದಾರವರು ಗಮನಾರ್ಹವಾದ ಸಂಗತಿಗಳನ್ನು ಪರಾಮರ್ಶಿಸಿದ್ದಾರೆ. 'ಸರಳ ರಗಳೆ' ಎಂಬುವುದು ಇಂಗ್ಲೀಷಿನ ಬ್ಲಾಂಕವ್ವರ್ಸ ರೂಪವೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಇದನ್ನು ಒಪ್ಪದ ಇವರು ಇವುಗಳ ಮಧ್ಯ ಕೆಲವು ವ್ಯತ್ಯಾಸಗಳನ್ನು ಗುರುತಿಸಿ 'ಇದು (ಸರಳ ರಗಳೆ) ಲಲಿತ ರಗಳೆ ಮತ್ತು ಬ್ಲಾಂಕವ್ವರ್ಸನಗಳ ಕಸಿಗೊಂಡ ಹೂಪ' ಎಂದಿದ್ದಾರೆ. 'ಮುಕ್ತ ರಗಳೆ' ಎಂಬ ಇನ್ನೊಂದು ಹೊಸ ಪರಿಭಾಷೆಯನ್ನು ಲೇಖಕರು ಉಳಿಸಿದ್ದು ಇದು ಸರಳ ರಗಳೆಯ ಮುಂದಿನ ಹಂತವೆಂದು ಹೇಳಿದ್ದಾರೆ.

ಮಹಾಛಂದಸ್ಸಿನ ಕುರಿತು ಡಾ. ಸಂಗಮೇಶ ಬಿರಾದಾರವರದು ಭಿನ್ನ ನಿಲವು. ಪ್ರತಿ ಚರಣಕ್ಕೆ ೨೦ ಮಾತ್ರೆಗಳಿದ್ದು ೫ ಮಾತ್ರೆಯ ೪ ಗಣಗಳು ಬರುವುದು. ಕೆಲವಡೆ ೨೦ ಮಾತ್ರೆಗೆ ಬದಲು ಹೆಚ್ಚು ಕಡಿಮೆಯಾಗುವುದು. ಪಂಚಮಾತ್ರಾಗಣಕ್ಕೆ ಬದಲು ವೈವಿಧ್ಯತೆ ಕಂಡು ಬರುವುದು ಮಹಾಛಂದಸ್ಸಿನ ಲಕ್ಷಣ.

೫ ಮಾತ್ರೆಯ ಲಯವಿರುವುದು ಇಲ್ಲಿಯ ನಿಯಮ. ಇದನ್ನು ಮೀರಿ ೨, ೬, ೭, ೮ ಮಾತ್ರೆಗಳು ಬಂದಾಗಲೂ ಬರಬಾರದಿರುವ U – ಈ ಮಾತ್ರಾಗತಿಯು ಬಂದಾಗಲೂ ಅವನ್ನು ಬೇಕೆಂದೇ ತರಲಾಗಿದೆ ಎಂದು ಸಮರ್ಥಿಸಿಕೊಂಡು ದೋಷವನ್ನು ಮರೆ ಮಾಚುವುದಾದರೆ ಅದೆಂತಹ ಪಾರದರ್ಶಕ ವಿಮರ್ಶೆಯಾದಿತು? ಹೀಗೆಯೇ ಹೇಳುತ್ತ ಹೋದರೆ ದೋಷಕ್ಕೆ ಸ್ಥಾನವೆಲ್ಲಿ? ಅತ್ಯಾದರವು ಅವಜ್ಞೆಗೆ ಕಾರಣೀಭೂತವಾಗುತ್ತದೆ. ಈ ಮಹಾಛಂದಸ್ಸಿನ ವಿಷಯದಲ್ಲಿ ಗಣ ವಿಭಜನೆಯಲ್ಲಿ U – ಈ ಗತಿಯಲ್ಲಿ ಆದುದು ಹೀಗೆಯೇ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ[೪].

ನವೋದಯ ಕವಿಗಳು ಮಾತ್ರಾಲಯದಂತೆ ಅಂಶಲಯದಲ್ಲೂ ಪದ್ಯಗಳನ್ನು ರಚಿಸಿದ್ದಾರೆ. ಭಾವಗೀತೆಗಳಲ್ಲಿ ಅದು ನಾಲ್ಕು ವಿಧವಾಗಿ ಪ್ರಕಟಗೊಂಡಿರುವುದನ್ನು ಗುರುತಿಸಿ ಅವುಗಳಿಗೆ ಬ್ರಹ್ಮಲಯ, ಬ್ರಹ್ಮವಿಷ್ಣುಲಯ, ವಿಷ್ಣು ಲಯವು, ವಿಷ್ಣು ರುದ್ರಲಯವೆಂದು ಹೆಸರಿಸಿದ್ದಾರೆ. ಬ್ರಹ್ಮಲಯವು ದ್ವಿಪದಿ, ಚೌಪದಿ, ನವಪದಿಗಳಲ್ಲಿ, ಬ್ರಹ್ಮ ವಿಷ್ಣು ಲಯವು ಚೌಪದಿ, ಪಂಚಪದಿಗಳಲ್ಲಿ, ವಿಷ್ಣುಲಯವು ಚೌಪದಿ, ತ್ರಿಪದಿ, ಸಾಂಗತ್ಯಗಳ ರೂಪದಲ್ಲಿ, ವಿಷ್ಣು ರುದ್ರಲಯ ಸಪ್ತಪದಿಯಲ್ಲಿ ಅಭಿವ್ಯಕ್ತಗೊಂಡಿರುವುದನ್ನು ವಿವೇಚಿಸಿದ್ದಾರೆ.

ಈ ಕೃತಿಯಲ್ಲಿ ಸಾಧ್ಯವಾದ ಮಟ್ಟಿಗೆ ನವೋದಯ ಪದ್ಯಗಳಲ್ಲಿ ಬಳಕೆಯಾದ ಎಲ್ಲ ರೀತಿಯ ಛಂದಸ್ಸನ್ನು ಕೊಡಲು ಪ್ರಯತ್ನಿಸಿದ್ದಾರೆ. 'ಪ್ರಯೋಗ ಶರಣಾಃ ವೈಯಾಕರಣಾಃ' ಎನ್ನುವಂತೆ ಛಂದಶಾಸ್ತ್ರಜ್ಞನೂ ಪ್ರಯೋಗ ಶರಣನೆ ಆಗಬೇಕಾಗುತ್ತದೆ ಎಂದ ಡಾ. ಸಂಗಮೇಶ ಬಿರಾದಾರವರು ನವೋದಯ ಛಂದಸ್ಸಿನ ಹರಿಕಾರರಾಗಿದ್ದಾರೆ.

ಅಡಿಟಿಪ್ಪಣಿಗಳು :

೧) ಕನ್ನಡ ನವೋದಯ ಛಂದಸ್ಸು : ಡಾ. ಸಂಗಮೇಶ ಬಿರಾದಾರ : ಪು.ಸಂ. : ೬೬

೨) ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಸಂಸ್ಥಾನಮಠ, ಸಿದ್ಧಗಿರಿ : ಡಾ. ಸಂಗಮೇಶ ಬಿರಾದಾರ : ಪು.ಸಂ. : ೧೮

೩) ಪಾರಿಜಾತ ಪುಷ್ಪಗಳ ಒಂದು ಅವಲೋಕನ : ಡಾ. ಸಿ. ಕೆ. ನಾವಲಗಿ : ಕುಂತಳ ಅಭಿನಂದನ ಗ್ರಂಥ : ಲೇಖನ : ಪು.ಸಂ. : ೨೦೯

೪) ಒರೆಗಲ್ಲು : ಡಾ. ಸಂಗಮೇಶ ಬಿರಾದಾರ : ಪು.ಸಂ. : ೨೫

ಅಧ್ಯಾಯ : ೫

ಸಮಾರೋಪ

ಅಧ್ಯಾಯ - ೫

ಸಮಾರೋಪ

ಡಾ. ಸಂಗಮೇಶ ಬಿರಾದಾರವರು ನಮ್ಮ ನಡುವೆ ಬದುಕುತ್ತಿರುವ ಹಿರಿಯ ಜೀವಿ ಹಾಗೂ ವಿದ್ವಾಂಸರು, ಕನ್ನಡ ಭಾಷೆಯಲ್ಲಿಯ ಹಳಗನ್ನಡ, ನಡುಗನ್ನಡ, ವ್ಯಾಕರಣ, ಜಾನಪದ ಮುಂತಾದ ಭಾಗಗಳನ್ನು ಸಮರ್ಥವಾಗಿ ಮಂಡಿಸುವ ವ್ಯಕ್ತಿಯೆಂದರೇ ಡಾ. ಸಂಗಮೇಶ್ವರರು. ಗ್ರಾಮೀಣ ಪ್ರದೇಶದಲ್ಲಿ ಜನ್ಮವೆತ್ತಿದ್ದರಿಂದ ಜಾನಪದವನ್ನು ಮೈಗೆ ಅಂಟಿಸಿಕೊಂಡೇ ಬಂದವರು. ಅವರ ನರನಾಡಿಗಳಲ್ಲಿ, ನಡೆನುಡಿಗಳಲ್ಲಿ, ಉಸಿರಿನಲ್ಲಿ ಜನಪದ ಹಾಸು ಹೊಕ್ಕಾಗಿದೆ. ಇದರೊಂದಿಗೆ ಕನ್ನಡ ಭಾಷೆಯ ವ್ಯಾಕರಣವನ್ನು, ಭಾಷೆಯ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದ ಅನುಭವಿಗಳಾಗಿದ್ದಾರೆ. ಕನ್ನಡ ಭಾಷೆಯ ಬಗ್ಗೆ ವ್ಯಾಕರಣದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡುವ ಕೆಲವೇ ಕೆಲವು ವಿದ್ವಾಂಸರಲ್ಲಿ ಇವರೂ ಒಬ್ಬರು. ಇದಲ್ಲದೆ ಹಳಗನ್ನಡ ಸಾಹಿತ್ಯದಲ್ಲಿ ನಿಷ್ಣಾತರು. ನಾಗವರ್ಮನ ವ್ಯಾಕರಣಗಳ ಕುರಿತು ಸಂಶೋಧನಾತ್ಮಕ ಪ್ರಬಂಧ ಮಂಡಿಸಿ ಡಾಕ್ಟರೇಟ್ ಪಡೆದವರು. ಸಾಹಿತ್ಯ ಶ್ರದ್ಧೆ, ಸಂಶೋಧನಾ ಶಕ್ತಿ, ಅಭಿವ್ಯಕ್ತಿ ಸಹಜತೆಗಳಿಗೆ ಅವರ ಕೃತಿಗಳೇ ಕನ್ನಡಿ ಹಿಡಿದಿವೆ.

ಕವಿಯಾಗಿ, ಲೇಖಕರಾಗಿ, ಸಂಶೋಧಕರಾಗಿ ಬೆಳೆದ ಡಾ. ಸಂಗಮೇಶ ಬಿರಾದಾರವರು ಸಮಕಾಲೀನ ಸಾಹಿತ್ಯವನ್ನು ತಾತ್ವಿಕ ದೃಷ್ಟಿಯಿಂದ ಸಮೀಕ್ಷಿಸುವ ಛಾತಿ ಉಳ್ಳವರು. ಅನುಭಾವಿ ಕವಿಗಳಂತೆ. ಇವರಾದರೂ ಕೂಡ ಆಧ್ಯಾತ್ಮಿಕ ದೃಷ್ಟಿಯ ಕಾವ್ಯವನ್ನು ಅಪೇಕ್ಷಿಸುವಂಥವರು ಬದುಕಿನ ನಿತ್ಯ ವ್ಯವಹಾರವನ್ನು ಆಧ್ಯಾತ್ಮಿಕ ತಳಹದಿಯ ಮೇಲೆ ರೂಡಿಸುವ ಪ್ರಯೋಗವನ್ನು ಭಾರತೀಯ ಸಾಹಿತ್ಯದಲ್ಲಿ ಹಲವರು ಮಾಡಿದ್ದಾರೆ. ಅವರ ಮಾರ್ಗದಲ್ಲಿಯೇ ಇವರು ನಡೆಯುವವರಾಗಿದ್ದಾರೆ.

ಪ್ರಾಧ್ಯಾಪಕ ವೃತ್ತಿ, ಸಾಹಿತ್ಯ ಸೇವೆಯಲ್ಲಿ ತೊಡಗಿದ ಇವರು ಅಸಂಖ್ಯಾತ ಗೆಳೆಯರ ಬಳಗವನ್ನು ಹೊಂದಿದ್ದಾರೆ. ವಿದ್ಯಾರ್ಥಿಯಾಗಿದ್ದಾಗ ಇವರ ಸಹಪಾಠಿಗಳಾಗಿದ್ದವರು ಇಂದಿಗೂ ಅವರ ಅಸಲಿ ಗೆಳೆಯರಿದ್ದಾರೆ. ಅಪಾರ ಸಂಖ್ಯೆಯಲ್ಲಿದ್ದ ಅವರ ಸಹಪಾಠಿಗಳು

ಇಂದಿಗೂ ಅವರನ್ನು ಗೌರವದಿಂದ ಕಾಣುತ್ತಾರೆ. ಅವರ ವಿಶ್ವಾಸ ನಂಬಿಕೆಗೆ ಇಂದಿಗೂ ಪಾತ್ರರಾಗಿದ್ದಾರೆ. ಇವರ ಸಹಪಾಠಿಗಳ ಪೈಕಿ ಒಬ್ಬರಾದ ಅಮೆರಿಕೆಯಲ್ಲಿ ಗಣಿತ ಪ್ರಾಧ್ಯಾಪಕರಾಗಿರುವ ಡಾ. ಎಚ್. ಪಿ. ಸಂಕಪ್ಪನವರ ಸಂಶೋಧನಾ ಜರ್ನಲ್‌ನಲ್ಲಿ ಪ್ರಕಟಿಸಿದ ತಮ್ಮ ಲೇಖನವೊಂದನ್ನು ಇವರಿಗೆ ಸಮರ್ಪಿಸಿರುವುದು ಅದಕ್ಕೊಂದು ನಿದರ್ಶನ ಸಾವಿರಾರು ಸಂಖ್ಯೆಯ ವಿದ್ಯಾರ್ಥಿ ಬಳಗ ಇವರದಾಗಿದೆ. ಅವರ ವಿದ್ಯಾರ್ಥಿ ಸಮೂಹ ವಿವಿಧ ಕ್ಷೇತ್ರಗಳಲ್ಲಿ ಇಂದು ನಾಡಿನಾದ್ಯಂತ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಬದುಕಿನ ಸಾರ್ಥಕತೆಯನ್ನು ಅವರ ವಿದ್ಯಾರ್ಥಿ ಬಳಗದಲ್ಲಿ ಕಾಣಬಹುದು. ಶರಣರ, ಸಂತರ, ಸತ್ಪುರುಷರ, ಮೇಧಾವಿಗಳ ಒಡನಾಟ ಇವರ ವ್ಯಕ್ತಿತ್ವವನ್ನು ಉನ್ನತಕ್ಕೇರಿಸಿದೆ.

ಅಂತೆಯೇ ಅವರ ಸಾಹಿತ್ಯವನ್ನು ಅಧ್ಯಯನ ಮಾಡಿದಂತೆ ಅವರ ಅಪಾರವಾದ ಸಹನೆ ಅಪರಿಮಿತವಾದ ತಾಳ್ಮೆ, ಪ್ರತಿ ಕೃತಿಯಲ್ಲೂ ಎದ್ದು ತೋರುತ್ತದೆ. ಪ್ರತಿಯೊಂದು ವಿಷಯವನ್ನು ತೂಗಿನೋಡುವ ತೌಲನಾತ್ಮಕವಾಗಿ ಅಭ್ಯಸಿಸುವ ಗುಣವನ್ನು ಹೊಂದಿದ್ದಾರೆ. ಇದರಿಂದ ಪೂರ್ವ ಕವಿಗಳ ವ್ಯಾಕರಣ ಪ್ರಕರಣಗಳನ್ನು ತಮ್ಮ ಅನುಭವದ ಮೂಸೆಯಲ್ಲಿ ಪರೀಕ್ಷಿಸಿ ಒಂದು ನಿರ್ಧಾರಕ್ಕೆ ಬಂದಿದ್ದಾರೆ.

ಅಗೆದಷ್ಟು ಚಿನ್ನ ದೊರಕುವಂತೆ ಡಾ. ಸಂಗಮೇಶ ಬಿರಾದಾರವರ ಕೃತಿಗಳನ್ನು ಅಭ್ಯಸಿಸಿದಷ್ಟು ಹೊಸ ವಿಚಾರವು ನಮ್ಮನ್ನು ಆವರಿಸುತ್ತದೆ. ಬೆಳಕಿನ ಅರಮನೆಯತ್ತ ಹೆಜ್ಜೆಯಿಟ್ಟ ಅನುಭವವಾಗುತ್ತದೆ. ಅದರ ಹಲವಾರು ಕೃತಿಗಳು ಅಭ್ಯಸಿಸಲು ಯೋಗ್ಯವಾಗಿದ್ದರೂ ನಿಗದಿತ ಅವಧಿಯಲ್ಲಿ ಕೃತಿಗಳನ್ನು ಅವಲೋಕನ ಮಾಡಬೇಕಾಗಿದ್ದರಿಂದ ಇದರಲ್ಲಿ ಕೆಲವು ವಿಮರ್ಶೆ, ಸಂಶೋಧನೆ, ಸಂಪಾದನೆಯನ್ನು ಕೃತಿಗಳನ್ನು ಅವಲೋಕನ ಮಾಡಲಾಗಿದೆ. ಕೆಲವು ಕೃತಿಗಳನ್ನು ಸಾಹಿತ್ಯ ಮತ್ತು ಸಂಶೋಧನೆಗಳ ಅವಲೋಕನ ಎಂಬ ತಲೆ ಬರಹದಡಿಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ.

'ಒರೆಗಲ್ಲು' ಪುಸ್ತಕದ ಬೆನ್ನುಡಿಯಲ್ಲಿ ಡಾ. ಸಂಗಮೇಶ ಬಿರಾದಾರವರು ಹೀಗೆ ಹೇಳುತ್ತಾರೆ. ಸಂಶೋಧಕನೆಂಬ ಹಣೆಪಟ್ಟಿ ನನಗಿಲ್ಲ, ಅದನ್ನು ನಾನು ಕಟ್ಟಿಕೊಂಡಿಲ್ಲ. ಆದರೂ ಪ್ರಸಂಗ ಸಂಶೋಧಿಸುವಂತೆ ಪ್ರೇರೇಪಿಸಿದಾಗ ಕೆಲವನ್ನು ಹುಡುಕಿ ತೆಗೆದೆ. ಹುಡುಕಿದವುಗಳನ್ನು ನೋಡಬೇಕಾದರೂ ನೋಡಿ ಪ್ರತಿಕ್ರಿಯಿಸದಿದ್ದಾಗ ಮುಜುಗುರವೆನಿಸಿತು. ರೋಷ ಆವೇಶಗೊಳ್ಳದಂತೆ ರೂಪಿಸಿದ್ದೇನೆ ಎನ್ನುವ ಇವರಲ್ಲಿ ಅಹಂಭಾವ ಒಂದಿಷ್ಟು ಇಲ್ಲ. ನಾನು ಮನಸಾ ಓದಿದ್ದು ವ್ಯಾಕರಣ, ಛಂದಸ್ಸು, ಅಲಂಕಾರ, ಕಲಿಸಿದ್ದು ಅವುಗಳನ್ನೇ ಕೃಷಿಗೈದಿದ್ದು ಅಲ್ಲಿಯೇ. ಅಲ್ಲಿ ಬೆಳೆದ ಕಾಳುಗಳನ್ನು ಆಯ್ದು ಚೀಲ ತುಂಬಿದ್ದೇನೆ. ಬೇಕಾದವರು ವಿನಿಯೋಗಿಸಿಕೊಳ್ಳಬಹುದು ಎನ್ನುವ ಇವರ ಮಾತಿಗೆ ನಾನು ಶಿರಸಾವಹಿಸಿ

ವಂದಿಸುತ್ತೇನೆ. ಮುಂಬರುವ ದಿನಮಾನಗಳಲ್ಲಿ ಇವರ ಕುರಿತು ವಿಶ್ವವಿದ್ಯಾಲಯದವರು ಸಂಶೋಧನಾರ್ಥಿಗಳು ಇನ್ನಷ್ಟು ಹೆಚ್ಚಿನ ಸಂಶೋಧನೆಗೈಯಲಿ ಎಂದು ಆಶಿಸುತ್ತಾ ಅದು ಈಡೇರಿದರೆ ನನ್ನ ಶ್ರಮ ಸಾರ್ಥಕವಾಗುತ್ತದೆ ಎಂಬ ಆಶಾ ಭಾವನೆಯನ್ನು ಹೊಂದಿದ್ದೇನೆ.

❖❖❖❖❖

ಅನುಬಂಧಗಳು

[illegible]

: ಅನುಬಂಧ – ೧ :

: ಡಾ. ಸಂಗಮೇಶ ಬಿರಾದಾರವರ ಸಾಹಿತ್ಯ ಕೃತಿಗಳು ಮತ್ತು ಸಂದ ಪ್ರಶಸ್ತಿಗಳು :

ಸ್ವತಂತ್ರ ಕೃತಿಗಳು :

* ೧೯೫೬ ಮಲತಾಯಿ : ಪ್ರಥಮ (ಹಳಗನ್ನಡ) ಕಥೆ ಪ್ರಕಟ. ಹೊಸಬೆಳಕು ನಿಯತಕಾಲಿಕೆ – ಜೆ. ಎ. ಹಾಯಸ್ಕೂಲ್, ಅಥಣಿ
* ೧೯೬೯ ಭ್ರಮರ (ಕವನ ಸಂಕಲನ)
* ೧೯೭೬ ಜನಪದದಲ್ಲಿ ಮಕ್ಕಳ ಸಾಹಿತ್ಯ
* ೧೯೭೯ ಗೆಳೆಯರ ಬಳಗ ತುಂಗಳ ಪ್ರಕಾಶನ ಪ್ರಾರಂಭ – ಚಾಪ ಹಾಕತೀವ ಡಪ್ಪಿನ ಮ್ಯಾಲ; ತರಂಗ–೧
* ೧೯೮೪ ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ
* ೧೯೮೫ ವೈಯಾಕರಣ ಎರಡನೆಯ ನಾಗವರ್ಮ
* ೧೯೯೧ ಶ್ರದ್ಧಾ ಸುಮನ
* ೧೯೯೩ ಸದ್ಗುರ ಸಮರ್ಥ
* ೧೯೯೫ ತೇರದಾಳದ ಲಾವಣಿಕಾರರು
* ೨೦೦೪ ಶ್ರೀ ಶಿವಾನಂದ ಚರಿತೆ
* ೨೦೦೪ ಗುರುಪೂರ್ಣಿಮೆ
* ೨೦೦೭ ಬಯಲ ಬಯಕೆ
* ೨೦೦೭ ಕನ್ನಡ ನವೋದಯ ಛಂದಸ್ಸು
* ೨೦೦೯ ಬಾಳಿಗೆ ಬೆಳಕಾದವರು
* ೨೦೦೯ ಒರೆಗಲ್ಲು
* ೨೦೦೯ ಊರು–ಕೇರಿ
* ೨೦೦೯ ಪಾರಿಜಾತ ಪುಷ್ಪಗಳು
* ೨೦೦೯ ಒಳಗಣ್ಣು
* ೨೦೦೯ ಶರಣರ ಆಯ್ದ ವಚನಗಳ ವ್ಯಾಖ್ಯಾನ
* ೨೦೧೦ ಮುಗಿಲ ಮರೆಯ ಮಿಂಚು
* ೨೦೧೪ ಶಿವಶರಣರ ತೇಜೋವಧೆ
* ೨೦೧೫ ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಮಹಾಸಂಸ್ಥಾನ ಮಠ, ಸಿದ್ಧಗಿರಿ

[illegible]

ಸಂಪಾದನೆಗಳು :

೧೯೮೦ ಎರಡನೆಯ ನಾಗವರ್ಮನ ಶಬ್ದಸ್ಮೃತಿ (ಸಹಯೋಗ)

೧೯೮೦ ಹಗಲು ಚುಕ್ಕೆ (ಶ್ರೀಧರ ಖಾನೋಳಕರರ ಕವನ ಸಂಕಲನ)

೧೯೮೧ ಚಾಪ ಹಾಕತೀವ ಡಪ್ಪಿನ ಮ್ಯಾಲ: ತರಂಗ–೨

೧೯೮೨ ಜಯವಂತ (ಡಾ. ಜೆ. ಎಸ್. ಕುಳ್ಳಿಯವರ ಸ್ಮಾರಕ ಸಂಪುಟ)

೧೯೮೩ ಶಾಂತಿನಾಥ ಕವಿಯ ಸುಕುಮಾರ ಕವನ ಸಂಗ್ರಹ

೧೯೮೫ ಚಿಗುರೆಲೆ ವಿವಿಧ ಲೇಖಕರ ಕವನ ಸಂಗ್ರಹ (ಸಹಯೋಗ)

೧೯೮೮ ದ್ವಾದಶ ವರ್ಷ ಮಹೋತ್ಸವ ಗೆಳೆಯರ ಬಳಗ ತುಂಗಳ ಸ್ಮರಣ ಸಂಚಿಕೆ

೧೯೯೦ ಹೊನ್ನಹೊಳೆ: ಜಮಖಂಡಿ ಅರ್ಬನ್ ಬ್ಯಾಂಕಿನ ಸುವರ್ಣ ಮಹೋತ್ಸವ ಸಂಚಿಕೆ (ಸಹಯೋಗ)

೧೯೯೭ ಓಲೆಯ ಶ್ರೀಗಿರಿ ಜಮಖಂಡಿ ಓಲೆಮಠದ ಡಾ. ಚೆನ್ನಬಸವ ಸ್ವಾಮಿಗಳ ಪೀಠಾರೋಹಣ ಸಂಚಿಕೆ (ಸಹಯೋಗ)

೨೦೦೩ ಸಮನ್ವಯಿ: ಶ್ರೀ ಷ.ಬ್ರ.ಡಾ. ಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹಿಪ್ಪರಗಿ–ಗುರುಪಟ್ಟಾಧಿಕಾರ ಸ್ಮರಣ ಸಂಚಿಕೆ (ಸಹಯೋಗ)

೨೦೦೪ ಕಾಡಸಿದ್ಧೇಶ್ವರ ಸಮಗ್ರ ವಚನಗಳು

೨೦೦೭ ಮುತ್ತಿನ ಕಂತಿ: ಮುತ್ತಿನಕಂತಿ ಮಠದ ನೂತನ ಶ್ರೀಗಳ ಪಟ್ಟಾಧಿಕಾರ ಸ್ಮರಣ ಸಂಚಿಕೆ–ಜಮಖಂಡಿ.

೨೦೦೮ ಪಂಚಮಸಾಲಿ: ಪಂಚಮಸಾಲಿ ಜಗದ್ಗುರುಗಳ ಪೀಠಾರೋಹಣ ಸ್ಮರಣ ಸಂಚಿಕೆ

೨೦೦೯ ಚಾಪ ಹಾಕತೀವ ಡಪ್ಪಿನ ಮ್ಯಾಲ: ತರಂಗ–೩ (ತೇರದಾಳ ಲಾವಣಿ ಸಂಗ್ರಹ)

೨೦೧೭ ತ್ರಿದಳ : ಸ.ಸ.ಶ್ರೀ ಬಾಹುಸಾಹೇಬ ಮಹಾರಾಜರ ಶತಮಾನೋತ್ಸವ, ರಜತಮಹೋತ್ಸವ ಮತ್ತು ಸತ್ಸಂಗಗಳ ಸ್ಮರಣೋತ್ಸವದ ಸ್ಮರಣ ಸಂಚಿಕೆ

: ಅನುಬಂಧ – ೨ :

ಡಾ. ಸಂಗಮೇಶ ಬಿರಾದಾರವರ ವೈಯಕ್ತಿಕ ವಿವರಗಳು

ಪೂರ್ಣ ಹೆಸರು : ಡಾ. ಸಂಗಮೇಶ ಮಲ್ಲನಗೌಡ ಬಿರಾದಾರ

ಜನ್ಮಸ್ಥಳ : ತುಂಗಳ. ತಾ॥ ಜಮಖಂಡಿ ಜಿ॥ ಬಾಗಲಕೋಟ

ಜನ್ಮ ದಿನಾಂಕ : ೧೫-೦೪-೧೯೩೮

* ೧೯೫೨ ಮುಲ್ಕಿ ಪರೀಕ್ಷೆ (ಈಗಿನ ೭ನೆಯ ತರಗತಿ) ಅಥಣಿ ಕೇಂದ್ರಕ್ಕೆ ಪ್ರಥಮ ಸ್ಥಾನ
* ೧೯೫೬ ಎಸ್.ಎಸ್.ಸಿ. (ಈಗಿನ ಎಸ್.ಎಸ್.ಎಲ್.ಸಿ) ಜೆ. ಎ. ಹೈಸ್ಕೂಲ್, ಅಥಣಿ
* ೧೯೬೧ ಬಿ.ಎ., ವಿಜಯ ಕಾಲೇಜ್, ವಿಜಾಪೂರ
* ೧೯೬೩ ಎಂ.ಎ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
* ೧೯೬೩-೬೪ ಶಿಕ್ಷಕ : ಕರ್ನಾಟಕ ಹಾಯ್‌ಸ್ಕೂಲ, ಬೀದರ
* ೧೯೬೪-೬೫ ಶಿಕ್ಷಕ : ಜೆ. ಎ. ಹಾಯ್‌ಸ್ಕೂಲ, ಅಥಣಿ
* ೧೯೬೪ ಸಾವಿತ್ರಿಯೊಂದಿಗೆ ಮದುವೆ
* ೧೯೬೫ ಅಧ್ಯಾಪಕನಾಗಿ ಕಲೆ ಮತ್ತು ವಿಜ್ಞಾನ ಕಾಲೇಜ, ಜಮಖಂಡಿಯಲ್ಲಿ ಸೇರ್ಪಡೆ.
* ೧೯೬೬ ರಾಜೇಂದ್ರನ ಜನನ
* ೧೯೬೮ ಸಾವಿತ್ರಿಯ ಮರಣ
* ೧೯೭೦ ಲಕ್ಷ್ಮೀದೇವಿಯೊಂದಿಗೆ ಮದುವೆ
* ೧೯೭೧ ವಿವೇಕಾನಂದನ ಜನನ
* ೧೯೭೩ ಭಾರತ, ಭಾರತೀಯರ ಜನನ
* ೧೯೭೪ ಪಿ.ಎಚ್.ಡಿ. ಪದವಿ
* ೧೯೭೫ ನಾಗವರ್ಮನ ಜನನ
* ೧೯೮೪ ಕುಂತಲ ಪ್ರೌಢ ಶಾಲೆ, ತುಂಗಳ-ಪ್ರಾರಂಭ. ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷ.
* ೧೯೯೨ ಪಿ.ಎಚ್.ಡಿ.ಗೆ ಮಾರ್ಗದರ್ಶಕ

* ೧೯೯೬ ಸೇವೆಯಿಂದ ನಿವೃತ್ತಿ
* ೧೯೯೬ ಡಾ. ಎಂ. ಎಸ್. ಮದಭಾಂವಿ : ಬಬಲಾದಿಯ ಚಿಕ್ಕಯ್ಯ ಸ್ವಾಮಿಗಳ ಜೀವನ ಮತ್ತು ಕೃತಿ ಸಮೀಕ್ಷೆ – ಪಿ.ಎಚ್.ಡಿ. ದೊರೆತುದು
* ೧೯೯೯ ಡಾ. ವಿಜಯಾ ಧಡೇದ; ಕನ್ನಡದಲ್ಲಿ ಮಹಿಳಾ ಕಾವ್ಯ ಪರಂಪರೆ ಒಂದು ಅಧ್ಯಯನ – ಪಿ.ಎಚ್.ಡಿ. ದೊರೆತುದು.
* ೧೯೯೯ ಡಾ. ಬಿ. ಎಂ. ಪಾಟೀಲ; ಡಾ. ಫ. ಗು. ಹಳಕಟ್ಟಿಯವರ ಜೀವನ ಮತ್ತು ಸಾಧನೆ – ಪಿ.ಎಚ್.ಡಿ. ದೊರೆತುದು.
* ೨೦೦೦–೨೦೦೧ ಅತಿಥಿ ಉಪನ್ಯಾಸಕ, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಬಾಗಲಕೋಟ.
* ೨೦೦೫ ಜಮಖಂಡಿ ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ. ತೇರದಾಳ
* ೨೦೦೭ ಕರ್ನಾಟಕ ಸರ್ಕಾರ ಬೀಳಗಿ ತಾಲೂಕ ರಾಜ್ಯೋತ್ಸವ ಸನ್ಮಾನ (ಸಾಹಿತ್ಯ)
* ೨೦೦೭ ಕರ್ನಾಟಕ ಸರ್ಕಾರ ಬಾಗಲಕೋಟ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ (ಸಾಹಿತ್ಯ)
* ೨೦೦೮ ಶ್ರೀ ಬಸವೇಶ್ವರ ಸಹಕಾರಿ ಬ್ಯಾಂಕ ನಿಯಮಿತ ಬಾಗಲಕೋಟ ಸಾಂಸ್ಕೃತಿಕ ಪ್ರಶಸ್ತಿ (ರಾಜ್ಯಮಟ್ಟ)
* ೨೦೦೯ ಕರ್ನಾಟಕ ಸರಕಾರ ಜಮಖಂಡಿ ತಾಲೂಕ ಗಣರಾಜ್ಯೋತ್ಸವ ಪ್ರಶಸ್ತಿ (ಕನ್ನಡ ನಾಡುನುಡಿಗಾಗಿ)
* ೨೦೧೦ ಬಾಗಲಕೋಟ ಜಿಲ್ಲೆಯ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ, ಲೋಕಾಪುರ.
* ೨೦೧೧ ಡಾ. ಬಿ. ಜಿ. ಜೋಗಿನ; ಬಾಗಲಕೋಟ ಜಿಲ್ಲೆಯ ಸ್ಥಳನಾಮಗಳು – ಪಿ.ಎಚ್.ಡಿ. ದೊರೆತುದು.

ಗ್ರಂಥ ಮತ್ತು ಲೇಖನ ಋಣ

: ಗ್ರಂಥ ಮತ್ತು ಲೇಖನ ಋಣ :

* ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್. ಎಸ್. ಶೇಷಗಿರಿರಾವ್ : ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು : ಪ್ರಕಟಣೆ ೨೦೦೪
* ಕುಂತಳ : ಡಾ. ಸಂಗಮೇಶ ಬಿರಾದಾರವರ ಅಭಿನಂದನ ಗ್ರಂಥ : ಪ್ರಕಟಣೆ ೨೦೧೧ : ಪ್ರಕಾಶಕರು : ಡಾ. ಸಂಗಮೇಶ ಬಿರಾದಾರವರ ಅಭಿನಂದನ ಸಮಿತಿ, ಜಮಖಂಡಿ
* ಜಗದ್ಗುರು ಶ್ರೀ ಕಾಡಸಿದ್ಧೇಶ್ವರ ಸಂಸ್ಥಾನಮಠ, ಸಿದ್ಧಗಿರಿ : ಗುರುಕುಲ ಫೌಂಡೇಶನ, ಸಿದ್ಧಗಿರಿ : ಪ್ರಕಟಣೆ : ೨೦೧೫
* ಪೂರ್ಣಿಮೆಯ ಬೆಳದಿಂಗಳಿನಲ್ಲಿ ಗುರುದರ್ಶನ : ಲೇಖನ : ಕುಂತಳ ಅಭಿನಂದನ ಗ್ರಂಥ : ಪ್ರೊ. ಮಲ್ಲಿಕಾರ್ಜುನ ಹುಲಗಬಾಳಿ
* ಶೃದ್ಧಾ ಸುಮನ : ಲೇಖನ : ಕುಂತಳ ಅಭಿನಂದನ ಗ್ರಂಥ : ಶ್ರೀಮತಿ ಪುಷ್ಪಾ ಎಫ್. ಬಸನಗೌಡರ
* ಜನಪದದಲ್ಲಿ ಮಕ್ಕಳ ಸಾಹಿತ್ಯ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ಶಾರದಾ ಮುಳ್ಳೂರು
* ಬೆಳಕಾದವರ ನೆನಪುಗಳು : ಲೇಖನ : ಕುಂತಳ ಅಭಿನಂದನ ಗ್ರಂಥ : ಆನಂದ ಝುಂಜರವಾಡ
* ವೈಯಾಕರಣಿ ಎರಡನೆಯ ನಾಗವರ್ಮ : ಒಂದು ಅವಲೋಕನ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ವ್ಹಿ. ಎಸ್. ಮಾಳಿ
* ಒರೆಗಲ್ಲಿನ ಒಳಗೆ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ಎಮ್. ಬಿ. ಹೂಗಾರ
* ಬಯಲ ಬಯಕೆ : ಲೇಖನ : ಕುಂತಳ ಅಭಿನಂದನ ಗ್ರಂಥ : ಪ್ರೊ. ಬಸವರಾಜ ಕಡ್ಡಿ
* ಸಮನ್ವಯಿ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ಆರ್. ಬಿ. ಚಿಲುಮಿ
* ಕಾಣದೆ ಹೋದ ಹಗಲ ಚುಕ್ಕಿ : ಲೇಖನ : ಕುಂತಳ ಅಭಿನಂದನ ಗ್ರಂಥ : ಪ್ರೊ. ಜಿ. ಎಸ್. ವಡಗಾಂವಿ
* ಅನುಭವ ಮಂಟಪದಲ್ಲಿ ಅಕ್ಕಮಹಾದೇವಿ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ಎಸ್. ಎಮ್. ಪಾನಬುಡೆ
* ಕನ್ನಡ ನವೋದಯ ಛಂದಸ್ಸು : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ಬಿ. ಎಸ್. ಬಿರಾದಾರ
* ಶ್ರೀ ಸದ್ಗುರು ಶಿವಾನಂದ ಚರಿತೆ : ಲೇಖನ : ಕುಂತಳ ಅಭಿನಂದನ ಗ್ರಂಥ : ಡಾ. ವಿಜಯಶ್ರೀ ಹಿರೇಮಠ